

REPUBLIC DAY

ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ5 | ಜನವರಿ25–31, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com

ನಾಗರಿಕ ಹಕ್ಕುಗಳಿಗಾಗಿ ಗಣರಾಜ್ಯ ದಿನದ ಸಂಕಲ್ಪ

ವಿಶೇಷ ವರದಿ





ರೈತರ ದೆಹಲಿಯ ಕದನ ಕಣದಿಂದ









ರೈತರ ಪ್ರತಿಭಟನೆ : ಕೆಲವು ಪ್ರಶ್ನೆಗಳು



'ತುರ್ತು' ಪರಿಸ್ಥಿತಿಯಲ್ಲಿ ಬಿಡೆನ್-ಕಮಲಾ ಪದಗ್ರಹಣ

ನಾಚಿಕೆ ಇಲ್ಲದ ನಾಯಕರು



ಕೃಷಿ ಕಾಯ್ದೆಗಳನ್ನು 18 ತಿಂಗಳು ತಡೆಹಿಡಿಯಲು ಮುಂದಾದ ಸರಕಾರ ರದ್ಧತಿಗೆ ಮತ್ತು ಎಂಎಸ್‌ಪಿ ಕಾಯ್ದೆಗೆ ರೈತರ ಆಗ್ರಹದ ಪುನರುಚ್ಚಾರ



ಜನವರಿ 20 ರಂದು ಕೇಂದ್ರ ಸರಕಾರ ಮತ್ತು ರೈತರ ಪ್ರತಿನಿಧಿಗಳ ನಡುವೆ ನಡೆದ ಮಾತುಕತೆಗಳ 10ನೇ ಸುತ್ತಿನಲ್ಲಿ ಸರಕಾರ ಮೂರು ಕೃಷಿ ಕಾಯ್ದೆಗಳನ್ನು 18 ತಿಂಗಳ ವರೆಗೆ ತಡೆಹಿಡಿಯುವ ಮತ್ತು ಈ ನಡುವೆ ರೈತರ ಪ್ರತಿನಿಧಿಗಳೂ ಕೂಡ ಇರುವ ಒಂದು ಸಮಿತಿಯನ್ನು ರಚಿಸಿ ಒಂದು ಇತ್ಯರ್ಥಕ್ಕೆ ಬರುವ ಪ್ರಸ್ತಾವವನ್ನು ಮುಂದಿಟ್ಟಿತ್ತು. ಜನವರಿ 21ರಂದು ಸಭೆ ಸೇರಿದ ಸಂಯುಕ್ತ ಕಿಸಾನ್ ಮೋರ್ಚಾದ ಸರ್ವಸದಸ್ಯರ ಸಭೆ ಸರಕಾರದ ಈ ಪ್ರಸ್ತಾವವನ್ನು ತಿರಸ್ಕರಿಸುತ್ತ, ಈ ಮೂರು ಕಾಯ್ದೆಗಳನ್ನು ರದ್ದು ಮಾಡಬೇಕು ಮತ್ತು ಕನಿಷ್ಠ ಬೆಂಬಲ ಬೆಲೆ ವ್ಯವಸ್ಥೆಗೆ ಕಾನೂನಿನ ರೂಪ ಕೊಡಬೇಕೆಂಬ ರೈತರ ಮೂಲ ಬೇಡಿಕೆಗಳನ್ನು ಪುನರುಚ್ಚರಿಸಿತು.

ಸಂಸತ್ತು ಪಾಸು ಮಾಡಿರುವ ಒಂದು ಕಾಯ್ದೆಯನ್ನು ತಡೆ ಹಿಡಿಯುವ ಅಧಿಕಾರ ಸರಕಾರ ಮತ್ತು ಸುಪ್ರಿಂ ಕೋರ್ಟ್ ಕೂಡ ಸೇರಿದಂತೆ ಯಾರಿಗೂ ಅಲ್ಲ. ಆದ್ದರಿಂದ ಸರಕಾರದ ಈ ಪ್ರಸ್ತಾವವೇ ಕಾನೂನುಬಾಹಿರವಾಗಿದೆ ಎಂದು ಅಖಿಲ ಭಾರತ ಕಿಸಾನ್ ಸಭಾದ ಹಣಕಾಸು ಕಾರ್ಯದರ್ಶಿ ಪಿ.ಕೃಷ್ಣಪ್ರಸಾದ್ ಹೇಳಿದ್ದಾರೆ. ಸರಕಾರದ ಉಳಿದಿರುವ ಏಕೈಕ ದಾರಿಯೆಂದರೆ ಮತ್ತೆ ಸಂಸತ್ತಿಗೆ ಹೋಗಿ ಈ ಕಾಯ್ದೆಗಳನ್ನು ರದ್ದು ಮಾಡುವುದಾಗಿ ಹೇಳುವುದು ಎಂದು ಅವರು ಹೇಳಿದ್ದಾರೆ.

ಜನವರಿ 22 ರಂದು ನಡೆದ 11ನೇ ಸುತ್ತಿನ ಮಾತುಕತೆಗಳಲ್ಲಿ ಕೇಂದ್ರ ಸರಕಾರದ ಮಂತ್ರಿಗಳು ತಮ್ಮ ಪ್ರಸ್ತಾವವನ್ನು ತಿರಸ್ಕರಿಸುವ ನಿರ್ಧಾರವನ್ನು ಮರುಪರಿಶೀಲಿಸಬೇಕು ಎಂದು ರೈತ ಮುಖಂಡರನ್ನು ಕೋರಿರುವುದಾಗಿ ವರದಿಯಾಗಿದೆ.

ಹುತಾತ್ಮರ ಸಂಖ್ಯೆ 143

ರೈತರು ದೇಶದ ರಾಜಧಾನಿಯ ಗಡಿಗಳಲ್ಲಿ ನಡೆಸುತ್ತಿರುವ ಧರಣಿಯ 58ನೇ ದಿನದಂದು ನಡೆದ ಈ ಸರ್ವ ಸದಸ್ಯರ ಸಭೆ ಈ ಹೋರಾಟ ಆರಂಭವಾದಂದಿನಿಂದ ಇದುವರೆಗೆ 143 ರೈತ ಸಂಗಾತಿಗಳು ಪ್ರಾಣ ಕಳಕೊಂಡಿದ್ದಾರೆ ಎನ್ನುತ್ತ ಅವರಿಗೆ ಶ್ರದ್ಧಾಂಜಲಿ ಅರ್ಪಿಸಿತು, ಅಗಲಿದ ಈ ಸಂಗಡಿಗರ ತ್ಯಾಗ ವ್ಯರ್ಥವಾಗುವುದಿಲ್ಲ, ಈ ಕೃಷಿಕಾಯ್ದೆಗಳನ್ನು ರದ್ದು ಮಾಡಿಸದೆ ಹಿಂದಿರುಗುವುದಿಲ್ಲ ಎಂದು ಸಭೆ ಹೇಳಿತು.

ಜನವರಿ 26ರ ಕಿಸಾನ್-ಮಜ್ದೂರ್ ಗಣತಂತ್ರ ಪರೇಡನ್ನು ಹೊರ ವರ್ತುಲ ರಸ್ತೆಯಲ್ಲಿ ನಡೆಸುವ ಕಾರ್ಯಕ್ರಮವನ್ನು ಕೈಬಿಡುವಂತೆ ದಿಲ್ಲಿ ಪೋಲೀಸ್ ಮನವಿ ಮಾಡಿದೆ. ಆದರೆ ಇದನ್ನು ನಡೆಸಲು ಅನುಮತಿಯ ಬಗ್ಗೆ ದಿಲ್ಲಿ ಪೋಲೀಸ್ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಲಾಗುತ್ತಿದೆ ಎಂದು ಸಂಯುಕ್ತ ಕಿಸಾನ್ ಮೋರ್ಚಾ ಹೇಳಿದೆ.

ಈ ಪರೇಡನ್ನು ತಡೆಯಬೇಕು ಎಂದು ದಿಲ್ಲಿ ಪೋಲೀಸ್ ಸುಪ್ರಿಂ ಕೋರ್ಟಿನಲ್ಲಿ ಅರ್ಜಿ ಸಲ್ಲಿಸಿತ್ತು. ಆದರೆ ಇದು ಕಾನೂನು ವ್ಯವಸ್ಥೆಯ ಪ್ರಶ್ನೆ, ಸರಕಾರ ಮತ್ತು ಅದರ ಪೋಲೀಸ್ ಇಲಾಖೆಯೇ ನಿರ್ಧರಿಸಬೇಕು ಎನ್ನುತ್ತ ನ್ಯಾಯಾಲಯ ಅರ್ಜಿಯನ್ನು ಹಿಂತೆಗೆದುಕೊಳ್ಳಲು ಹೇಳಿದೆ.

ರೈತರ ಈ ಶಾಂತಿಯುತ ಪ್ರತಿಭಟನೆ ಒಂದು ದೇಶವ್ಯಾಪಿ ಜನತಾ ಆಂದೋಲನವಾಗುತ್ತಿದೆ. ಕರ್ನಾಟಕ, ಕೇರಳ ಮತ್ತು ಇತರೆಡೆಗಳಲ್ಲಿ ಕಿಸಾನ್ ಗಣರಾಜ್ಯ ದಿನದ ಪರೇಡುಗಳಿಗೆ ಸಿದ್ಧತೆಗಳು ನಡೆಯುತ್ತಿವೆ. ಉತ್ತರಾಖಂಡದ ರೈತರು ದಿಲ್ಲಿಯ ಕಿಸಾನ್ ಗಣತಂತ್ರ ಪರೇಡಿನಲ್ಲಿ ಭಾಗವಹಿಸಲು ದಿಲ್ಲಿಗೆ ಬರುತ್ತಿದ್ದಾರೆ, ಕೇರಳ ಮತ್ತು ಒಡಿಶಾದಿಂದ ಈಗಾಗಲೇ ಬಂದಿದ್ದಾರೆ. ಒಡಿಶಾದ ನವನಿರ್ಮಾಣ್ ಕಿಸಾನ್ ಸಂಘಟನ್‌ದಿಲ್ಲಿ ಚಲೋ ಯಾತ್ರಾಕ್ಕೆ ಉತ್ತರಪ್ರದೇಶದಲ್ಲಿ ಹಲವೆಡೆಗಳಲ್ಲಿ ಅಲ್ಲಿನ ಸರಕಾರ ಅಡೆ-ತಡೆಗಳನ್ನು ಒಡ್ಡುತ್ತಿದೆ, ಮಾರ್ಗ ಬದಲಿಸುವಂತೆ ಹೇಳಲಾಗುತ್ತಿದೆ, ಅವುಗಳ ಸಾರ್ವಜನಿಕ ಸಭೆಗಳನ್ನು ತಡೆಯಲಾಗುತ್ತಿದೆ ಎನ್ನುತ್ತ ಸಂಯುಕ್ತ ಕಿಸಾನ್ ಮೋರ್ಚಾ ಇದನ್ನು ಖಂಡಿಸಿದೆ.

ಕಿಸಾನ್ ಮಹಿಳಾ ದಿನಾಚರಣೆ ಮತ್ತು ಮಹಾಪಡಾವ್

ಜನವರಿ 18 ರಂದು ಸಂಯುಕ್ತ ಕಿಸಾನ್ ಮೋರ್ಚಾದ ಕರೆಯಂತೆ ದಿಲ್ಲಿಯ ಸುತ್ತಲಿನ ಗಡಿಗಳಲ್ಲಿ ಮತ್ತು ದೇಶಾದ್ಯಂತ ಕಿಸಾನ್ ಮಹಿಳಾ ದಿನಾಚರಣೆ ನಡೆದಿದೆ. ದೇಶದ ಆರು ರಾಷ್ಟ್ರೀಯ ಮಹಿಳಾ ಸಂಘಟನೆಗಳ ಕರೆಯ ಮೇರೆಗೆ ಅವುಗಳ ಸದಸ್ಯೆಯರೂ ಈ ದಿನಾಚರಣೆಯಲ್ಲಿ ಭಾಗವಹಿಸಿದ್ದಾರೆ.

ಕೊಲ್ಕತಾದಲ್ಲಿ ಜನವರಿ 20 ರಂದು ಮೂರು ದಿನಗಳ ಮಹಾಪಡಾವ್ ಆರಂಭವಾಗಿದೆ. ಇದರಲ್ಲಿ ರೈತರಲ್ಲದೆ ಸಾವಿರಾರು ಮಂದಿ ಭಾಗವಹಿಸುತ್ತಿದ್ದಾರೆ. ಇನ್ನೊಂದು ಮಹಾನಗರ ಮುಂಬಯಿಯಲ್ಲಿ ಇದಕ್ಕೆ ಸಿದ್ದತೆಗಳು ನಡೆದಿವೆ.



ತ್ರಿಪುರಾದಲ್ಲಿ ಸಿಪಿಐ(ಎಂ) ಮತ್ತು ವಿಪಕ್ಷಗಳ ಮೇಲೆ ಬಿಜೆಪಿ ಮಂದಿಯ ಹಿಂಸಾತ್ಮಕ ಹಲ್ಲೆಗಳು-ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ತ್ರಿಪುರಾದಲ್ಲಿ ಬಿಜೆಪಿಯ ಸಮಾಜ-ಘಾತುಕ ಶಕ್ತಿಗಳು ಸಿಪಿಐ(ಎಂ) ಮುಖಂಡರು, ಕಾರ್ಯಕರ್ತರು ಮತ್ತು ಕಚೇರಿಗಳ ಮೇಲೆ ಮತ್ತೆ ಹಿಂಸಾಚಾರ ಆರಂಭಿಸಿವೆ. ಜನವರಿ 17ರಂದು ಪಕ್ಷದ ಸ್ಥಳೀಯ ಸಮಿತಿ ಕಚೇರಿ ಮತ್ತು ಅಲ್ಲಿದ್ದ ಕಾರ್ಯಕರ್ತರ ಮೇಲೆ ದೈಹಿಕ ದಾಳಿ ನಡೆಸಿದಾಗ ಅಲ್ಲಿಗೆ ಹೋದ ಪಕ್ಷದ ರಾಜ್ಯಸಮಿತಿಯ ಸದಸ್ಯೆ, ರಾಜ್ಯ ಜನವಾದಿ ಮಹಿಳಾ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಮತ್ತು ರಾಜ್ಯಸಭಾ ಸದಸ್ಯೆಯೂ ಆದ ಜರ್ನಾ ದಾಸ್ ಬೈದ್ಯ ಮತ್ತು ಅವರ ಭದ್ರತಾ ಅಧಿಕಾರಿ ಮೇಲೂ ಹಲ್ಲೆ ನಡೆಸಿ ಗಂಭೀರವಾಗಿ ಗಾಯಗೊಳಿಸಿದ್ದಾರೆ. ಅವರ ನಿವಾಸದ ಮೇಲೂ ದಾಳಿ ಮಾಡಿ ಹಾಳುಗೆಡವಿದ್ದಾರೆ ಮತ್ತು ನಗದೂ ಸೇರಿದಂತೆ ಬೆಲೆಬಾಳುವ ವಸ್ತುಗಳನ್ನು ಕದ್ದೊಯ್ದಿದ್ದಾರೆ ಎಂದು ಈ ಹಿಂಸಾ ಕೃತ್ಯವನ್ನು ಖಂಡಿಸುತ್ತ ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ಸಿಪಿಐ(ಎಂ)ನ ಸಬ್‌ಡಿವಿಜನ್ ಸಮಿತಿಯ ಕಾರ್ಯದರ್ಶಿ ಮತ್ತು ಕಾಂಗ್ರೆಸಿನ ಅಧ್ಯಕ್ಷರ ಮೇಲೂ ಹಲ್ಲೆಗಳು ನಡೆದಿವೆ.

ಬಿಜೆಪಿ ರಾಜ್ಯಸರಕಾರ ಕಾನೂನು ವ್ಯವಸ್ಥೆ ಕಾಪಾಡುವ ತನ್ನ ಕರ್ತವ್ಯವನ್ನು ನೆರವೇರಿಸುವ ಬದಲು ವಿಪಕ್ಷಗಳ ಮೇಲೆ ಈ ರೀತಿ ಹಲ್ಲೆ ನಡೆಸುತ್ತಿರುವವರಿಗೆ ಕೃಪಾಪೋಷಣೆ ಒದಗಿಸುತ್ತಿದೆ, ತ್ರಿಪುರಾದ ಜನತೆ ಇಂತಹ ಪ್ರಜಾಪ್ರಭುತ್ವ-ವಿರೋಧಿ ಹಿಂಸಾಚಾರವನ್ನು ಸಹಿಸುವುದಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಎಚ್ಚರಿಸಿದೆ.

ಜನವರಿ 20ರಂದು ಎಡರಂಗದ ಶಾಸಕರು ಪ್ರತಿಪಕ್ಷದ ಮುಖಂಡರೂ, ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರೂ ಆಗಿರುವ ಮಾಣಿಕ್ ಸರ್ಕಾರ್ ಅಗರ್ತಲಾದ ಬೀದಿಗಳಲ್ಲಿ ಬಿಜೆಪಿ ಸರಕಾರದ ದುರಾಡಳಿತದ ವಿರುದ್ಧ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಹಲ್ಲೆಕೋರರನ್ನು ಬಂಧಿಸಿ- ಎಐಡಿಡಬ್ಲ್ಯುಎ ಆಗ್ರಹ

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ)ತನ್ನ ರಾಷ್ಟ್ರೀಯ ಜಂಟಿ ಕಾರ್ಯದರ್ಶಿ ಮತ್ತು ತ್ರಿಪುರಾ ರಾಜ್ಯ ಕಾರ್ಯದರ್ಶಿ ಜರ್ನಾ ದಾಸ್ ಬೈದ್ಯ ಅವರ ಮೇಲೆ ಕೊಲೆಗಡುಕ ದಾಳಿ ನಡೆದಿದೆ ಎಂದು ಬಲವಾಗಿ ಖಂಡಿಸಿದೆ. ಹಾಲಿ ರಾಜ್ಯಸಭಾ ಸದಸ್ಯರೂ ಆಗಿರುವ ಇವರ ಮೇಲೆ 30 ಬಿಜೆಪಿ ಪುಂಡರಿದ್ದ ಒಂದು ಗ್ಯಾಂಗ್ ಹಲ್ಲೆ ನಡೆಸಿತು. ಲಾಟಿ, ಹಾಕಿಸ್ಟಿಕ್ ಮತ್ತು ಕಬ್ಬಿಣದ ರಾಡ್‌ಗಳನ್ನು ಹಿಡಿದಿದ್ದ ಈ ಪುಂಡರು ಅವರ ಮನೆಯೊಳಕ್ಕೆ ನುಗ್ಗಿ ಮನೆಯೊಳಗಿದ್ದ ವಸ್ತುಗಳನ್ನು ಹಾಳುಗೆಡವಿದ್ದಲ್ಲದೆ, ಕಳ್ಳತನವನ್ನೂ ಮಾಡಿದರು. ಅವರ ವೈಯಕ್ತಿಕ ಅಂಗರಕ್ಷಕರು ತೀವ್ರವಾಗಿ ಗಾಯಗೊಂಡುದರಿಂದ ಆಸ್ಪತ್ರೆಗೆ ಸೇರಿಸಬೇಕಾಗಿ ಬಂತು ಎಂದು ಎಐಡಿಡಬ್ಲ್ಯುಎ ಹೇಳಿದೆ.

ಈ ಎಲ್ಲ ಹಲ್ಲೆಕೋರರನ್ನು ತಕ್ಷಣವೇ ಬಂಧಿಸಬೇಕು, ಮತ್ತು ಕರ್ತವ್ಯಲೋಪ ಎಸಗಿದ ಪೋಲೀಸ್ ಅಧಿಕಾರಿಗಳ ಮೇಲೆ ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಬೇಕು ಎಂದು ಎಐಡಿಡಬ್ಲ್ಯುಎ ಆಗ್ರಹಿಸಿದೆ.



ಅಂಬಾನಿ ಮತ್ತು ಅದಾನಿಗಳ ತನಿಖೆಯ ಬದಲು ಪತ್ರಕರ್ತರ ಬಂಧನ -ಇಇಎಫ್‌ಐ ಖಂಡನೆ

ಇಂಧನ ವಲಯದಲ್ಲಿ ಅದಾನಿ, ಅಂಬಾನಿಗಳ ಲಾಭಕೋರತನದ ಹಗರಣಗಳನ್ನು ಮತ್ತು ಅವಕ್ಕೆ ಸರಕಾರದ ಕಾನೂನುಬಾಹಿರ ಬೆಂಬಲವನ್ನು ಅನಾವರಣಗೊಳಿಸಲು ಪ್ರಯತ್ನಿಸುತ್ತಿರುವ ಹಿರಿಯ ಪತ್ರಕರ್ತ ಪರಂಜೊಯ್ ಗುಹಾ ಠಾಕುರ್ತ ಅವರ ವಿರುದ್ಧ ಗುಜರಾತಿನ ನ್ಯಾಯಾಲಯವೊಂದು ಬಂಧನ ವಾರಂಟ್ ಹೊರಡಿಸಿದೆ ಎಂದು ವರದಿಯಾಗಿದ್ದು ಈ ಬಗ್ಗೆ ವಿದ್ಯುತ್ ನೌಕರರ ಒಕ್ಕೂಟ ಇಇಎಫ್‌ಐ ಆತಂಕ ವ್ಯಕ್ತಪಡಿಸಿದೆ. ಒಬ್ಬ ಪ್ರತಿಷ್ಠಿತ ಪತ್ರಕರ್ತರ ವಿರುದ್ಧ ಇಂತಹ ನಡೆ ಸರಿಯಲ್ಲ ಎಂದು ಎಡಿಟರ್ಸ್ ಗಿಲ್ಡ್ ಕೂಡ ಖಂಡಿಸಿದೆ ಎಂದು ವರದಿಯಾಗಿದೆ.

ಜೂನ್ 2017ರಲ್ಲಿ ಪ್ರತಿಷ್ಠಿತ ಪತ್ರಿಕೆ 'ಇಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ(ಇಪಿಡಬ್ಲ್ಯು)ಯಲ್ಲಿ ಪ್ರಕಟವಾದ ಠಾಕುರ್ತಾ ಅವರ ಲೇಖನ ಅದಾನಿ ಪವರ್‌ಕಂಪನಿ ವಿದ್ಯುತ್ತಿನ ದರವನ್ನು ಹೆಚ್ಚಿಸಿಕೊಳ್ಳಲು ಗುಜರಾತಿನ ಮುಂದ್ರಾದಲ್ಲಿರುವ ತನ್ನ ಕರಾವಳಿ ವಿದ್ಯುತ್ ಸ್ಥಾವರದಲ್ಲಿ ಬಳಸಲು ಆಮದು ಮಾಡಿದ ಕಲ್ಲಿದ್ದಲಿನ ಬೆಲೆಯನ್ನು ಹಿಗ್ಗಿಸಿ ತೋರಿಸುವ ಕ್ರಮಗಳನ್ನು ಕುರಿತಾಗಿತ್ತು. ಇದರ ವಿರುದ್ಧ ಅದಾನಿ ಕಂಪನಿ ಠಾಕುರ್ತ ಮೇಲೆ ಮಾನನಷ್ಟ ಮೊಕದ್ದಮೆಯನ್ನು ಹಾಕಿತ್ತು.

ವಿದ್ಯುತ್, ಕಲ್ಲಿದ್ದಲು ಮತ್ತು ಅನಿಲ ಈ ಮೂರು ಇಂಧನ ಕ್ಷೇತ್ರಗಳಲ್ಲಿ ಅಂಬಾನಿ ಮತ್ತು ಅದಾನಿ ಕಂಪನಿಗಳು ಭಾರತದ ಜನತೆಯನ್ನು ಲೂಟಿ ಮಾಡುತ್ತಿದ್ದಾರೆ, ಅದನ್ನು ಪತ್ತೆ ಹಚ್ಚಿ ಅವರನ್ನು ಶಿಕ್ಷಿಸಬೇಕಾದ ಸರಕಾರ ಅವರ ಲೂಟಿಯನ್ನು ಬೆಂಬಲಿಸುತ್ತಿದೆ ಎಂದು ಇಇಎಫ್‌ಐ ಖೇದ ವ್ಯಕ್ತಪಡಿಸಿದೆ. ಠಾಕುರ್ತ ಅವರು ಅಧ್ಯಯನ ಮಾಡಿದ ಮುಂದ್ರಾ ಪವರ್ ಕಂಪನಿ ಇಂತಹ ಲೂಟಿಗೆ ಒಂದು ಉದಾಹರಣೆಯಷ್ಟೇ. ಸರಕಾರ ಈ ಪರ್ತಕರ್ತರನ್ನು ಬಂಧಿಸುವ ಬದಲು, ಅವರು ಮುಂದಿಟ್ಟಿರುವ ಮಾಹಿತಿಗಳ ಆಧಾರದ ಮೇಲೆ ಸ್ವತಂತ್ರ ತನಿಖೆಯನ್ನು ನಡೆಸಬೇಕು ಎಂದು ಇಇಎಫ್‌ಐ ಆಗ್ರಹಿಸಿದೆ.

ಸಂಪಾದಕೀಯ

ನಾಚಿಕೆ ಇಲ್ಲದ ನಾಯಕರು !

ಮುಖ್ಯ ಮಂತ್ರಿ ಯಡಿಯೂರಪ್ಪನವರು ರಾಜ್ಯ ಸಚಿವ ಸಂಪುಟವನ್ನು ವಿಸ್ತರಣೆ ಮಾಡಿದ ಬಳಿಕ ಮೂಲ ಬಿಜೆಪಿ ಶಾಸಕರ ಅಸಮಾಧಾನ ತಾರಕ್ಕೇರಿದೆ. ಇದರೊಂದಿಗೆ ಕೆಲವು ಹಿರಿಯ ಸಚಿವರ ಖಾತೆ ಬದಲಾವಣೆಗೆ ಮುಖ್ಯ ಮಂತ್ರಿ ಕೈ ಹಾಕಿದ್ದರಿಂದ ಹಿರಿಯ ಸಚಿವರು ಮುನಿಸಿಕೊಂಡಿರುವುದು ಗುಟ್ಟಾಗಿ ಉಳಿದಿಲ್ಲ. ಇದರ ಪರಿಣಾಮ ಮುಂದೆ ಏನಾಗಲಿದೆ ಎಂಬುದನ್ನು ಕಾದು ನೋಡಬೇಕು. ಯಡಿಯೂರಪ್ಪನವರ ಮಟ್ಟಿಗೆ ಖಾತೆಗಳ ಹಂಚಿಕೆ ಮುಗಿದಿದ್ದರೂ ಅದರ ಬಗೆಗಿನ ಅತೃಪ್ತಿಯು ಯಡಿಯೂರಪ್ಪನವರು ಅಂದುಕೊಂಡಂತೆ ಅಷ್ಟು ಸುಲಭವಾಗಿ ಬಗೆಹರಿಯಲಾರದು.

ಯಾರಿಗೆ ಯಾವ ಖಾತೆ ನೀಡಬೇಕು ಎಂಬುದು ಮುಖ್ಯಮಂತ್ರಿಯವರ ಅಧಿಕಾರ ಎಂದು ಎಲ್ಲರೂ ಹೇಳುತ್ತಾರೆ. ಬಿಜೆಪಿಗಳು ಸಹ ಅದೇ ಮಂತ್ರವನ್ನು ಪಠಿಸುತ್ತಿರುತ್ತಾರೆ. ಆದರೆ ಅದೇ ಬಿಜೆಪಿ ಪಕ್ಷದಲ್ಲಿ ಪ್ರತಿಯೊಂದು ವಿಷಯದಲ್ಲೂ ಆರೆಸ್ಸೆಸ್ ಹಸ್ತಕ್ಷೇಪ ಮಾಡುತ್ತಿರುವುದನ್ನು ರಾಜ್ಯದ ಜನ ಆತಂಕದಿಂದಲೇ ಗಮನಿಸುತ್ತಾ ಬಂದಿದ್ದಾರೆ. ಇದರ ಜೊತೆಯಲ್ಲಿ ಕೇಂದ್ರದ ಕೆಲವು ಘಟಾನುಘಟ ಸಚಿವರು ಪ್ರಧಾನ ಮಂತ್ರಿ ಸಲಹೆಯಂತೆ ರಾಜ್ಯ ಸರ್ಕಾರದ ಆಗು ಹೋಗುಗಳಲ್ಲಿ ಒಳಗೊಳಗೆ ಮಧ್ಯಪ್ರವೇಶ ಮಾಡುತ್ತಾರೆ. ಬಿಜೆಪಿ ಗಣಗಳು ಇದನ್ನು ಯಾವ ವೇದಿಕೆಯಲ್ಲೂ ಪ್ರಸ್ತಾಪಿಸುವುದಿಲ್ಲ.

ಬಿಜೆಪಿ ತನ್ನನ್ನು ಒಂದು ಮಾದರೀ ರಾಜಕೀಯ ಪಕ್ಷ ಎಂದು ಅಂದುಕೊಳ್ಳುತ್ತದೆ. ಆದರೆ ಆ ಪಕ್ಷದೊಳಗೆ ಸಚಿವ ಸ್ಥಾನಕ್ಕಾಗಿ ನಡೆಯುವ ಕಚ್ಚಾಟ ಕಿತ್ತಾಟವನ್ನು ನೋಡಿದರೆ ಯಾರು ಯಾರಿಗೆ ಮಾದರಿ ಎಂಬ ಪ್ರಶ್ನೆ ಎದ್ದು ನಿಲ್ಲುತ್ತದೆ. ಬಿಜೆಪಿಯಲ್ಲಿರುವ ಎಲ್ಲಾ ಶಾಸಕರಿಗೂ ಸಚಿವರಾಗಬೇಕೆಂಬ ಹಂಬಲ. ಅದನ್ನು ಸಾಧಿಸಲು ಅವರು ಏನು ಬೇಕಾದರೂ ಮಾಡಲು ಸಿದ್ಧ. ಪ್ರತಿ ಸಲ ಸಂಪುಟ ವಿಸ್ತರಣೆಯಾದಾಗ ಅವರು ಎದ್ದು ನಿಲ್ಲುತ್ತಾರೆ. ಮುಖ್ಯಮಂತ್ರಿಗಳ ಬಲಹೀನತೆ, ನ್ಯೂನತೆಗಳನ್ನು ಬಳಸಿಕೊಳ್ಳಲೂ ಹೇಸುವುದಿಲ್ಲ. ಎಲ್ಲರೂ ಹೆಚ್ಚು ಲಾಭದಾಯಕವಾದ ದಪ್ಪ ಗಾದಿಗಳನ್ನೇ ಬಯಸುತ್ತಾರೆ. ಜಾತಿ ಆಧಾರದಲ್ಲಿ ಲಾಬಿ ಮಾಡುತ್ತಾರೆ. ಗುಂಪುಗಾರಿಕೆ ಮಾಡಿ ಸರ್ಕಾರವನ್ನು ಉರುಳಿಸುವ ಬೆದರಿಕೆ ಹಾಕುತ್ತಾರೆ. ಈ ಮೂಲಕ ತಾವು ಇನ್ನುಳಿದವರಂತೆ ಉಪ್ಪು ಖಾರ ಉಣ್ಣುವವರೇ ಆಗಿದ್ದೇವೆ ಎಂಬುದನ್ನು ಒಪ್ಪಿಕೊಳ್ಳಲು ಹೇಸುವುದಿಲ್ಲ. ಇವರು ನಾಚಿಕೆ ಇಲ್ಲದ ನಾಯಕರು! ಇವರು ಯಾರಿಗೂ ಮಾದರಿಯಾಗಲು ಸಾಧ್ಯವಿಲ್ಲ.

ಕೇರಳದಲ್ಲಿ ಸಿಪಿಐ(ಎಂ) ನೇತೃತ್ವದ ಎಡ ಪ್ರಜಾಸತ್ತಾತ್ಮಕ ರಂಗ (ಎಲ್‌ಡಿಎಫ್)ದ ಸರ್ಕಾರವಿದೆ. ಸ್ವಾತಂತ್ರ್ಯಾ ನಂತರ ಅನೇಕ ಬಾರಿ ಅಲ್ಲಿ ಎಲ್‌ಡಿಎಫ್ ಸರ್ಕಾರ ಅಧಿಕಾರಕ್ಕೆ ಬಂದಿದೆ. ಆದರೆ ಅಲ್ಲಿ ಒಮ್ಮೆಯೂ ಶಾಸಕರು ಮಂತ್ರಿ ಸ್ಥಾನಕ್ಕಾಗಿ ಜಗಳಾಡಿದ ಉದಾಹರಣೆ ಇಲ್ಲ. ಮುಖ್ಯ ಮಂತ್ರಿ ವಹಿಸಿಕೊಡುವ ಜವಾಬ್ದಾರಿಯನ್ನು ಅವರು ಪ್ರಾಮಾಣಿಕವಾಗಿ ನಿರ್ವಹಿಸುತ್ತಾರೆ. ಹಣಗಳಿಕೆ ಅವರ ಸೇವೆಯ ಗುರಿಯಲ್ಲ. ಮುಖ್ಯ ಮಂತ್ರಿ ತನ್ನ ಜವಾಬ್ದಾರಿಯ ನಿರ್ವಹಣೆಯ ಭಾಗವಾಗಿ ಸಚಿವರನ್ನು ಅವರ ಸ್ಥಾನದಿಂದ ಬದಲಾಯಿಸಬಹುದು, ಸಂಪುಟದಿಂದ ತೆಗೆದು ಹಾಕಬಹುದು. ಅಂತಹ ಸಂದರ್ಭದಲ್ಲಿಯೂ ಕಮ್ಯುನಿಸ್ಟ್ ಸಚಿವ ಸಂಪುಟದಲ್ಲಿ ಅತೃಪ್ತಿ, ಅಸಮಾಧಾನ ಉಂಟಾಗುವ ಪ್ರಶ್ನೆಯೇ ಇಲ್ಲ. ಕೇರಳದ ಇಂದಿನ ಪಿಣರಾಯಿ ವಿಜಯನ್ ನೇತೃತ್ವದ ಸಚಿವ ಸಂಪುಟ ಎಲ್ಲರಿಗೂ ಮಾದರಿಯಾಗಿದೆ. ಪಶ್ಚಿಮ ಬಂಗಾಳ ಮತ್ತು ತ್ರಿಪುರ ರಾಜ್ಯಗಳಲ್ಲಿಯೂ ಸಿಪಿಐ(ಎಂ) ನೇತೃತ್ವದ ಸರ್ಕಾರಗಳು ಬಂದಿವೆ. ಮಾದರಿ ಆಡಳಿತ ವ್ಯವಸ್ಥೆಯನ್ನು ನೀಡಿ ದಾಖಲೆ ಸ್ಥಾಪಿಸಿದ್ದಾರೆ.

ಬಿಜೆಪಿ ಒಂದು ಬಂಡವಾಳಶಾಹಿ ಭೂಮಾಲಿಕ ಪಕ್ಷ. ದೇಶ ವಿದೇಶಗಳ ಕಾರ್ಪೊರೇಟ್ ಕಂಪೆನಿಗಳಿಂದ ಹಣದ ಹೊಳೆಯಿಂದ ಬಿಜೆಪಿ ಅಧಿಕಾರಕ್ಕೆ ಬಂದಿದೆ. ಮತ್ತೆ ಮತ್ತೆ ಅಧಿಕಾರಕ್ಕೆ ಬರುವುದಕ್ಕಾಗಿ ಬಿಜೆಪಿ ಇಂತಹ ಹಣವನ್ನೇ ಅವಲಂಬಿಸಿದೆ. ಕರ್ನಾಟಕದಲ್ಲಿ ಅದೇ ಬಿಜೆಪಿಗರು ಅಧಿಕಾರದಲ್ಲಿರುವುದರಿಂದ ಅವರು ಹಣಕ್ಕಾಗಿ ಜೊಲ್ಲು ಸುರಿಸುತ್ತಾರೆ. ಶಾಸಕರಾಗಿ, ಸಚಿವರಾಗಿ ಆಯ್ಕೆಯಾದವರು ಜನರಿಂದಲೂ, ಸರ್ಕಾರದ ಬೊಕ್ಕಸದಿಂದಲೂ ಕದಿಯುತ್ತಾರೆ. ಕದಿಯುವ ಅವಕಾಶ ಸಿಗದಾಗ ಮರಗುತ್ತಾರೆ!

ಜಾನುವಾರು ಹತ್ಯೆ ನಿಷೇಧ ಸುಗ್ರೀವಾಜ್ಞೆ ಜಾರಿಗೆ CPIM ತೀವ್ರ ವಿರೋಧ

ರಾಜ್ಯ ಸರಕಾರ ಜಾನುವಾರು ಹತ್ಯೆ ನಿಷೇಧ ಸುಗ್ರೀವಾಜ್ಞೆಯನ್ನು ರಾಜ್ಯದ ಜನತೆಯ ತೀವ್ರ ವಿರೋಧದ ನಡುವೆ ಜಾರಿಗೆ ತರಲು ಮುಂದಾಗುತ್ತಿರುವ ದೌರ್ಜನ್ಯ ದ ಕ್ರಮವನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ಕರ್ನಾಟಕ ರಾಜ್ಯ ಸಮಿತಿಯು ಬಲವಾಗಿ ಖಂಡಿಸುತ್ತದೆ ಮತ್ತು ಈ ಕೂಡಲೇ ಅದನ್ನು ವಾಪಾಸು ಪಡೆಯುವಂತೆ ಒತ್ತಾಯಿಸಿದೆ.

ಇದೊಂದು ಕರಾಳ ಸುಗ್ರೀವಾಜ್ಞೆ ಯಾಗಿದ್ದು ಜಾನುವಾರು ಉಪ ಕಸುಬು ಮತ್ತು ಜಾನುವಾರು ಆಧಾರಿತ ಹೈನೋದ್ಯಮ, ಮಾಂಸೋದ್ಯಮ, ಚರ್ಮೋದ್ಯಮ ಮತ್ತು ಔಷದ ಉದ್ಯಮಗಳನ್ನು ನಾಶಗೊಳಿಸಿ ಮತ್ತು ಕಾರ್ಪೋರೇಟ್ ಕಂಪನಿಗಳ ತೆಕ್ಕೆಗೆ ಅವುಗಳನ್ನು ಅತ್ಯಂತ ವೇಗವಾಗಿ ದೂಡುವ ವಿನಾಶಕಾರಿ ಹುನ್ನಾರವಿದಾಗಿದೆ. ಇದರಿಂದ ಮಿಲಿಯಂತರ ಜನತೆಯ ಉದ್ಯೋಗಗಳು ನಾಶವಾಗಲಿವೆ ಮತ್ತು ಇದು ನಿರುದ್ಯೋಗದ ಪಡೆಯನ್ನು ವ್ಯಾಪಕವಾಗಿ ಹೆಚ್ಚಿಸಲಿದೆ.

ಇದು, ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ದಲಿತ ಸಮುದಾಯಗಳ, ಅಲ್ಪ ಸಂಖ್ಯಾತ ಬಹುತೇಕರ ಆಹಾರದ ಹಾಗೂ ಉದ್ಯೋಗದ ಹಕ್ಕಿನ ಮೇಲಿನ ಧಾಳಿಯಾಗಿದೆ. ಇದರಿಂದ ದಲಿತ ಸಂಕುಲ ಪರಂಪರೆಯಿಂದ ತನ್ನ ಬದುಕಿಗಾಗಿ ಬಳಸುತ್ತಾ ಬಂದ ಏಕೈಕ ಪೌಷ್ಠಿಕ ಆಹಾರದ ಅಭಾವವನ್ನು ತೀವ್ರವಾಗಿ ಎದುರಿಸಿ, ಸಂಕುಲ ಸಂರಕ್ಷಣೆಯ ಸಮಸ್ಯೆಯನ್ನು ಗಂಭೀರವಾಗಿ ಎದುರಿಸಲಿದೆ.

ಮಾತ್ರವಲ್ಲಾ, ರಾಜ್ಯದಲ್ಲಿ ಕೋಮು ವಿಭಜನೆಗೆ ಮತ್ತು ದ್ವೇಷಕ್ಕೆ ಇದು ಕುಮ್ಮಕ್ಕು ನೀಡಲಿದೆ. ಅಲ್ಪ ಸಂಖ್ಯಾತರ ಮೇಲಿನ ದಾಳಿಗೆ ನೆರವಾಗಲಿದೆ.

ಒಟ್ಟಾರೇ ಇದು ಜಾತ್ಯಾತೀತ ಪ್ರಜಾಸತ್ತೆಯ ಸಂವಿಧಾನದ ವಿರೋಧಿಯಾಗಿದೆ.

ಇಂತಹ ಯಾವುದೇ ಸಂಕಷ್ಟಗಳ ನಿವಾರಣೆಗೆ ಅಗತ್ಯವಾದ ಯವುದೇ ಪರಿಹಾರದ ಬಗೆಗೆ ಸದರಿ ಸುಗ್ರೀವಾಜ್ಞೆ ಮತ್ತು ಸರಕಾರ ಕ್ರಮವಹಿಸಿಲ್ಲ.

ರಾಜ್ಯವು ಈಗಾಗಲೇ ತೀವ್ರ ಆರ್ಥಿಕ ಹಾಗೂ ಸಾಮಾಜಿಕ ಸಂಕಷ್ಟಗಳನ್ನು ಎದುರಿಸುತ್ತಿದ್ದು, ಈ ಸುಗ್ರೀವಾಜ್ಞೆಯು ಮತ್ತಷ್ಟು ಸಂಕಷ್ಟವನ್ನು ಹೇರಲಿದೆ. ಆದ್ದರಿಂದ ಅದನ್ನು ವಾಪಾಸು ಪಡೆಯುವುದು ಅಗತ್ಯವಿದೆ.

ಜನವರಿ 26, 2021ರ ಗಣರಾಜ್ಯೋತ್ಸವದಂದು ರೈತ, ಕಾರ್ಮಿಕರ ಪರ್ಯಾಯ ಪೆರೇಡ್

ಗಣತಂತ್ರದ ನಿಜವಾದ ಆಶಯಗಳನ್ನು ಎತ್ತಿ ಹಿಡಿಯುವ ಉದ್ದೇಶದೊಂದಿಗೆ ಜನವರಿ 26, 2021 ರಂದು ಜನ ಗಣರಾಜ್ಯೋತ್ಸವನ್ನು ಬೆಂಗಳೂರಿನಲ್ಲಿ ಸಂಘಟಿಸಲಾಗುತ್ತಿದ್ದು, ಒಂದು ಸಾವಿರ ಟ್ರ್ಯಾಕ್ಟರ್‌ಗಳು, ಮೂರು ಸಾವಿರ ಕಾರು, ದ್ವಿಚಕ್ರ ವಾಹನಗಳು, ಹದಿನೈದು ಸಾವಿರಕ್ಕೂ ಮೀರಿ ರೈತರು, ದಲಿತರು, ಕಾರ್ಮಿಕರು, ವಿದ್ಯಾರ್ಥಿಗಳು, ಯುವಜನರು, ಮಹಿಳೆಯರ ಪರ್ಯಾಯ ಪೆರೇಡ್ ನಡೆಯಲಿದೆ.

ಈ ಜನ ಗಣತಂತ್ರದ ಪರ್ಯಾಯ ಪೆರೇಡನಲ್ಲಿ ಮತ್ತಷ್ಟು ಹೆಚ್ಚಿನ ಸಂಖ್ಯೆಯಲ್ಲಿ ರಾಜ್ಯದ ರೈತರು, ದಲಿತರು, ಕಾರ್ಮಿಕರು, ವಿದ್ಯಾರ್ಥಿ, ಯುವಜನ, ಮಹಿಳೆಯರು ಮತ್ತು ಎಲ್ಲಾ ದೇಶ ಪ್ರೇಮಿಗಳು ಭಾಗವಹಿಸಿ, ಯಶಸ್ವಿಗೊಳಿಸಬೇಕೆಂದು 'ಸಂಯುಕ್ತ ಹೋರಾಟ-ಕರ್ನಾಟಕ' ಮನವಿ ಮಾಡುತ್ತದೆ.

ಸ್ವಾತಂತ್ರ್ಯ ಹೋರಾಟ, ಪ್ರಜಾಪ್ರಭುತ್ವದ ಆಶಯಗಳೊಂದಿಗೆ ರಚನೆಯಾಗಿರುವ ದೇಶದ ಸಂವಿಧಾನದ ಆಶಯಗಳು, ಮೌಲ್ಯಗಳನ್ನು ಧಿಕ್ಕರಿಸಿ ಕೇಂದ್ರ ಸರಕಾರ ಜಾರಿಗೆ ತಂದಿರುವ ಮೂರು ಕೃಷಿ ಸಂಬಂಧಿತ ಕಾಯ್ದೆಗಳು, ಕಾರ್ಮಿಕ ಕಾಯ್ದೆಗಳ ತಿದ್ದುಪಡಿಗಳು, ವಿದ್ಯುತ್ ಮಸೂದೆಯನ್ನು ವಾಪಸ್ಸು ಪಡೆಯಬೇಕು ಮತ್ತು ರಾಜ್ಯ ಸರ್ಕಾರದ ಭೂ ಸುಧಾರಣೆ ತಿದ್ದುಪಡಿ ಕಾಯ್ದೆ, ಎಪಿಎಂಸಿ ತಿದ್ದುಪಡಿ ಕಾಯ್ದೆ ಹಾಗೂ ಗೋಹತ್ಯೆ ನಿಷೇಧ ಸುಗ್ರೀವಾಜ್ಞೆಯನ್ನು ವಾಪಸ್ಸು ಪಡೆದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಡಾ॥ ಎಂ.ಎಸ್. ಸ್ವಾಮಿನಾಥನ್ ವರದಿಯನ್ವಯ 'ಕನಿಷ್ಠ ಬೆಂಬಲ ಬೆಲೆ' ಯನ್ನು ಖಾತರಿ ಮಾಡುವ ಶಾಸನಗಳನ್ನು ರೂಪಿಸಬೇಕೆಂದು ಆಗ್ರಹಿಸಿ ದೆಹಲಿಯ ಗಡಿಯಲ್ಲಿ ಕಳೆದ 50 ದಿನಗಳಿಂದ ಚಾರಿತ್ರಿಕ ಹೋರಾಟ ನಡೆಸುತ್ತಿರುವ ಸುಮಾರು 500 ರೈತ ಸಂಘಟನೆಗಳ ವೇದಿಕೆಯಾಗಿರುವ 'ಸಂಯುಕ್ತ ಕಿಸಾನ್ ಮೋರ್ಚಾ'ದ

ಪುಟ 4 ಕ್ಕೆ



ಜಾನುವಾರು ಹತ್ಯಾ ನಿಷೇದ ಸುಗ್ರೀವಾಜ್ಞೆ ಜಾರಿಗೊಳಿಸುವ ದುರ್ನಡೆಯನ್ನು ನಿಲ್ಲಿಸಿ!- KPRS ಒತ್ತಾಯ

ರಾಜ್ಯದ ಜನತೆಯ ತೀವ್ರ ವಿರೋಧದ ನಡುವೆಯೂ, ರಾಜ್ಯದ ಹಾಲಿ ಅಭಿವೃದ್ಧಿಯನ್ನು ಸರ್ವ ನಾಶ ಮಾಡುವ ಜಾನುವಾರು ಹತ್ಯಾ ನಿಷೇದ ಸುಗ್ರೀವಾಜ್ಞೆಯನ್ನು ಜಾರಿಗೊಳಿಸುವ ದುರ್ನಡೆಯನ್ನು ತಕ್ಷಣವೇ ನಿಲ್ಲಿಸಿರಿ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ರಾಜ್ಯ ಸರಕಾರವನ್ನು ಬಲವಾಗಿ ಒತ್ತಾಯಿಸಿದೆ.

ಇದು, ರಾಜ್ಯದಲ್ಲಿ ಈಗಾಗಲೆ ಬದುಕನ್ನು ರೂಪಿಸಿಕೊಂಡಿರುವ ಕೋಟ್ಯಾಂತರ ಕುಟುಂಬಗಳ ಮೇಲಿನ ಗಧಾ ಪ್ರಹಾರವಾಗಿದೆ. ಹೈನುಗಾರಿಕೆ ಹೈನೋದ್ಯಮ ಮತ್ತು ಮಾಂಸೋದ್ಯಮ, ಚರ್ಮೋದ್ಯಮ, ಔಷಧಿಯ ಉದ್ಯಮದ ವಿರೋಧಿಯಾಗಿದೆ. ಮಾತ್ರವಲ್ಲಾ ದಲಿತರ ಹಾಗೂ ಅಲ್ಪ ಸಂಖ್ಯಾತರ ವಿರೋಧಿ ನಡೆಯಾಗಿದೆ.

ಈ ಎಲ್ಲ ಉದ್ಯಮಗಳನ್ನು ಮತ್ತು ಹೈನೋದ್ಯಮದ ಸಹಕಾರ ಸಂಘಗಳ, ಹಾಗೂ ರಾಜ್ಯದ ಪ್ರತಿಷ್ಠಿತ ಕರ್ನಾಟಕ ಹಾಲು ಒಕ್ಕೂಟವನ್ನು ಸರ್ವನಾಶ ಮಾಡಲಿದೆ. ಈ ಎಲ್ಲ ಉದ್ಯಮಗಳಲ್ಲಿ ತೊಡಗಿಸಿಕೊಂಡ ದಶಲಕ್ಷಾಂತರ ಕಾರ್ಮಿಕರು, ಸಣ್ಣ ಉದ್ದಿಮೆದಾರರು, ಲಕ್ಷಾಂತರ ಈ ಉದ್ದಿಮೆಗಳ ಸಣ್ಣ, ಮದ್ಯಮ ವ್ಯಾಪಾರಸ್ಥರು ಬೀದಿ ಪಾಲಾಗಲಿದ್ದಾರೆ.

ರೈತರ ಮುಖ್ಯ ಕಸುಬಾದ ಬೇಸಾಯದ ಮೇಲೆ ಅದಾಗಲೇ ಕಾರ್ಪೋರೇಟ್ ಕೃಷಿ ಕಾಯ್ದೆಗಳನ್ನು ಹೇರುವ ಮೂಲಕ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಬಲವಾದ ಪ್ರಹಾರಕ್ಕೆ ಮುಂದಾಗಿರುವಾಗಲೇ,

ಮುಖ್ಯಮಂತ್ರಿ ಯಡಿಯೂರಪ್ಪ ರೈತರ ಉಪಕಸುಬಾದ ಹೈನುಗಾರಿಕೆಯು ಈಗಾಗಲೆ ಅದು ನಷ್ಟದಲ್ಲಿರುವಾಗ, 13 ವರ್ಷಗಳವರೆಗೆ ನಿರುಪಯುಕ್ತ ಜಾನುವಾರುಗಳನ್ನು ಸಾಕಲೇಬೇಕೆಂಬ ಮತ್ತಷ್ಟು ಹೊರೆಯನ್ನು ಹೇರುವ ಮೂಲಕ ಅದರ ಮೇಲೆ ಅಂತಿಮ ಪ್ರಹಾರ ನಡೆಸಿದ್ದಾರೆ. ಇದರಿಂದ 50 ಲಕ್ಷಕ್ಕೂ ಅಧಿಕ ಹೈನುಗಾರ ಕುಟುಂಬಗಳು ಉದ್ಯೋಗ ಭದ್ರತೆಯನ್ನು ಕಳೆದುಕೊಳ್ಳಲಿವೆ.

ಇದು ಜನತೆಯ ಆಹಾರದ ಹಾಗೂ ಉದ್ಯೋಗದ ಮತ್ತು ಬದುಕುವ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲಿನ ಗಂಭೀರ ಧಾಳಿಯಾಗಿದೆ. ಜನತೆಯ ಜಾತ್ಯಾತೀತ ಹಾಗೂ ಜನಪದ ಸಂಸ್ಕೃತಿಯ ಮೇಲಿನ ಧಾಳಿಯೂ ಇದಾಗಿದೆ. ಕೋಮು ಹಾಗೂ ಜಾತಿ ತಾರತಮ್ಯದ ವ್ಯಾದಿಯನ್ನು ಬಲಪಡಿಸಲಿದೆ.

ಈ ಎಲ್ಲ ಉದ್ದಿಮೆಗಳನ್ನು ಹಾಗೂ ಹೈನುಗಾರಿಕೆಯನ್ನು, ಕಾರ್ಪೋರೇಟ್ ಕಂಪನಿಗಳಿಗೆ ವಹಿಸಿಕೊಡುವ ಮತ್ತು ಜನತೆಯನ್ನು ಒಡೆದಾಳುವ ಗುಲಾಮ ನೀತಿಯಿಂದ ಇದನ್ನು ಜಾರಿಗೊಳಿಸಲಾಗುತ್ತಿದೆಯೆಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಸರಕಾರದ ದುರ್ನಡೆಯನ್ನು ಬಲವಾಗಿ ಖಂಡಿಸುತ್ತದೆ ಮತ್ತು ಇದರಲ್ಲಿ ಜಾನುವಾರು ಸಂರಕ್ಷಣೆಯ ಯಾವುದೇ ಅಂಶಗಳಿಲ್ಲ, ಹಾಗೆ ಹೇಳುವುದು ಗೋಸುಂಬೆ ರಾಜಕಾರಣವಾಗಿದೆ ಎಂದಿದೆ.

ಮಾತ್ರವಲ್ಲಾ, ಕೂಡಲೇ ಆ ದುರ್ನಡೆಯನ್ನು ಕೈ ಬಿಡಬೇಕೆಂದು ಮರಳಿ ಬಲವಾಗಿ ಒತ್ತಾಯಿಸುತ್ತದೆ.

ಈ ಸುಗ್ರೀವಾಜ್ಞೆಯು, ಅದು ಉಂಟು ಮಾಡುವ ತೀವ್ರ ಹಾನಿಯಿಂದ ಜನತೆಯನ್ನು ಮತ್ತು ಜನರ ಪ್ರಜಾಸತ್ತಾತ್ಮಕ ಹಾಗೂ ಸಂವಿಧಾನಾತ್ಮಕ ಹಕ್ಕುಗಳನ್ನು ಮತ್ತು ಸಂಸ್ಕೃತಿಯನ್ನು ರಕ್ಷಿಸುವ ಯಾವುದೇ ಅಂಶಗಳನ್ನು ಇದು ಪರಿಗಣಿಸಿಲ್ಲವೆಂದು ರೈತ ಸಂಘ ಕಟುವಾಗಿ ಟೀಕಿಸಿದೆ.

ಇದು ತಕ್ಷಣದಿಂದಲೇ ನಿರುಪಯುಕ್ತ ಜಾನುವಾರು ಮಾರಾಟ ಮಾಡುವ ಹೈನುಗಾರರ ಮೇಲೆ, ಖರೀದಿಸುವ ಖುರೇಷಿಗಳ ಮೇಲೆ ಗೋರಕ್ಷಣೆಯ ಹೆಸರಿನಲ್ಲಿ ಕ್ರಿಮಿನಲ್ ಧಾಳಿ ಎಸಗಲು ಅವಕಾಶ ನೀಡಲಿದೆ.

ಇಂತಹ ಎಲ್ಲಾ ಹಾನಿಗಳಿಂದ ಜನತೆಯನ್ನು ಸಂರಕ್ಷಿಸುವ ಪರಿಹಾರೋಪಾಯಗಳನ್ನು ಮತ್ತು ನಿರುದ್ಯೋಗದ ಪುನರ್ವಸತಿ ಯೋಜನೆಗಳನ್ನು ಪೂರ್ವ ಭಾವಿಯಾಗಿ ಕೈಗೊಳ್ಳದೇ ಮತ್ತು ವ್ಯಾಪಕವಾಗಿ ಚರ್ಚೆಗೀಡುಮಾಡದೇ ಯಾವುದೇ ಕಾರಣಕ್ಕೆ ಇದನ್ನು ಜಾರಿಗೆ ತರಬಾರದು ಮತ್ತು ಅದರ ತುರ್ತು ಈಗ ಇಲ್ಲವೆಂದು KPRS ಒತ್ತಾಯಿಸಿದೆ. ■



ದ.ಕ. ಜಿಲ್ಲೆಯಲ್ಲಿ ರೈತ ಹೋರಾಟ ಬೆಂಬಲಿಸಿ ಸತ್ಯಾಗ್ರಹ

ವರದಿ: ವಾ.ಉ.

ದ.ಕ. ರೈತ ಕಾರ್ಮಿಕ ದಲಿತ ಚಳುವಳಿಗಳ ಒಕ್ಕೂಟದ ವತಿಯಿಂದ ಜಿಲ್ಲೆಯ ಪ್ರಮುಖ ಪಟ್ಟಣಗಳಲ್ಲಿ ರಾಷ್ಟ್ರದಲ್ಲಿ ನಡೆಯುತ್ತಿರುವ ರೈತರ ಹೋರಾಟವನ್ನು ಬೆಂಬಲಿಸಿ ಧರಣಿ ಸತ್ಯಾಗ್ರಹವನ್ನು ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ಅಲ್ಲಲ್ಲಿ ಸತ್ಯಾಗ್ರಹಗಳು ನಡೆದಿವೆ.

ಜನವರಿ 16 ರಂದು ಬೆಳ್ತಂಗಡಿಯ ಮಿನಿ ವಿಧಾನಸೌಧದ ಮುಂಭಾಗದಲ್ಲಿ ನಡೆದ ಪ್ರತಿಭಟನೆಯನ್ನುದ್ದೇಶಿಸಿ ಪ್ರಾಂತ ರೈತ ಸಂಘದ ತಾಲೂಕು ಅಧ್ಯಕ್ಷ ಎಸ್.ಎಂ.ಶಿವಕುಮಾರ್, ರಾಜ್ಯ ರೈತ ಸಂಘ ಹಸಿರುಸೇನೆಯ ರಾಜ್ಯ ಕಾರ್ಯದರ್ಶಿ ರವಿಕಿರಣ ಪುಣಚ, ಜಿಲ್ಲಾ ಅಧ್ಯಕ್ಷ ಸುರೇಶ್ ಭಟ್ ಕೊಜಂಬೆ, ದಲಿತ ಹಕ್ಕುಗಳ ಸಮಿತಿ ಮುಖಂಡ ಶೇಖರ ಲಾಯಿಲ ಮಾತನಾಡಿದರು. ಪ್ರತಿಭಟನೆಗೂ ಮೊದಲು ಲಾಯಿಲದಿಂದ ಬೆಳ್ತಂಗಡಿ ತಾಲೂಕು ಕಚೇರಿವರೆಗೆ ಮೆರವಣಿಗೆ ನಡೆಸಲಾಯಿತು.

ಜನವರಿ 18ರಂದು ಪುತ್ತೂರಿನ ಗಾಂಧಿಕಟ್ಟೆಯ ಎದುರು ನಡೆದ ಧರಣಿ ಸತ್ಯಾಗ್ರಹವನ್ನುದ್ದೇಶಿಸಿ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಕೃಷ್ಣಪ್ಪ ಸಾಲ್ಯಾನ್, ಖಜಾಂಚಿ ವಾಸುದೇವ ಉಚ್ಚಿಲ, ರಾಜ್ಯ ರೈತ ಸಂಘದ ರಾಜ್ಯ ಕಾರ್ಯದರ್ಶಿ ರವಿಕಿರಣ ಪುಣಚ, ಜಿಲ್ಲಾ ಅಧ್ಯಕ್ಷ ಶ್ರೀಧರ ಶೆಟ್ಟಿ ಬೈಲಗುತ್ತು, ಸಿಐಟಿಯು ಮುಖಂಡ ರಾಮಣ್ಣ ವಿಟ್ಲ ಮಾತನಾಡಿದರು. ಗಾಂಧೀಜಿ ಪ್ರತಿಮೆಗೆ ಮಾಲಾರ್ಪಣೆ ಮಾಡುವುದರೊಂದಿಗೆ ಸತ್ಯಾಗ್ರಹ ಆರಂಭವಾಯಿತು. ಕೇಂದ್ರ ಸರಕಾರವು 3 ಕೃಷಿ ಕಾಯ್ದೆಗಳನ್ನು ಹಿಂತೆಗೆದುಕೊಳ್ಳಲು ಆಗ್ರಹಿಸಿದ ಮನವಿಯನ್ನು ಸ್ಥಳಕ್ಕೆ ಭೇಟಿ ನೀಡಿದ ತಹಶೀಲ್ದಾರರಿಗೆ ಸಲ್ಲಿಸಲಾಯಿತು.

ಜನವರಿ 20 ರಂದು ಸುಳ್ಯ ಬಸ್ ನಿಲ್ದಾಣದ ಎದುರು ನಡೆದ ಉಪವಾಸ ಧರಣಿ ಸತ್ಯಾಗ್ರಹವನ್ನು ಅಂಬೇಡ್ಕರ್ ಹಾಗೂ ಗಾಂಧೀ ಭಾವಚಿತ್ರಗಳಿಗೆ ಮಾಲಾರ್ಪಣೆ ಮಾಡುವ ಮೂಲಕ ಉದ್ಘಾಟಿಸಲಾಯಿತು. ಪ್ರತಿಭಟನೆಯನ್ನುದ್ದೇಶಿಸಿ ರಾಜ್ಯ ರೈತ ಸಂಘದ ರಾಜ್ಯ ಕಾರ್ಯದರ್ಶಿ ರವಿಕಿರಣ ಪುಣಚ, ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಕೃಷ್ಣಪ್ಪ ಸಾಲ್ಯಾನ್, ಖಜಾಂಚಿ ವಾಸುದೇವ ಉಚ್ಚಿಲ, ಸಿಐಟಿಯು ಮುಖಂಡ ಕೆ.ಪಿ.ಜಾನಿ, ನ್ಯಾಯವಾದಿ ವೆಂಕಪ್ಪ ಗೌಡ, ಸಾಮಾಜಿಕ ಕಾರ್ಯಕರ್ತ ತೆಕ್ಕಿಲ್ ಶಾಹೀದ್ ಮತ್ತಿತರರು ಮಾತನಾಡಿದರು. ಈ ಸತ್ಯಾಗ್ರಹದಲ್ಲಿ ರೈತರು ಕಾರ್ಮಿಕರಲ್ಲದೆ ಮಧ್ಯಮ ವರ್ಗದ ಜನತೆಯೂ ಭಾಗವಹಿಸಿದ್ದರು.

ಜನವರಿ 22 ರಂದು ಬಿಸಿರೋಡಿನಲ್ಲಿ ಬಂಟ್ವಾಳ ಮಿನಿವಿಧಾನಸೌಧದ ಎದುರು ನಡೆದ ಪ್ರತಿಭಟನಾ ಸತ್ಯಾಗ್ರಹವನ್ನುದ್ದೇಶಿಸಿ ರಾಜ್ಯ ರೈತ ಸಂಘದ ರಾಜ್ಯ ಕಾರ್ಯದರ್ಶಿ ರವಿಕಿರಣ ಪುಣಚ, ಜಿಲ್ಲಾಧ್ಯಕ್ಷ ಓಸ್ವಾಲ್ಡ್ ಪ್ರಕಾಶ್ ಫೆರ್ನಾಂಡೀಸ್, ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಕೃಷ್ಣಪ್ಪ ಸಾಲ್ಯಾನ್, ಸಿಐಟಿಯು ಮುಖಂಡ ರಾಮಣ್ಣ ವಿಟ್ಲ, ಎಐಟಿಯುಸಿ ಮುಖಂಡ ಶೇಖರ ಬಂಟ್ವಾಳ ಮಾತನಾಡಿದರು.

ಜನವರಿ 26 ರಂದು ಮಂಗಳೂರಿನಲ್ಲಿ ನಡೆಯಲಿರುವ ಜನಪರ್ಯಾಯ ಪ್ರಜಾಪ್ರಭುತ್ವ ಪಥಸಂಚಲನಕ್ಕೆ ಪೂರ್ವಭಾವಿಯಾಗಿ ಈ ಧರಣಿ ಸತ್ಯಾಗ್ರಹಗಳನ್ನು ಹಮ್ಮಿಕೊಳ್ಳಲಾಗಿದ್ದು, ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಭಾರೀ ಸಿದ್ಧತೆಗಳು ನಡೆಯುತ್ತಿವೆ.

ಜನವರಿ 26, 2021ರ ಗಣರಾಜ್ಯೋತ್ಸವದಂದು ರೈತ, ಕಾರ್ಮಿಕರ ಪರ್ಯಾಯ ಪರೇಡ್......... ಪುಟ 3 ರಿಂದ

ಕರೆಯ ಮೇರೆಗೆ ನವದೆಹಲಿಯನ್ನು ಒಳಗೊಂಡು ದೇಶಾದ್ಯಂತ ಜನವರಿ 26, 2021 ರಂದು 'ರೈತ–ಕಾರ್ಮಿಕರ ಪರ್ಯಾಯ ಪರೇಡ್'ಗಳು ನಡೆಯುತ್ತಿದ್ದು, ಇದರ ಭಾಗವಾಗಿ ಬೆಂಗಳೂರಿನಲ್ಲಿ ಸಹ ಈ ಪರೇಡನ್ನು 'ಸಂಯುಕ್ತ ಹೋರಾಟ–ಕರ್ನಾಟಕ' ಎಂಬ ವಿಶಾಲವಾದ ವೇದಿಕೆ ಸಂಘಟಿಸುತ್ತಿದೆ.

ರಾಜ್ಯದ ಬಹುತೇಕ ರೈತ ಪರ, ದಲಿತ ಪರ, ಕಾರ್ಮಿಕರ ಪರ, ವಿದ್ಯಾರ್ಥಿ, ಯುವಜನ, ಮಹಿಳಾ ಪರವಾಗಿರುವ ಸಂಘಟನೆಗಳನ್ನು ಒಳಗೊಂಡು ರಚನೆಯಾಗಿದ್ದ ಅಖಿಲ ಭಾರತ ರೈತ ಸಂಘರ್ಷ ಸಮನ್ವಯ ಸಮಿತಿ (AIKSCC), ರೈತ, ದಲಿತ, ಕಾರ್ಮಿಕರ ಐಕ್ಯ ಹೋರಾಟ, ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (JCTU) ದಲಿತ, ವಿದ್ಯಾರ್ಥಿ, ಯುವಜನ, ಮಹಿಳಾ ಸಂಘಟನೆಗಳ ವಿವಿಧ ಸಮನ್ವಯ ಸಮಿತಿಗಳನ್ನು ಒಳಗೊಂಡು ರಚನೆಯಾಗಿರುವ ದೇಶ ಪ್ರೇಮಿ ವೇದಿಕೆಯೇ 'ಸಂಯುಕ್ತ ಹೋರಾಟ–ಕರ್ನಾಟಕ' ಎನ್ನುವ ವೇದಿಕೆ. ಈ ವೇದಿಕೆಯು, ಜನವರಿ 26, 2021 'ಪರ್ಯಾಯ ಪರೇಡ್' ನ್ನು ಸಂಘಟಿಸುತ್ತಿರುವ ಜೊತೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರೈತ–ಕಾರ್ಮಿಕ ನೀತಿಗಳನ್ನು ಹಿಮ್ಮೆಟ್ಟಿಸುವಲ್ಲಿ ಮುಂದಿನ ದಿನಗಳಲ್ಲಿ ಒಂದು ನಿರ್ಣಾಯಕ ಪಾತ್ರವನ್ನು ವಹಿಸಲಿದೆ. ಪಕ್ಷಾತೀತವಾಗಿ ರೈತರು, ಕಾರ್ಮಿಕರು ಇತರೆ ದುಡಿಯುವ ಜನರ ಸಮಸ್ಯೆಗಳ ಪರಿಹಾರಕ್ಕಾಗಿ ಕೆಲಸ ಮಾಡುವುದರ ಜೊತೆಯಲ್ಲಿಯೇ ಸಾಮಾಜಿಕ ನ್ಯಾಯ, ಕೋಮುಸಾಮರಸ್ಯ, ಸಮಾನತೆ, ಪ್ರಜಾಪ್ರಭುತ್ವವನ್ನು ಬಲಗೊಳಿಸಲು ಶ್ರಮಿಸಲಿದೆ. 'ಸಂಯುಕ್ತ ಹೋರಾಟ–ಕರ್ನಾಟಕ'ದ ಇಂತಹ ಎಲ್ಲಾ ಪ್ರಯತ್ನಗಳಿಗೆ ರಾಜ್ಯದ ಜನತೆ ಬೆಂಬಲವನ್ನು ನೀಡಬೇಕೆಂದು ವಿನಂತಿಸುತ್ತೇವೆ.

ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರ ನಡೆಸಿದ ಬಹುತೇಕ ಆಳುವ ವರ್ಗಗಳ ಪಕ್ಷಗಳ ಧೋರಣೆಗಳ ಫಲವಾಗಿ ಕೃಷಿ ಗಂಭೀರವಾದ ಬಿಕ್ಕಟ್ಟನ್ನು ಎದುರಿಸುತ್ತಿದೆ. ಇದರ ಪರಿಣಾಮವಾಗಿ ಕಳೆದ 30 ವರ್ಷಗಳಲ್ಲಿ ನಾಲ್ಕು ಲಕ್ಷಕ್ಕೂ ಮೀರಿ ರೈತರು ಆತ್ಮಹತ್ಯೆಗಳಿಗೆ ಗುರಿಯಾಗಿದ್ದಾರೆ. ಕೃಷಿ ಕೂಲಿಕಾರರ, ದಲಿತರ ಹಸಿವಿನ ಸಾವುಗಳ ವ್ಯಾಪಕವಾಗುತ್ತಿವೆ. ಕಳೆದ ವರ್ಷದಲ್ಲಿ ವಕ್ಕರಿಸಿದ ಕೊರನಾ ರೋಗ ರೈತರು, ಕಾರ್ಮಿಕರು ಒಟ್ಟಾರೆ ದುಡಿಯುವ ಜನರ ಸಂಕಷ್ಟಗಳನ್ನು ಮತ್ತಷ್ಟು ಹೆಚ್ಚಿಸಿದೆ. ಇಂತಹ ಸಂಕಷ್ಟದಲ್ಲಿರುವ ಜನರ ಸಹಾಯಕ್ಕೆ ಬರಬೇಕಾದ ಸರಕಾರಗಳು, ಇದಕ್ಕೆ ತದ್ವಿರುದ್ಧವಾಗಿ ದೇಶದ, ಜಗತ್ತಿನ ಕಾರ್ಪೋರೇಟ್ ಕಂಪನಿಗಳ ಸೇವೆಗೆ ಟೊಂಕ ಕಟ್ಟಿ ನಿಂತಿವೆ. ಇದರ ಫಲವೇ ಕೇಂದ್ರ ರಾಜ್ಯ ಸರ್ಕಾರಗಳ ಮೂರು ಕಾಯ್ದೆಗಳು, ವಿದ್ಯುತ್ ಮಸೂದೆ, ಭೂ ಸುಧಾರಣಾ ಕಾಯ್ದೆ, ಎಪಿಎಂಸಿ ಕಾಯ್ದೆ, ಕಾರ್ಮಿಕ ಕಾಯ್ದೆ ತಿದ್ದುಪಡಿಗಳು, ಮತ್ತು ಗೋಹತ್ಯೆ ನಿಷೇಧದ ಸುಗ್ರೀವಾಜ್ಞೆಗಳು.

ಇಂತಹ ಕಾಯ್ದೆಗಳ ಮೂಲಕ ದೇಶದ ಕೃಷಿ ಭೂಮಿ, ಕೃಷಿ ಉತ್ಪಾದನೆ, ಕೃಷಿ ಮಾರುಕಟ್ಟೆ, ಚಿಲ್ಲರೆ ವ್ಯಾಪಾರ, ವಿದ್ಯುತ್ ಕ್ಷೇತ್ರಗಳನ್ನು ಸಂಪೂರ್ಣವಾಗಿ ಕಾರ್ಪೋರೇಟ್ ಕಂಪನಿಗಳಿಗೆ ಒಪ್ಪಿಸುವ ಕಾರ್ಯಕ್ಕೆ ಮುಂದಾಗಿವೆ. ದೇಶದ ರೈತರು, ಕಾರ್ಮಿಕ ವರ್ಗವನ್ನು ಕಾರ್ಪೋರೇಟ್ ಕಂಪನಿಗಳ ಗುಲಾಮರನ್ನಾಗಿಸಲು ಹೊರಟಿವೆ. ಈ ಗುರಿಯನ್ನು ಸಾಧಿಸಲು 'ಸಂವಿಧಾನ' 'ಗಣತಂತ್ರ'ವನ್ನು ಧಿಕ್ಕರಿಸಿ ಆಳುವ ಫ್ಯಾಶಿಸ್ಟ್ ಶಕ್ತಿಗಳು ಮುನ್ನುಗ್ಗುತ್ತಿವೆ. ಇದಕ್ಕಾಗಿ ಕೋಮುವಾದ ದ್ವೇಷವನ್ನು ಪ್ರಚೋದನೆ ಮಾಡಲಾಗುತ್ತಿದೆ. ಇದರಿಂದ ಮುಂದುವರಿದ ಭಾಗವಾಗಿಯೇ 'ಗೋಹತ್ಯೆ ನಿಷೇಧ ಕಾಯ್ದೆ'.

ಇಂತಹ ಪರಿಸ್ಥಿತಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರೈತ – ಕಾರ್ಮಿಕ ವಿರೋಧಿ ನೀತಿಗಳನ್ನು ವಿರೋಧಿಸಿ ನಡೆಯುತ್ತಿರುವ ಹೋರಾಟಗಳ ಬಾರಿ ಮಹತ್ವದ ಹೋರಾಟ 'ಜನವರಿ 26, 2021ರ ಜನ ಗಣತಂತ್ರದ ಪರೇಡ್' ಅಂದು ಮಧ್ಯಾಹ್ನ 12:30 ಗಂಟೆಗೆ ಆರಂಭವಾಗಿ ನಗರ ರೈಲ್ವೆ ನಿಲ್ದಾಣದಿಂದ ಫ್ರೀಡಂ ಪಾರ್ಕ್ ವರೆಗೆ ನಡೆಯುವ ಕೇಂದ್ರೀಯ 'ರೈತ – ಕಾರ್ಮಿಕ ಪರ್ಯಾಯ ಪರೇಡ್' ನಲ್ಲಿ ರಾಜ್ಯದ ರೈತರು, ದಲಿತರು, ಕಾರ್ಮಿಕರು, ವಿದ್ಯಾರ್ಥಿ, ಯುವಜನ, ಮಹಿಳೆಯರು ಎಲ್ಲಾ ದೇಶಪ್ರೇಮಿಗಳು ಹೆಚ್ಚಿನ ಜನಸಂಖ್ಯೆಯಲ್ಲಿ ಭಾಗವಹಿಸಿ, ಯಶಸ್ವಿಗೊಳಿಸಬೇಕೆಂದು ಕೋರುತ್ತೇವೆ. ■

ಮೈಕ್ರೋ ಫೈನಾನ್ಸ್ ಸಂಸ್ಥೆ ವಿರುದ್ಧ ಪ್ರತಿಭಟನೆ



ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಬಡ ಮಹಿಳೆಯರಿಗೆ ನಡೆಸುವ ದೌರ್ಜನ್ಯ, ಕಿರುಕುಳದ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ರಾಜ್ಯ ಕೇಂದ್ರ ಸರ್ಕಾರಗಳು ವಿಫಲವಾಗಿದೆ ಎಂದು ಋಣಮುಕ್ತಕ್ಕಾಗಿ ಹೋರಾಟ ಸಮಿತಿ ರಾಜ್ಯ ಪ್ರಧಾನ ಕಾರ್ಯದರ್ಶಿ ನ್ಯಾಯವಾದಿ ಎಸ್.ಎಂ.ಶಿವಕುಮಾರ್ ಹೇಳಿದರು.

ಅವರು ಬುಧವಾರ ಬಂಟ್ವಾಳ ಮಿನಿ ವಿಧಾನಸೌಧದ ಎದುರು ಸಿಐಟಿಯು ಋಣಮುಕ್ತಕ್ಕಾಗಿ ಹೋರಾಟ ಸಮಿತಿ ಹಾಗೂ ಜನವಾದಿ ಮಹಿಳಾ ಸಂಘಟನೆಯ ಜಂಟಿ ಸಮಿತಿಯ ನೇತೃತ್ವದಲ್ಲಿ ನಡೆದ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಜಿಲ್ಲೆಯಲ್ಲಿ ಲಕ್ಷಾಂತರ ಮಹಿಳೆಯರು ಮೈಕ್ರೋ ಫೈನಾನ್ಸ್ ಸಂಸ್ಥೆಗಳಿಂದ ದೌರ್ಜನ್ಯಗೊಳಗಾಗಿದ್ದು, ರಾಜ್ಯ ಕೇಂದ್ರದಲ್ಲಿ ಅಧಿಕಾರದಲ್ಲಿದ್ದರೂ ಮೈಕ್ರೋ ಫೈನಾನ್ಸ್ ಸಂಸ್ಥೆಗಳ ದೌರ್ಜನ್ಯ ಹಿಂಸೆ ನಿಲ್ಲಿಸಲು ಸಾಧ್ಯವಾಗದಿರುವುದು ಈ ಸರ್ಕಾರಗಳ ನಿಜ ಬಣ್ಣ ಬಯಲು ಮಾಡಿದೆ. ಕಳೆದ ಎರಡು ವರ್ಷಗಳಿಂದ ರಾಜ್ಯಾದ್ಯಂತ ಸಂತ್ರಸ್ತ ಮಹಿಳೆಯರು ಪ್ರತಿಭಟನೆ ನಡೆಸಿದರೂ ಸರ್ಕಾರಗಳು ನರಸತ್ತವರಂತೆ ವರ್ತಿಸುತ್ತಿದ್ದು, ಮಹಿಳೆಯರ ಹಕ್ಕುಗಳ ರಕ್ಷಣೆ ಮಾಡಲು ಸಾಲ ಮನ್ನಾ ಮಾಡಲು ಒತ್ತಾಯಿಸಿ ಮಾರ್ಚ್ 8 ರಂದು ದ.ಕ.ಜಿಲ್ಲಾಧಿಕಾರಿ ಕಚೇರಿಗೆ ಮಹಿಳೆಯರ ನಡಿಗೆ ಎಂಬ ಕಾರ್ಯಕ್ರಮ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಯಂತಿ ಬಿ.ಶೆಟ್ಟಿ ಮಾತನಾಡಿ ಕೊರೋನಾ ಸಂಕಷ್ಟಕ್ಕೆ ಒಳಗಾಗಿ ಗ್ರಾಮೀಣ ಪ್ರದೇಶದ 65% ಜನರು ಕೆಲಸ ಕಳೆದುಕೊಂಡಿರುತ್ತಾರೆ. ಇಂತಹ ಸಂಧಿಗ್ಧ ಪರಿಸ್ಥಿತಿಯಲ್ಲಿ ಮೈಕ್ರೋ ಫೈನಾನ್ಸ್ ಸಂಸ್ಥೆಗಳು ಮನೆ ಮನೆಗೆ ಅಕ್ರಮ ಪ್ರವೇಶಗೈದು ಬಲಾತ್ಕಾರವಾಗಿ ಹಣವಸೂಲಿ ಮಾಡುತ್ತಿರುವುದು ಯಾವ ನ್ಯಾಯ ಎಂದು ಪ್ರಶ್ನಿಸಿದರು. ತಾಲೂಕು ಆಡಳಿತ ಹಾಗೂ ಪೊಲೀಸ್ ಇಲಾಖೆ ಈ ಬಗ್ಗೆ ತಕ್ಷಣ ಸೂಕ್ತ ಕಾನೂನುಕ್ರಮ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ ಅವರು ರಾಣಿ ಅಬ್ಬಕ್ಕನ ನಾಡಿನಲ್ಲಿ ಮಹಿಳೆಯರ ಮೇಲೆ ದೌರ್ಜನ್ಯಗಳಾಗುತ್ತಿರುವುದಕ್ಕೆ ನಮ್ಮನ್ನಾಳುವ ಜನಪ್ರತಿನಿಧಿಗಳಿಗೆ ನಾಚಿಕೆಯಾಗಬೇಕು ಎಂದರು.

ಸಿಐಟಿಯು ಬಂಟ್ವಾಳ ತಾಲೂಕು ಅಧ್ಯಕ್ಷ ರಾಮಣ್ಣ ವಿಟ್ಲ ಮಾತನಾಡಿ ನಮ್ಮನ್ನಾಳುವ ಸರಕಾರಗಳು ಮೈಕ್ರೋ ಫೈನಾನ್ಸ್ ಏಜೆಂಟರಂತೆ ಕಾರ್ಯ ನಿರ್ವಹಿಸುತ್ತಿದ್ದು, ಆ ಕಾರಣದಿಂದಾಗಿ ಬಡ ಮಹಿಳೆಯರ ಸಾಲ ಮನ್ನಾ ಮಾಡಲು ಸರಕಾರಗಳು ಹಿಂದೇಟು ಹಾಕುತ್ತಿದೆ ಎಂದ ಅವರು ಮಹಿಳೆಯರ ಮೇಲಿನ ದೌರ್ಜನ್ಯ ನಿಲ್ಲಿಸಲು ಪೊಲೀಸ್ ಇಲಾಖೆ ವಿಫಲವಾದಲ್ಲಿ ಆ ಕೆಲಸವನ್ನು ನಮ್ಮ ಸಂಘಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಋಣಮುಕ್ತಕ್ಕಾಗಿ ಹೋರಾಟ ಸಮಿತಿ ಜಿಲ್ಲಾಧ್ಯಕ್ಷೆ ಶೋಭಾ ಕೊಯಿಲ ಮಾತನಾಡಿ ಮಹಿಳೆಯರ ಹಕ್ಕುಗಳ ರಕ್ಷಣೆ ಮಾಡಲು ಸರ್ಕಾರಗಳು ಸಂಪೂರ್ಣ ವಿಫಲವಾಗಿದ್ದು, ದೇಶದ ಅಗರ್ಭ ಶ್ರೀಮಂತರ ಸಾಲ ಮನ್ನಾ ಮಾಡುವ ಸರಕಾರಗಳು ಬಡ ಮಹಿಳೆಯರನ್ನು ನಿರ್ಲಕ್ಷಿಸುತ್ತಿದೆ. ಈ ಹಿನ್ನೆಲೆಯಲ್ಲಿ ಹೋರಾಟ ಅನಿವಾರ್ಯವಾಗಿದ್ದು, ಪ್ರತಿ ಗ್ರಾಮ ಪಂಚಾಯತ್ ಮೂಲಕ ಮನವಿ ಸಲ್ಲಿಸುವುದಲ್ಲದೆ ಮಾರ್ಚ್ 8 ರಂದು ಜಿಲ್ಲಾಧಿಕಾರಿ ಕಚೇರಿಗೆ ಮಹಿಳೆಯರ ನಡಿಗೆ ಕಾರ್ಯಕ್ರಮ ನಡೆಸಲಾಗುತ್ತದೆ ಈ ಹೋರಾಟ ಮಹಿಳೆಯರ ಸ್ವಾಭಿಮಾನವನ್ನು ಎತ್ತಿ ಹಿಡಿದು ಮಹಿಳಾ ಹಕ್ಕುಗಳ ರಕ್ಷಣೆಗಾಗಿ ನಡೆಸುವ ಚಳವಳಿಯಾಗಲಿದೆ ಎಂದರು.

ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಜಿಲ್ಲಾ ಸಹ ಸಂಚಾಲಕ ಶೇಖರ ಲಾಯಿಲ ಮಾತನಾಡಿದರು.

ಪ್ರತಿಭಟನೆಯ ನೇತೃತ್ವವನ್ನು ಸಿಐಟಿಯುನ ಲೋಲಾಕ್ಷಿ, ಋಣಮುಕ್ತಕ್ಕಾಗಿ ಹೋರಾಟ ಸಮಿತಿಯ ಶ್ರೀನಿವಾಸ್ ವಹಿಸಿದ್ದರು.



ರೈತ ಕಾರ್ಮಿಕರ ಹೋರಾಟ ಬೆಂಬಲಿಸಿ ಸಂಚರಿಸುತ್ತಿದೆ ಜಾಥಾ


ರೈತ ಕಾರ್ಮಿಕರ ಹೋರಾಟ ಬೆಂಬಲಿಸಿ ಸಿಪಿಐಎಂ ಬೆಂಗಳೂರು ದಕ್ಷಿಣ ಮತ್ತು ಉತ್ತರ ಜಿಲ್ಲಾ ಸಮಿತಿಗಳ ನೇತೃತ್ವದಲ್ಲಿ ಜಾಥ ಆರಂಭಗೊಂಡಿದೆ. ಜಾಗೃತಿ ಹಾಡುಗಳ ಮೂಲಕ ಆರಂಭವಾದ ಜಾಥವು "ರೈತರು, ಕಾರ್ಮಿಕರ ಜೊತೆ ನಾವು, ಆಹಾರ–ಉದ್ಯೋಗದ ಉಳುವಿಗಾಗಿ, ಸಂವಿಧಾನ ಸಂರಕ್ಷಣಗೆ ನಾವು, ಜನತೆಯ ಹಕ್ಕುಗಳ ರಕ್ಷಣೆಗಾಗಿ, ಮತ್ತು ನಾಗರೀಕ ಸೌಲಭ್ಯಗಳಿಗಾಗಿ ನಾವು, ನೆಮ್ಮದಿಯ ಬೆಂಗಳೂರಿಗಾಗಿ, ಹಾಗೂ ಬೆಲೆ ಏರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ ತಡೆಗಾಗಿ" ಎಂಬ ಘೋಷಣೆಯಡಿಯಲ್ಲಿ ನಡೆಯುತ್ತಿದೆ.

ಈ ಜಾಥವು ಬೆಂಗಳೂರಿನ ಹಲವು ಭಾಗಗಳಲ್ಲಿ ಸಂಚರಿಸಿಸುತ್ತಿದ್ದು, ಕೃಷಿ ಕಾಯ್ದೆ ವಿರೋಧಿಸಿ ದೆಹಲಿಯಲ್ಲಿ ನಡೆಯುತ್ತಿರುವ ರೈತ ಹೋರಾಟದ ಕುರಿತು ಜನರಲ್ಲಿ ಅರಿವು ಮೂಡಿಸುತ್ತಿದೆ. ಇದೇ ಜನವರಿ 26ರ ಗಣರಾಜ್ಯೋತ್ಸವದಂದು ರೈತ, ಕಾರ್ಮಿಕರ ಪರ್ಯಾಯ ಪೆರೇಡ್ ನಡೆಯುತ್ತಿದ್ದು ಆ ಪೆರೇಡ್ ನಲ್ಲಿ ರೈತ, ಕಾರ್ಮಿಕರ ಮಕ್ಕಳಾದ ನಾವೆಲ್ಲರೂ ಭಾಗವಹಿಸಬೇಕು, ರೈತರ ಪರವಾಗಿ ನಿಲ್ಲಬೇಕು ಎಂದು ಜನವಾದಿ ಮಹಿಳಾ ಸಂಘಟನೆಯ ಕೆ.ವಿಮಲಾ ಸಾರ್ವಜನಿಕರಲ್ಲಿ ವಿನಂತಿಸಿಕೊಂಡರು.

ಈ ಜಾಥದ ಆಶಯಗಳನ್ನು ಕುರಿತು ಮಾತನಾಡಿದ ಜನವಾದಿ ಮಹಿಳಾ ಸಂಘಟನೆಯ ರಾಜ್ಯಉಪಾಧ್ಯಕ್ಷೆ ಕೆ.ಎಸ್ ಲಕ್ಷ್ಮೀ ಮಾತನಾಡುತ್ತ ಕಳೆದ ಮೂರು ದಿನಗಳಿಂದ ನಡೆಯುತ್ತಿರುವ ಜಾಥವು ಹಾಡುಗಳ ಮೂಲಕ ಜಾಗೃತಿ ಮೂಡಿಸುತ್ತಿದ್ದು, ಮೂರು ಅಪಾಯಕಾರಿ ಕೃಷಿ ಮಸೂದೆಗಳ ಬಗ್ಗೆ ತಿಳುವಳಿಕೆ ಮೂಡಿಸುತ್ತಿದ್ದಾರೆ. ಬೆವರು ಸುರಿಸ ಬೆಳೆಯನ್ನು ಬೆಳೆದ ರೈತ ತನ್ನ ಬೇವರಿನ ಪಾಲನ್ನು ಸಹ ತೆಗೆದುಕೊಳ್ಳಲಾಗದ ಸ್ಥಿತಿಗೆ ಇಂದು ತಲುಪಿದ್ದಾನೆ. ಮಳೆ ಬಿಸಿಲು ಎನ್ನದೇ ಬೆಳೆ ಬೆಳದ ರೈತನು ಸಾಲದಿಂದ ಆತ್ಮಹತ್ಯೆಮಾಡಿಕೊಳ್ಳುತ್ತಿದ್ದರೆ, ರೈತ ಬೆಳೆದ ತರಕಾರಿ, ಬೆಳೆ ಕಾಳು ಇತ್ಯಾದಿ ಬೆಳೆಯ ಲಾಭವನ್ನು ಅದಾನಿ,

ಪುಟ 6 ಕ್ಕೆ





ಕಾ। ಪಾವೂರು ಬಾಬು ನಿಧನ


ರೈತ ಚಳುವಳಿಯ ಹಿರಿಯ ನಾಯಕರೂ, ಪಾವೂರು ಮಂಡಲ ಪಂಚಾಯತ್ ಉಪಪ್ರಧಾನರೂ, ಹಿರಿಯ ಸಿಪಿಐ(ಎಂ) ನೇತಾರರಾದ ಕಾ।ಬಾಬು ಪೂಜಾರಿ ಭಂಡಾರ ಮನೆಯವರು ದೀರ್ಘಕಾಲದ ಅಸೌಖ್ಯದಿಂದ 22 ಜನವರಿ 2021 ರಂದು ನಿಧನ ಹೊಂದಿದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಕಮ್ಯೂನಿಸ್ಟ್ ಚಳುವಳಿಯ ಹಿರಿಯ ಮುಖಂಡರಾಗಿದ್ದ ಪಾವೂರು ಬಾಬು ಪೂಜಾರಿಯವರು ಉಳ್ಳಾಲ ಪ್ರದೇಶದಲ್ಲಿ ರೈತ ಸಂಘವನ್ನು ಕಟ್ಟಿ ಬೆಳೆಸಿದವರು. 1950 ರಿಂದಲೇ ಖ್ಯಾತ ಕಮ್ಯೂನಿಸ್ಟ್ ಮುಖಂಡರಾದ ಎ.ಕೃಷ್ಣ ಶೆಟ್ಟಿ, ಎಂ.ಎಚ್.ಕೃಷ್ಣಪ್ಪ, ಬಿ.ವಿ.ಕಕ್ಕಿಲ್ಲಾಯ ಅವರೊಂದಿಗೆ ಉಳ್ಳಾಲ ಪ್ರದೇಶದಲ್ಲಿ ರೈತರನ್ನು ಸಂಘಟಿಸಿದರು.

ಗೇಣಿದಾರ ಭೂಮಿ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಮುಂದೆಯೂ ಯು.ಜನಾರ್ಧನ ನಾಯಕ್, ರಾಮಚಂದ್ರ ಉಚ್ಚಿಲ ಅವರೊಂದಿಗೆ ಕರ್ನಾಟಕ ಪ್ರಾಂತ ರೈತ ಸಂಘವನ್ನು ವಿಸ್ತರಿಸುವಲ್ಲಿ ಶ್ರಮಿಸಿದರು. ಈಗ ಕೆಲವು ವರ್ಷಗಳಿಂದ ಅನಾರೋಗ್ಯಪೀಡಿತರಾಗುವವರೆಗೆ ಸುಮಾರು 60 ವರ್ಷಗಳ ಕಾಲ ಕಮ್ಯೂನಿಸ್ಟ್ ಪಕ್ಷದ ಸಕ್ರಿಯ ಕಾರ್ಯಕರ್ತರಾಗಿದ್ದರು. ಸಿಪಿಐ(ಎಂ) ಉಳ್ಳಾಲ ವಲಯ ಸಮಿತಿ ಸದಸ್ಯರಾಗಿಯೂ ದೀರ್ಘಕಾಲ ದುಡಿದಿದ್ದಾರೆ.

ಪಾವೂರು ಬಾಬು ಪೂಜಾರಿಯವರು ಕೆಲವು ಅವಧಿಯಲ್ಲಿ ಪಾವೂರು ಗ್ರಾಮ ಪಂಚಾಯತ್ ಸದಸ್ಯರಾಗಿಯೂ, ಗ್ರಾಮ ಪಂಚಾಯತ್ ಉಪಾಧ್ಯಕ್ಷರಾಗಿಯೂ ಗಣನೀಯ ಸಮಾಜ ಸೇವೆ ಮಾಡಿದ್ದಾರೆ.

ಪಾವೂರು ಬಾಬು ಅವರ ನಿಧನದಿಂದ ದ.ಕ. ಜಿಲ್ಲೆಯಲ್ಲಿ ನಡೆದಿದ್ದ ಸಮರಶೀಲ ರೈತ ಚಳುವಳಿಯ ಮತ್ತೊಂದು ಧ್ರುವತಾರೆಯನ್ನು ಜಿಲ್ಲೆಯು ಕಳೆದುಕೊಂಡಂತಾಗಿದೆ. ಜಿಲ್ಲೆಯ ಪ್ರಾಂತ ರೈತ ಸಂಘ ಮತ್ತು ಸಿಪಿಐ(ಎಂ) ಪಕ್ಷವು ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸಿದೆ.



ರೈತ ಕಾರ್ಮಿಕರ ಹೋರಾಟ ಬೆಂಬಲಿಸಿ ಸಂಚರಿಸುತ್ತಿದೆ ಜಾಥಾ........ ಪುಟ 5 ರಿಂದ



ಅಂಬಾನಿಯಂತಹ ಕಬಂಧ ಬಾಹುಗಳು ಬೇವರೇ ಸುರಿಸದೇ ಸಾರಾಸಗಟಾಗಿ ಲಾಭವನ್ನು ಕಬಳಿಸುತ್ತಿದ್ದಾರೆ. ಆದ್ದರಿಂದ ಸರ್ಕಾರಕ್ಕೆ ಬೆಂಬಲ ಬೆಲೆ ನೀಡಿಬೇಕು ಎಂಬುದು ನಮ್ಮೆಲ್ಲರ ಒತ್ತಾಯ. ರೈತ ಉಳಿದರೆ ದೇಶ ಉಳಿತದೆ, ದೇಶ ಉಳಿದರೆ ನಾವು ಉಳಿಯುತ್ತೇವೆ ಎಂದು ಹೇಳಿದರು.

ದಕ್ಷಿಣ ಜಿಲ್ಲಾ ಸಮಿತಿಯ ಜಾಥದ ನೇತೃತ್ವವನ್ನು ಸಿಪಿಐಎಂ ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಕೆ.ಎನ್ ಉಮೇಶ್ ವಹಿಸಿದ್ದರು. ಜಾಗೃತಿ ಗೀತೆಗಳನ್ನು ಹಾಡುವುದರ ಮೂಲಕ, ಕರಪತ್ರಗಳನ್ನು ಹಂಚಿ ಹೋರಾಟದ ಬಗ್ಗೆ ತಿಳುವಳಿಕೆ ಮೂಡಿಸುವ ದೇಶ್ಯಗಳು ಅಲ್ಲಲ್ಲಿ ಕಾಣುತ್ತಿದ್ದವು. ಈ ಜಾಥದಲ್ಲಿ ವಿದ್ಯಾರ್ಥಿ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು

ಇನ್ನು ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯ ಭಾಗವಾಗಿ ಎರಡನೇ ದಿನದ ಜಾಥಾ, ಉತ್ತರ (ದಾಸರಹಳ್ಳಿ ಪ್ರದೇಶ) ಹಾಗು ಪೂರ್ವ ವಲಯಗಳಲ್ಲಿ (ಕೆ.ಆರ್.ಪುರಂ). ನಡೆಯಿತು. ಈ ಜಾಥದ ಉಸ್ತುವಾರಿಯನ್ನು ಸಿಪಿಐಎಂನ ಬೆಂಗಳೂರು ಉತ್ತರ ಜಿಲ್ಲಾ ಸಮಿತಿ ಕಾರ್ಯದರ್ಶಿ ಪ್ರತಾಪ್ ಸಿಂಹ, ಮುಖಂಡರಾದ ಹೆಚ್ ಎನ್ ಗೋಪಾಲ ಗೌಡ, ಗೌರಮ್ಮ, ಟಿ. ಲೀಲಾವತಿ, ನಾಗರಾಜ್ ನಂಜುಂಡಯ್ಯ, ಹುಳ್ಳಿ ಉಮೇಶ್ ವಹಿಸಿದ್ದರು. ಮತ್ತು ಈ ಜಾಥದ ಕುರಿತು ಮಾತನಾಡಿದರು.







ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಹುತಾತ್ಮರಾದ ನಂದಗಡದ ಅವರ ಸ್ಮಾರಕ ದ ಎದುರು ರೈತ ಕಾರ್ಮಿಕ ವಿರೋಧಿ ನೂತನ ಕಾನೂನುಗಳ ಕುರಿತು ಜನಜಾಗೃತಿ ಮೂಡಿಸಲು ಪ್ರಾರಂಭವಾದ ಪ್ರಚಾರ ಜಾಥಾಕೆ ಸಿಐಟಿಯು ರಾಜ್ಯಾಧ್ಯಕ್ಷರಾದ ಎಸ್. ವರಲಕ್ಷ್ಮಿ ಚಾಲನೆ ನೀಡಿದರು. ಹಿರಿಯ ರೈತ ಮುಖಂಡ ಮಲ್ಲಿಕಾರ್ಜುನ ವಾಲಿ, ಮಹದಾಯಿ ಹೋರಾಟಗಾರ ಅಮೃತ ಇಜಾರಿ, ಸಿಐಟಿಯು ರಾಜ್ಯ ಕಾರ್ಯದರ್ಶಿಗಳಾದ ಮಹೇಶ ಪತ್ತಾರ, ಗೈಬು ಜೈನೆಖಾನ ಮುಖಂಡರಾದ ಎಲ್.ಎಸ್.ನಾಯಕ, ಮಾರುತಿ ಚಿಟಗಿ, ಪೀರು ರಾಠೋಡ ಮುಂತಾದವರು ಉಪಸ್ಥಿತರಿದ್ದರು. ಬೆಳವಣಕಿ ಸಮುದಾಯ ಕಲಾತಂಡದ ಸಂಗಾತಿಗಳು ಬೀದಿನಾಟಕ ಪ್ರದರ್ಶನ ನೀಡಿದರು.

ನಾಗರಿಕ ಹಕ್ಕುಗಳಿಗಾಗಿ ಹೋರಾಟ: ಗಣರಾಜ್ಯ ದಿನದ ಸಂಕಲ್ಪ

ಪ್ರಕಾಶ ಕಾರಟ್



2002ರಲ್ಲಿ ಗುಜರಾತ್‌ನಲ್ಲಿ ಅಲ್ಪಸಂಖ್ಯಾತರ ಹತ್ಯಾಕಾಂಡ ನಡೆಯುತ್ತಿದ್ದ ವೇಳೆ ಅಂದಿನ ರಾಷ್ಟ್ರಪತಿ ಕೆ. ಆರ್. ನಾರಾಯಣನ್ ಅವರನ್ನು ನಿಯೋಗವೊಂದು ಭೇಟಿಯಾಗಿ ಮಧ್ಯಪ್ರವೇಶಕ್ಕೆ ಮನವಿ ಮಾಡಿತ್ತು. ಆಗ ನಾರಾಯಣನ್ ಹೇಳಿದ ಒಂದು ಮಾತಿದು: "ಗುಜರಾತ್‌ನಲ್ಲಿ ಸಂವಿಧಾನ ಕೆಲಸ ಮಾಡುತ್ತಿಲ್ಲ'. ಆಗ ನರೇಂದ್ರ ಮೋದಿ ಗುಜರಾತ್ ಮುಖ್ಯಮಂತ್ರಿ ಆಗಿದ್ದರು.

ಅದಾಗಿ, ಸುಮಾರು ಎರಡು ದಶಕ ಹಾಗೂ ಪ್ರಧಾನಿಯಾಗಿ ಮೋದಿಯವರ ಸುಮಾರು ಏಳು ವರ್ಷದ ಅಧಿಕಾರದ ನಂತರ, ಭಾರತದ ಬಹುತೇಕ ಭಾಗಗಳಲ್ಲಿ ಹಾಗೂ ರಾಜಕೀಯದ ವಿವಿಧ ವಿಭಾಗಗಳಲ್ಲಿ ಸಂವಿಧಾನ ಕೆಲಸ ಮಾಡುತ್ತಿಲ್ಲ.

ನಾವು 72ನೇ ಗಣರಾಜ್ಯ ದಿನವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ ವ್ಯಕ್ತಿ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ಸಂಘಟನೆ ಕಟ್ಟುವ ಹಾಗೂ ಸಭೆ ಸೇರುವ ಸ್ವಾತಂತ್ರ್ಯ ಸಹಿತ ಪ್ರಜೆಗಳ ಮೂಲಭೂತ ಹಕ್ಕುಗಳಿಗೆ ಏನಾಗಿದೆ ಎನ್ನುವುದನ್ನು ಗಮನಿಸುವುದು ಅಗತ್ಯವಾಗಿದೆ.

ನೂರಾರು ಜನರು ಜಾಮೀನು ಸಿಗದೆ ಜೈಲುಗಳಲ್ಲಿ ಕೊಳೆಯುತ್ತಿದ್ದಾರೆ. ಕಾನೂನುಬಾಹಿರ ಚಟುವಟಿಕೆ ತಡೆ ಕಾನೂನು (ಯುಎಪಿಎ) ಅನ್ವಯ ದೇಶದ್ರೋಹದಂಥ ಆರೋಪಗಳಡಿ ಇವರನ್ನು ಬಂಧಿಸಲಾಗಿದೆ. ಅವರ್‍ಯಾರೂ ಕ್ರಿಮಿನಲ್‌ಗಳಲ್ಲ, ಭಯೋತ್ಪಾದಕರೂ ಅಲ್ಲ. ಅವರೆಲ್ಲ ರಾಜಕೀಯ ಅಥವಾ ಸಾಮಾಜಿಕ ಕಾರ್ಯಕರ್ತರು. ವಿಖ್ಯಾತ ಕಾಮಿಡಿಯನ್‌ಗಳೂ ಆಗಿದ್ದಾರೆ. ಅವರಲ್ಲಿ ಭೀಮಾ ಕೋರೆಗಾಂವ್ ಪ್ರಕರಣದಲ್ಲಿ ಬಂಧಿತರಾದ 16 ಬುದ್ಧಿಜೀವಿಗಳು, ವಕೀಲರು ಮತ್ತು ಅಧ್ಯಯನ–ಅಧ್ಯಾಪನಗಳಲ್ಲಿ ತೊಡಗಿದವರಿದ್ದಾರೆ. ಈಶಾನ್ಯ ದೆಹಲಿಯ ಕೋಮು ಗಲಭೆ ಸಂಬಂಧ ಸುಳ್ಳು ಕೇಸ್ ಅಡಿ ಬಂಧಿತರಾದ 19 ವಿದ್ಯಾರ್ಥಿಗಳು, ಸಂಶೋಧನಾ ವಿದ್ವಾಂಸರು ಮತ್ತು ಕಾರ್ಯಕರ್ತರಾಗಿದ್ದಾರೆ. ಉತ್ತರ ಪ್ರದೇಶದ "ಲವ್ ಜಿಹಾದ್' ಸುಗ್ರೀವಾಜ್ಞೆ ಅನ್ವಯ 49 ಜನರ ಬಂಧನವಾಗಿದ್ದು ಅವರಲ್ಲಿ ಮಥುರಾದಲ್ಲಿ ಬಂಧಿತರಾದ ಕಪ್ಪನ್‌ರಂಥ ಪತ್ರಕರ್ತರಿದ್ದಾರೆ. ಮಣಿಪುರದಲ್ಲಿ ಯುಎಪಿಎ ಅಡಿ ಮೂವರು ಹಿರಿಯ ಪತ್ರಕರ್ತರನ್ನು ಬಂಧಿಸಿಡಲಾಗಿದೆ. ಹಾಸ್ಯ ಕಲಾವಿದ (ಕಾಮಿಡಿಯನ್) ಮುನವರ್ ಫಾರೂಕಿ ಅವರನ್ನು ಇಂದೋರ್ ಜೈಲಿನಲ್ಲಿ ಕೂಡಿ ಹಾಕಲಾಗಿದೆ.

ಸಂವಿಧಾನದತ್ತವಾಗಿರುವ ವೈಯುಕ್ತಿಕ ಸ್ವಾತಂತ್ರ್ಯವನ್ನು ತುಳಿದು ಹಾಕಲಾಗಿದೆ. ಯುಎಪಿಎ ಒಂದು ಕರಾಳ ಕಾನೂನಾಗಿದ್ದು ಜಾಮೀನು ಸಿಗುವುದು ಬಹಳ ಕಷ್ಟಕರವಾಗಿದೆ. 2008ರ ನವೆಂಬರ್‌ನಲ್ಲಿ ಮುಂಬಯಿ ಮೇಲೆ ನಡೆದ ಭಯೋತ್ಪಾದಕರ ದಾಳಿ ಹಿನ್ನೆಲೆಯಲ್ಲಿ ಜಾಮೀನಿಗೆ ಸಂಬಂಧಿಸಿದ ಕರಾಳ ನಿಯಮಗಳನ್ನು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಈ ಕಾನೂನಿಗೆ ಸೇರಿಸಿತ್ತು ಎನ್ನುವುದನ್ನು ಗಮನಿಸಬೇಕು. ಕಾನೂನು ಮತ್ತು ಸುವ್ಯವಸ್ಥೆ ವಿಚಾರದಲ್ಲಿ ರಾಜ್ಯಗಳ ಹಕ್ಕುಗಳ ಮೇಲೆ ಸವಾರಿ ಮಾಡುವ ರಾಷ್ಟ್ರೀಯ ಬೇಹುಗಾರಿಕೆ ಸಂಸ್ಥೆ (ಎನ್‌ಐಎ) ಕೂಡ ಯುಪಿಎ ಸರ್ಕಾರದ ಉತ್ಪನ್ನವಾಗಿದೆ. ಮೋದಿ ಸರ್ಕಾರವು ಯುಎಪಿಎ ಮತ್ತು ಎನ್‌ಐಎ ಕಾನೂನುಗಳನ್ನು ಇನ್ನಷ್ಟು ಕಠಿಣಗೊಳಿಸಿದೆ. ಬಹಳಷ್ಟು ತಿದ್ದುಪಡಿಗಳ ಮೂಲಕ ಪ್ರಜೆಗಳ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸಲು ಅವಕಾಶ ಕಲ್ಪಿಸಿದೆ.

ಸಂವಿಧಾನದಲ್ಲಿ ಕಂಡರಿಸಿದ ಅಧಿಕಾರಗಳ ವಿಂಗಡಣೆಯು ನ್ಯಾಯಾಂಗಕ್ಕೆ ಸ್ವತಂತ್ರವಾದ ಪಾತ್ರವನ್ನು ಕಲ್ಪಿಸಿದೆ. ಆದರೆ ಅದು ಈಗ ಗಂಭೀರ ದಾಳಿಗೆ ಒಳಗಾಗಿದೆ. ನ್ಯಾಯಾಂಗದ ಸ್ವತಂತ್ರ ಪಾತ್ರ ಕುಸಿಯುತ್ತಿದೆ. ಸಾಂವಿಧಾನಿಕ ಕೋರ್ಟ್ ಎಂದೇ ಪರಿಗಣಿಸಲಾಗುವ ಸುಪ್ರೀಂ ಕೋರ್ಟ್‌ನಿಂದ ಆರಂಭಿಸಿ ಇಡೀ ನ್ಯಾಯಾಂಗವೇ ನಾಗರಿಕರ ಮೂಲಭೂತ ಹಕ್ಕು ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಉಲ್ಲಂಘನೆಯಲ್ಲಿ ಪಾತ್ರಧಾರಿ ಆಗುತ್ತಿದೆ.

ಸರ್ವೋಚ್ಚ ನ್ಯಾಯಾಲಯ ಹೆಚ್ಚೆಚ್ಚಾಗಿ ಕಾರ್ಯಾಂಗೀಯ ಕೋರ್ಟ್ ಆಗುತ್ತಿದೆ. 2019ರ ಏಪ್ರಿಲ್‌ನಲ್ಲಿ ಸುಪ್ರೀಂ ಕೋರ್ಟ್ ನೀಡಿದ ವಾಟಾಳಿ ಪ್ರಕರಣದ ತೀರ್ಪನ್ನು ಇಲ್ಲಿ ಗಮನಿಸಬೇಕು. ಯುಎಪಿಎ ಅಡಿ ಬಂಧಿತರಾದವರು ಸಲ್ಲಿಸಿದ ಜಾಮೀನು ಅರ್ಜಿ ಪರಿಶೀಲಿಸುವಾಗ, ಪ್ರಥಮ ಮಾಹಿತಿ ವರದಿ, ಅಂದರೆ ಎಫ್‌ಐಆರ್‌ನಲ್ಲಿ ಮಾಡಲಾಗಿರುವ ಆರೋಪಗಳೇ ಸರಿ ಎಂದು ಕೋರ್ಟ್‌ಗಳು ಭಾವಿಸಬೇಕು. ಆರೋಪ ತಪ್ಪೆಂದು ಸಾಬೀತುಪಡಿಸುವ ಹೊಣೆ ಆರೋಪಿಯದ್ದಾಗಿರುತ್ತದೆ ಎಂದು ಈ ತೀರ್ಪು ಹೇಳಿದೆ. ಇದರಿಂದಾಗಿ ಯುಎಪಿಎ ಅಡಿ ಆರೋಪ ಹೊತ್ತಿರುವವರು ಜಾಮೀನು ಪಡೆಯುವುದು ಅಕ್ಷರಶಃ ಕಷ್ಟವಾಗಿದೆ. ಭೀಮಾ ಕೋರೆಗಾಂವ್ ಪ್ರಕರಣದ ಮೂವರು ಆರೋಪಿಗಳಿಗೆ ಜಾಮೀನು ನಿರಾಕರಿಸಿದ ಬಾಂಬೆ ಹೈ ಕೋರ್ಟ್, ಸುಪ್ರೀಂ ಕೋರ್ಟ್‌ನ ಈ ತೀರ್ಪನ್ನೇ ಉಲ್ಲೇಖಿಸಿದೆ.

ಉತ್ತರ ಪ್ರದೇಶ ಮತ್ತು ಮಧ್ಯ ಪ್ರದೇಶದಂಥ ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಸಂವಿಧಾನದ ಸಿದ್ಧಾಂತಗಳು ಅನ್ವಯವಾಗುವುದೇ ಇಲ್ಲ. ಅದರಲ್ಲೂ ವಿಶೇಷವಾಗಿ ಮುಸ್ಲಿಮರ ಪಾಡಂತೂ ಇನ್ನೂ ಸಂಕಟಮಯ. ಮುಸ್ಲಿಂ ಹುಡುಗನೊಬ್ಬ ಸಾರ್ವಜನಿಕ ರಸ್ತೆಯಲ್ಲಿ ಹಿಂದೂ ಹುಡುಗಿಯೊಂದಿಗೆ ನಡೆದುಕೊಂಡು ಹೋಗುತ್ತಿದ್ದರೆ ಆತನನ್ನು ಸುತ್ತುವರಿದು ಕಿರುಕುಳ ನೀಡಲಾಗುತ್ತದೆ. ಯಾವುದೇ ಹಿಂದುತ್ವ ಸಂಘಟನೆ ದೂರು ನೀಡಿದರೆ ಆತನನ್ನು ಜೈಲಿಗೆ ತಳ್ಳಲಾಗುತ್ತದೆ. ಮುನಾವರ್ ಫಾರೂಕಿ ಹಿಂದೂ ದೇವತೆಗಳನ್ನು ಅವಮಾನಿಸಿದ್ದಾರೆ ಅಥವಾ ಧಾರ್ಮಿಕ ಭಾವನೆಗಳಿಗೆ ಘಾಸಿ ಮಾಡಿದ್ದಾರೆ ಎನ್ನುವುದಕ್ಕೆ ಯಾವುದೇ ಪುರಾವೆಯಿಲ್ಲ ಎಂದು ಪೊಲೀಸರು ಅಧಿಕೃತವಾಗಿ ಹೇಳಿದ್ದರೂ ಫಾರೂಕಿಯವರನ್ನು ಮೂರು ವಾರಗಳಿಂದ ಜೈಲಿನಲ್ಲಿಡಲಾಗಿದೆ. ಸ್ಥಳೀಯ ಬಿಜೆಪಿ ಶಾಸಕನ ಮಗ ಫಾರೂಕಿ ವಿರುದ್ಧ ದೂರು ನೀಡಿದ್ದಾನೆ ಎನ್ನುವುದಷ್ಟೆ ಇಲ್ಲಿ ಮುಖ್ಯ ಅಂಶವಾಗಿದೆ. ರಾಜ್ಯದಲ್ಲಿ ಇಂಥ ಅಂಧಾದುಂಧಿ ಆಡಳಿತವೇ ನಡೆಯುತ್ತಿರುವುದು. ಹಿಂದುತ್ವ ಗುಂಪು, ಪೊಲೀಸರು ಮತ್ತು ನ್ಯಾಯಾಲಯ –ಈ ಮೂರೂ ಏಕತ್ರವಾಗಿ ಕಾರ್ಯ ನಿರ್ವಹಿಸುತ್ತವೆ.

ನಾಗರಿಕರ ಹಕ್ಕುಗಳ ಮೇಲಿನ ಈ ದಾಳಿಯು ಜೀವನ ಮತ್ತು ಸ್ವಾತಂತ್ರ್ಯದ ಪರಿಧಿಯಾಚೆಗೂ ಕೆಲಸ ಮಾಡುತ್ತಿದೆ. ಆಹಾರದ ಹಕ್ಕು, ಉದ್ಯೋಗದ ಹಕ್ಕು ಮತ್ತು ಆರೋಗ್ಯ ಹಾಗೂ ಶಿಕ್ಷಣದ ಸಮಾನ ಅವಕಾಶಗಳು ಕೂಡ ಭೀಕರ ದಾಳಿಗೆ ಒಳಗಾಗಿವೆ. ಕೊರೊನಾ ಸಾಂಕ್ರಾಮಿಕತೆ ಮತ್ತು ಮೋದಿ ಸರ್ಕಾರ ಅದನ್ನು ನಿಭಾಯಿಸಿದ ರೀತಿಯು ಅಸಮಾನತೆ, ಹಸಿವು ಮತ್ತು ನಿರುದ್ಯೋಗ ಸಮಸ್ಯೆಗಳನ್ನು ಉಲ್ಬಣಗೊಳಿಸಿದೆಯೇ ಹೊರತು ಬೇರೇನನ್ನೂ ಮಾಡಿಲ್ಲ.



2020ರಲ್ಲಿ 107 ದೇಶಗಳ ಪೈಕಿ, ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಭಾರತ 94ನೇ ಸ್ಥಾನಕ್ಕೆ ಕುಸಿದಿದೆ. 2019ಕ್ಕೆ ಹೋಲಿಸಿದರೆ 2020ರಲ್ಲಿ 1.7 ಕೋಟಿ ಕಡಿಮೆ ಜನರು ಉದ್ಯೋಗ ಪಡೆದಿದ್ದಾರೆ. 2020 ಡಿಸೆಂಬರ್‌ನಲ್ಲಿ ನಿರುದ್ಯೋಗ ದರ ಶೇಕಡ 9.1ಕ್ಕೆ ಏರಿದೆ ಎಂದು ಸಿಎಂಐಇ ಅಂಕಿಸಂಖ್ಯೆ ತಿಳಿಸಿದೆ.

ಅನಾರೋಗ್ಯ ಮತ್ತು ದಾರಿದ್ರ್ಯವು ಜನರನ್ನು ಕಿತ್ತು ತಿನ್ನುತ್ತಿದ್ದರೂ ಮೋದಿ ಸರ್ಕಾರ ಮಾನಮರ್ಯಾದೆ ಬಿಟ್ಟು ಬೆರಳೆಣಿಕೆಯ ದೊಡ್ಡ ಉದ್ಯಮಿಗಳ ಹಿತವನ್ನು ರಕ್ಷಿಸಲು ಎಲ್ಲ ಪ್ರಯತ್ನಗಳನ್ನು ನಡೆಸಿದೆ. 2020ರಲ್ಲಿ ಭಾರತದ ಬಿಲಿಯಾಧಿಪತಿಗಳ ಸಂಖ್ಯೆ ಅತ್ಯಂತ ಹೆಚ್ಚು, ಅಂದರೆ 90ಕ್ಕೆ ಏರಿದೆ. 2020 ಸೆಪ್ಟೆಂಬರ್ ತ್ರೈಮಾಸಿಕದ ಅಂತ್ಯಕ್ಕೆ ಕಾರ್ಪೊರೇಟ್ ವಲಯ ಬಂಪರ್ ಫಲ ಗಳಿಸಿದೆ. ಲಾಕ್‌ಡೌನ್ ನಡುವೆಯೂ 4,234 ಕಂಪೆನಿಗಳ ಲಾಭದಲ್ಲಿ ಅಪಾರವಾದ ಏರಿಕೆ ದಾಖಲಾಗಿದೆ. ಒಟ್ಟಾರೆ ಲಾಭ ಶೇಕಡ 569ರಷ್ಟು ಹೆಚ್ಚಾಗಿದೆ. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇಕಡ 50ರಷ್ಟು ಕಂಪೆನಿಗಳು ಒಂದು ವರ್ಷದ ಹಿಂದಿನ ಅವಧಿಗೆ ಹೋಲಿಸಿದರೆ ಉದ್ಯೋಗಿಗಳ ವೇತನವನ್ನು ಕಡಿತ ಮಾಡಿವೆ. ಶೇಕಡ 70ರಷ್ಟು ಲಿಸ್ಟೆಡ್ ಕಂಪೆನಿಗಳ ಉದ್ಯೋಗಿಗಳ ವೇತನವು ಹಣದುಬ್ಬರ–ಹೊಂದಾಣಿಕೆ ವಿಚಾರದಲ್ಲಿ ಕುಸಿತವಾಗಿದೆ.

ಒಂದೆಡೆ ಅಪಾರ ಲಾಭ, ಇನ್ನೊಂದೆಡೆ ವೇತನದಲ್ಲಿ ಗಣನೀಯ ಕುಸಿತ–ಇದು ವರ್ಗ ಶೋಷಣೆ ತೀವ್ರಗೊಳ್ಳುತ್ತಿರುವುದರ ಕೊಳಕು ಮುಖವಾಗಿದೆ.

ಈ ಹಿಂದುತ್ವ–ನವಉದಾರವಾದಿ ವ್ಯವಸ್ಥೆಯನ್ನು ಮುಂದೊತ್ತಲು ನಾಗರಿಕರ ಪ್ರತಿಯೊಂದು ಸಾಂವಿಧಾನಿಕ ಹಕ್ಕನ್ನು ದಮನಿಸಲಾಗುತ್ತಿದೆ. "ಸಂವಿಧಾನ ಎಷ್ಟೇ ಉತ್ತಮವಾದರೂ ಅದನ್ನು ಅನುಷ್ಠಾನಗೊಳಿಸ ಬೇಕಾದವರು ಕೆಟ್ಟವರಾದರೆ ಸಂವಿಧಾನವೂ ಅಷ್ಟೇ ಕೆಟ್ಟದಾಗುವುದು ಖಚಿತ" ಎಂದು ಡಾ. ಬಿ.ಆರ್. ಅಂಬೇಡ್ಕರ್ ಎಚ್ಚರಿಸಿದ್ದರು. "ಈ ಕೆಟ್ಟ ಮಂದಿ' ಸಂವಿಧಾನವನ್ನು ನಾಶ ಮಾಡುತ್ತಿದ್ದಾರೆ.



ನಾಗರಿಕರ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಹಕ್ಕುಗಳಿಗಾಗಿ ಹೋರಾಡಲು ಪಣ ತೊಡಲು ಗಣತಂತ್ರ ದಿನ ಒಂದು ಸಂದರ್ಭವಾಗಬೇಕು. ಅಂದು ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ನಡೆಯಲಿರುವ ಕಿಸಾನ್ ಟ್ರ್ಯಾಕ್ಟರ್ ರ್‍ಯಾಲಿ ಈ ಹೋರಾಟದ ಒಂದು ಉತ್ಕೃಷ್ಟ ಉದಾಹರಣೆ ಆಗಲಿದೆ. ಸಂವಿಧಾನವನ್ನು ನಾಶ ಮಾಡುತ್ತಿರುವ ಹಿಂದುತ್ವವಾಲಾಗಳನ್ನು ಸೋಲಿಸಲು ರಾಜಕೀಯ ಸಂಘರ್ಷವನ್ನು ಮುಂದಕ್ಕೊಯ್ಯುವುದು ಅನಿವಾರ್ಯವಾಗಿದೆ.

ಹಿಂದುತ್ವ–ನವಉದಾರವಾದಿ ವ್ಯವಸ್ಥೆಯನ್ನು ಮುಂದೊತ್ತಲು ನಾಗರಿಕರ ಪ್ರತಿಯೊಂದು ಸಾಂವಿಧಾನಿಕ ಹಕ್ಕನ್ನು ದಮನಿಸಲಾಗುತ್ತಿದೆ. "ಸಂವಿಧಾನ ಎಷ್ಟೇ ಉತ್ತಮವಾದರೂ ಅದನ್ನು ಅನುಷ್ಠಾನಗೊಳಿಸ ಬೇಕಾದವರು ಕೆಟ್ಟವರಾದರೆ ಸಂವಿಧಾನವೂ ಅಷ್ಟೇ ಕೆಟ್ಟದಾಗುವುದು ಖಚಿತ" ಎಂದು ಡಾ. ಬಿ.ಆರ್. ಅಂಬೇಡ್ಕರ್ ಎಚ್ಚರಿಸಿದ್ದರು. "ಈ ಕೆಟ್ಟ ಜನರ ಕೂಟ' ಸಂವಿಧಾನವನ್ನು ನಾಶ ಮಾಡುತ್ತಿದೆ.
ನಾಗರಿಕರ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಹಕ್ಕುಗಳಿಗಾಗಿ ಹೋರಾಡಲು ಪಣ ತೊಡಲು ಗಣತಂತ್ರ ದಿನ ಒಂದು ಸಂದರ್ಭವಾಗಬೇಕು. ಅಂದು ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ನಡೆಯಲಿರುವ ಕಿಸಾನ್ ಟ್ರ್ಯಾಕ್ಟರ್ ರ್‍ಯಾಲಿ ಈ ಹೋರಾಟದ ಒಂದು ಉತ್ಕೃಷ್ಟ ಉದಾಹರಣೆ ಆಗಲಿದೆ.

ಕನ್ನಡಕ್ಕೆ: ವಿಶ್ವ


ಕಿಸಾನ್ ಸಭಾ ಸಂಘಟಿಸಿದ ಪಂಜಿನ ಮೆರವಣಿಗೆ


ಪ್ರತಿ ದಿನದ ಜನಸಭೆ

ರೈತರ ದೆಹಲಿ ಕದನಕಣದ ನೇರ ವರದಿ – 2

‘ದೆಹಲಿಯ ರೈತರ ಪ್ರತಿಭಟನೆ ಇಡೀ ದೇಶದ ಪ್ರತಿಭಟನೆ’

ಕರ್ನಾಟಕದ ಮಂತ್ರಿ ಬಸವನ ಗೌಡ ಪಾಟೀಲ್ ಯತ್ನಾಳ್ ದೆಹಲಿ ರೈತ ಚಳುವಳಿಯ ಬಗ್ಗೆ ಪ್ರತಿಕ್ರಿಯಿಸುತ್ತ ಅಲ್ಲಿ ಭಾಗವಹಿಸಿರುವವರೆಲ್ಲಾ ಶ್ರೀಮಂತ ರೈತರು. ಅವರು ಶೋಕಿಗಾಗಿ ಪ್ರತಿಭಟನೆ ನಡೆಸುತ್ತಿದ್ದಾರೆ ಎಂದು ಹೇಳಿದ್ದಾರೆ. ಅಗತ್ಯ ಬಿದ್ದರೆ ನಾವುಗಳೇ ಚಂದ ಎತ್ತಿ ಯತ್ನಾಳ್ ಗೆ ಟಿಕೇಟ್ ಮಾಡಿಕೊಡೋಣ. ಆತ ಒಮ್ಮೆ ಶಹಜಾನ್ ಪುರ ಗಡಿಗೆ ಬಂದು ಇಲ್ಲಿರುವ ಪ್ರತಿಭಟನಾ ನಿರತ ರೈತರನ್ನು ಮಾತನಾಡಿಸಿ ಅವರ ಹಿನ್ನೆಲೆಯನ್ನು ಕೇಳಲಿ, ಇಲ್ಲ ತನ್ನ ಮಾತನ್ನು ವಾಪಸ್ ತೆಗೆದುಕೊಳ್ಳಲಿ.


ಮುಸ್ಲಿಂ ಸಮುದಾಯದಿಂದ ಚಹಾ–ತಿಂಡಿ ಲಂಗರ್


ಹೆದ್ದಾರಿಯಲ್ಲಿ ಟಾರ್ಪಾಲ್ ಟೆಂಟ್ ಹಾಕಿ ವಾಸ್ತವ್ಯ



ಕಿಸಾನ್ ಸಭಾ ಕ್ಯಾಂಪ್ ಆಫೀಸ್


ದಿನಾ ಉಪವಾಸ ಸತ್ಯಾಗ್ರಹ

ಶಹಜಾನ್ ಪುರ್ ಗಡಿ (ಜನವರಿ 15)

ಹರಿಯಾಣ, ರಾಜಸ್ಥಾನ ಮತ್ತು ದೆಹಲಿಯ ಗಡಿಭಾಗದಲ್ಲಿರು ಶಹಜಾನ್ ಪುರ್ ಗಡಿ ದೆಹಲಿಯಿಂದ ಸುಮಾರು 110 ಕಿಲೋಮೀಟರ್ ದೂರದಲ್ಲಿದೆ. ಇಂದು ಬೆಳಗ್ಗೆ ನವದೆಹಲಿಯಿಂದ ಹೊರಟವರು ನೇರವಾಗಿ ಬಂದು ಶಹಜಾನ್ ಪುರ ಬಾರ್ಡರ್ ತಲುಪಿದೆವು. ಸಿಂಗು ಗಡಿಯ ರೀತಿಯಲ್ಲಿಯೇ ಇಲ್ಲಿಯೂ ರಾಷ್ಟ್ರೀಯ ಹೆದ್ದಾರಿಗೆ ಅಡ್ಡಲಾಗಿ ಟ್ರಕ್ ಗಳನ್ನೇ ನಿಲ್ಲಿಸಲಾಗಿದೆ. ಮಾತ್ರವಲ್ಲ ಮನುಷ್ಯರು ಸುಲಭವಾಗಿ ಹತ್ತಿ ಇಳಿಯದಂತೆ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಜೆಸಿಬಿಗಳಲ್ಲಿ ಅಗೆದು ಆಳವಾದ ಗುಂಡಿಗಳನ್ನು ನಿರ್ಮಿಸಲಾಗಿದೆ. ಇಂತಹ ಸಂದರ್ಭಗಳಲ್ಲಿ ಅದೇ ಹೆದ್ದಾರಿಯನ್ನೇ ತಮ್ಮ ಪ್ರತಿಭಟನಾ ವೇದಿಕೆಯನ್ನಾಗಿ ರೈತರು ಮಾರ್ಪಡಿಸಿಕೊಂಡಿದ್ದಾರೆ. ಈ ಗಡಿಯಲ್ಲಿ ಹರಿಯಾಣ, ಪಂಜಾಬ್, ರಾಜಸ್ಥಾನ್, ಒಡಿಸ್ಸಾ, ಕೇರಳ, ಜಮ್ಮು ಕಾಶ್ಮೀರ, ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ಆಂಧ್ರಪ್ರದೇಶ, ಕರ್ನಾಟಕ ರಾಜ್ಯಗಳಿಂದ ರೈತರು ಮತ್ತು ಕೂಲಿಕಾರರು, ವಿದ್ಯಾರ್ಥಿ, ಯುವಜನರು, ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದಾರೆ.


ನಾವು ಸ್ಥಳಕ್ಕೆ ಆಗಮಿಸಿದಾಗ ಕೇರಳದಿಂದ ಬಸ್ಸುಗಳಲ್ಲಿ ನಾಲ್ಕು ದಿನಗಳ ಕಾಲ ಪ್ರಯಾಣ ಮಾಡಿ ಆಗಮಿಸಿದ್ದ ರೈತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಈ ತಂಡದ ನೇತೃತ್ವ ವಹಿಸಿದ್ದ ಅಖಿಲ ಭಾರತ ಕಿಸಾನ್ ಸಭಾದ ಕೇರಳದ ಪ್ರಧಾನ ಕಾರ್ಯದರ್ಶಿ ಬಾಲಗೋಪಾಲ್ ಮಾತನಾಡುತ್ತ ‘ಸಾವಿರಾರು ಸಂಖ್ಯೆಯಲ್ಲಿ ದೆಹಲಿಯತ್ತ ಹೊರಟ ನಮ್ಮನ್ನ


ಉಚಿತ ಊಟದ ಧಾಬಾ

ಕರ್ನಾಟಕದ ಬಿಜೆಪಿ ಸರ್ಕಾರ ಗಡಿಗಳಲ್ಲಿ ತೊಂದರೆ ಕೊಡುವುದರ ಮೂಲಕ ತಡೆಯಲು ಪ್ರಯತ್ನಿಸಲಾಯಿತು ಆದರೆ ನಾವು ಅವುಗಳನ್ನೆಲ್ಲ ಎದುರಿಸಿ ಇಲ್ಲಿಗೆ ಬಂದು ಸೇರಿದ್ದೇವೆ.’ ಎಂದರು.

‘ಈ ಪ್ರತಿಭಟನೆ ಉತ್ತರ ಭಾರತದ ರೈತರ ಪ್ರತಿಭಟನೆ ಮಾತ್ರವಲ್ಲ ಇದು ಇಡೀ ದೇಶದ ಪ್ರತಿಭಟನೆ. ಕೇರಳವು ಇದೇ ದೇಶದಲ್ಲಿರುವುದರಿಂದ ನಾವು ಇಲ್ಲಿಗೆ ಬಂದಿದ್ದೇವೆ. ಈ ಚಳುವಳಿ ನಿರ್ಣಾಯಕ ಹಂತಕ್ಕೆ

ಪುಟ 10 ಕ್ಕೆ


ಯತ್ನಾಳ್ ಅವರ ಶ್ರೀಮಂತ ರೈತ – 1 !


ಯತ್ನಾಳ್ ಅವರ ಶ್ರೀಮಂತ ರೈತ – 2 !


ಆರು ತಿಂಗಳ ದಾಸ್ತಾನು ?


ಮಹಿಳಾ ರೈತ ದಿನದ ಸಭೆ – ಮಹಿಳೆಯರಿಗೆ ಸೀಟು ಬಿಟ್ಟ ಪುರುಷರು


ಮಹಿಳಾ ರೈತ ದಿನದ ಸಂಭ್ರಮ – ಹಾಡು ಕುಣಿತ

ರೈತರ ದೆಹಲಿ ಕದನಕಣದ ನೇರ ವರದಿ – 3



ಮಹಿಳಾ ರೈತ ದಿನದ ಜನಸಭೆ

ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು


ಹೆದ್ದಾರಿಯಲ್ಲೇ ಅನ್ನ ದಾಸೋಹ


ಲಂಗರ್ ನಲ್ಲಿ ಅಡುಗೆಗೆ ತಯಾರಿ


ಪಲ್ವಲ್ ನ ಟೆಂಟು ಮನೆಗಳು

ಪಲ್ವಲ್ ಗಡಿ (18 ಜನವರಿ 2021)

ದೆಹಲಿಯಿಂದ ಸುಮಾರು 96 ಕಿಲೋಮೀಟರ್ ದೂರವಿರುವ ಪಲ್ವಲ್ ಗೆ ಹೋಗಬೇಕಾದರೆ ನೇರವಾಗಿ ಬಸ್ ವ್ಯವಸ್ಥೆ ಇಲ್ಲ. ಸ್ವಲ್ಪ ದೂರ ಮೆಟ್ರೋ ದಲ್ಲಿ ಸ್ವಲ್ಪ ದೂರ ಆಟೋದಲ್ಲಿ ಹೀಗೆ ಹೋಗಬೇಕಾಗುತ್ತದೆ. ರೈತರನ್ನು ಪೋಲೀಸರು ಹೆದ್ದಾರಿಯಲ್ಲಿ ಬ್ಲಾಕ್ ಮಾಡಿರುವುದರಿಂದ ನೇರವಾಗಿ ಯಾವ ಖಾಸಗೀ ವಾಹನಗಳೂ ಅತ್ತ ಬರದಂತಹ ಸ್ಥಿತಿ. ನಾವು ತಲುಪಬೇಕಾಗಿದ್ದ ಗುರಿಯ ಅರ್ದಕ್ಕೆ ಮಾತ್ರ ಮೆಟ್ರೋ ಸೌಲಭ್ಯವಿರುವುದು. ಇನ್ನುಳಿದ ಅರ್ದಕ್ಕೆ ಬಸ್ಸು ಅಥವಾ ಆಟೋ, ಟ್ಯಾಕ್ಸಿ ಮಾಡಿಕೊಂಡು ಹೋಗಬೇಕು. ಮೆಟ್ರೊ ಮತ್ತು ಎರಡು ವಾಹನಗಳನ್ನು ಬದಲಾಯಿಸಿ ಕೊನೆಗೂ ಪಲ್ವಲ್ ಗಡಿಯನ್ನ ತಲುಪಿದೆವು.

ಈ ಗಡಿಯಲ್ಲಿ ಉಳಿದ ಗಡಿಗಳಿಗೆ ಹೋಲಿಸಿದರೆ ಟೆಂಟ್ ಗಳ ಸಂಖ್ಯೆ ಸ್ವಲ್ಪ ಕಡಿಮೆ ಇದ್ದರೂ ಹೋರಾಟದ ಕಿಚ್ಚಿಗೇನು ಇಲ್ಲಿ ಕಡಿಮೆಯಿಲ್ಲ. ಇಂದು ಎಲ್ಲಾ 5 ಗಡಿಗಳಲ್ಲಿ ಮತ್ತು ದೇಶದೆಲ್ಲೆಡೆ ರೈತ ಮಹಿಳಾ ದಿನವನ್ನಾಗಿ ಆಚರಿಸಲು ಸಂಯುಕ್ತ ಕಿಸಾನ್ ಮೋರ್ಚ ನಿರ್ದರಿಸಿತ್ತು. ಅದರಂತೆ ಎಲ್ಲೆಡೆಗಳಿಂದ ರೈತ ಮಹಿಳೆಯರು ದೊಡ್ಡ ಪ್ರಮಾಣದಲ್ಲಿ ಬಂದು ಚಳುವಳಿಯನ್ನು ಸೇರಿಕೊಳ್ಳುತ್ತಿದ್ದರು ಪಲ್ವಲ್ ಗಡಿಯಲ್ಲಿ ಪ್ರಧಾನ ವೇದಿಕೆಯ ಸುತ್ತಲಿನ ನಾಲ್ಕೈದು ರಸ್ತೆಗಳ ಮೂಲಕ ಮಹಿಳೆಯರು ಕೈಯಲ್ಲಿ ತ್ರಿವರ್ಣ ಧ್ವಜಹಿಡಿದು ಘೋಷಣೆಗಳನ್ನು ಕೂಗುತ್ತಾ ದಂಡು ದಂಡಾಗಿ ಬರುತ್ತಿರುವುದನ್ನು ನೋಡಿದರೆ "ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು" ಎಂಬ ಕವಿವಾಣಿ ನೆನಪಿಗೆ ಬರುತ್ತಿತ್ತು.

ಪಲ್ವಲ್ ಎಂಬ ಈ ಪ್ರದೇಶ ಸ್ವಾತಂತ್ರ್ಯ ಚಳುವಳಿಯಲ್ಲಿ ಬ್ರಿಟೀಷರ ವಿರುದ್ಧ ಸಮರ ಸಾರಿದ್ದ ಐತಿಹಾಸಿಕ ಪ್ರದೇಶವಾಗಿರುವುದರಿಂದ ಇದನ್ನ ಕ್ರಾಂತಿ ಮೈದಾನ್ ಎಂದು ನಾಮಕರಣ ಮಾಡಲಾಗಿದೆ. ಈಗ ಅದೇ ರೀತಿಯ ಮತ್ತೊಂದು ಐತಿಹಾಸಿಕ ಚಳುವಳಿಯನ್ನು ನಡೆಸಿ ಅಂದು ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪನಿಯಿಂದ ಸ್ವಾತಂತ್ರ್ಯ ಪಡೆದಂತೆ ಇಂದು ಮೋದಿ ಸರ್ಕಾರ ಮತ್ತು ಕಾರ್ಪೊರೇಟ್ ಕಂಪನಿಗಳಿಂದ ಸ್ವಾತಂತ್ರ್ಯ ವನ್ನ ಪಡೆದೇ ಪಡೆಯುತ್ತೇವೆ. ಅಲ್ಲಿಯವರೆಗೆ ನಾವುಗಳು ಈ ಹೋರಾಟದ ಕಣದಿಂದ ಹಿಂದೆ ಸರಿಯುವ ಮಾತೇ ಇಲ್ಲ. ನಮ್ಮ ಹೆಣಗಳು ವಾಪಸ್ ಊರುಗಳಿಗೆ ಹೋಗುತ್ತವೆಯೇ ಹೊರತು ನಾವುಗಳು ಬರಿಗೈಯಲ್ಲಿ ಹಿಂದಿರುಗುವುದಿಲ್ಲ ಎಂದು ಇಲ್ಲಿನ ರೈತರು

ಪುಟ 10 ಕ್ಕೆ


ರೈತ ಮಹಿಳೆ ಟ್ರಾಕ್ಟರ್ ನಲ್ಲಿ



ಜನವರಿ 26ರ ಟ್ರಾಕ್ಟರ್ ಪರೇಡ್ ಗೆ ತಾಲೀಮು


ಎಲ್ಲ ವಯಸ್ಸಿನ ಮಹಿಳೆಯರೂ ಹೋರಾಟದಲ್ಲಿ ಭಾಗಿ


ಹೆದ್ದಾರಿಯಲ್ಲೇ ರಕ್ತದಾನ


ಮಹಿಳಾ ರೈತ ದಿನ – ಸ್ಕೀಂ ನೌಕರರ ಸೌಹಾರ್ದ ಬೆಂಬಲ

‘ದೆಹಲಿಯ ರೈತರ ಪ್ರತಿಭಟನೆ ಇಡೀ ದೇಶದ ಪ್ರತಿಭಟನೆ’............ ಪುಟ 8 ರಿಂದ

ತಲುಪುವುವ ವರೆಗೆ ನಾವುಗಳು ಇಲ್ಲಿಯೇ ಇರುತ್ತೇವೆ’ ಎಂದು ಘೋಷಿಸಿದರು. ಜೊತೆಯಲ್ಲಿದ ರಾಜ್ಯಸಭಾ ಸದಸ್ಯರು ಮತ್ತು ಕೇರಳ ಕಿಸಾನ್ ಸಭಾದ ಅಧ್ಯಕ್ಷರಾದ ಕೆ.ಕೆ.ರಾಘೇಶ್ ರವರು ಪ್ರತಿಭಟನೆ ಪ್ರಾರಂಭವಾದಾಗಿನಿಂದ ಇಲ್ಲಿಯೇ ಉಳಿದಿದ್ದಾರೆ. ಮತ್ತೊಬ್ಬ ರೈತನಾಯಕ ಸ್ವರಾಜ್ ಇಂಡಿಯಾದ ಯೋಗೇಂದ್ರ ಯಾದವ್ ಕೇರಳದ ರೈತರನ್ನ ಸ್ವಾಗತಿಸುವ ಮೂಲಕ ಬರಮಾಡಿಕೊಂಡರು.

ಈ ಗಡಿಯಲ್ಲಿ ನಮಗೆ ಸಿಂಗು ಗಡಿಯಲ್ಲಿರುವ ವಾತಾವರಣಕ್ಕಿಂತ ಸ್ವಲ್ಪ ಭಿನ್ನವಾದ ವಾತಾವರಣ ಕಾಣುತ್ತದೆ. ಏಕೆಂದರೆ ಸಿಂಗು ದೆಹಲಿ ನಗರಕ್ಕೆ ಅಂಟಿಕೊಂಡಂತೆ ಅತ್ಯಂತ ಸಮೀಪದಲ್ಲಿರುವ ಗಡಿ. ಮಾತ್ರವಲ್ಲ ಅದು ಅತ್ಯಂತ ಜನವಸತಿ ಪ್ರದೇಶ. ಆದರೆ ಶಹಜಾನ್ ಪುರ್ ಬಾರ್ಡರ್ ದೆಹಲಿಯಿಂದ ತುಂಬ ದೂರವಿರುವುದರಿಂದ ಅಕ್ಕಪಕ್ಕ ಹಳ್ಳಿಗಳೂ ದೂರವಿರುವುದರಿಂದ ಇಲ್ಲಿ ಪ್ರತಿಭಟನಾಕಾರರನ್ನು ಹೊರತುಪಡಿಸಿ ಉಳಿದವರು ಕಡಿಮೆ. ಸುತ್ತಲೂ ಅಚ್ಚಹಸಿರಿನಿಂದ ಕೂಡಿದ ವಿಶಾಲವಾದ ಸಾಸಿವೆಯ ಹೊಲಗಳು ಅದರಲ್ಲಿನ ಹಳದಿಯ ಹೂವುಗಳು ನೋಡಲು ಕಣ್ಣಿಗೆ ಆನಂದ. ಇಂತಹ ಹೊಲಗಳಲ್ಲಿ ಕೆಲಸ ಮಾಡಬೇಕಾಗಿದ್ದ ರೈತರು ಅದೇ ಹೊಲಗಳ ಪಕ್ಕದ ಹೆದ್ದಾರಿಗಳಲ್ಲಿ ಹಗಲು ರಾತ್ರಿ ಪ್ರತಿಭಟನೆ ನಡೆಸಬೇಕಾಗಿ ಬಂದ ಕೇಂದ್ರ ಸರ್ಕಾರದ ನೀತಿಗಳನ್ನು ರೈತರು ಶಪಿಸುತ್ತಿದ್ದಾರೆ.

ಸುತ್ತಲಿನ ಹಸಿರು ಪರಿಸರದ ಮಧ್ಯೆ ಕಿಸಾನ್ ಸಭಾದ ಕೆಂಬಾವುಟಗಳ ಹಾರಾಟ ಜೋರಾಗಿಯೇ ಇತ್ತು.

ಕರ್ನಾಟಕದ ಮಂತ್ರಿ ಬಸವನ ಗೌಡ ಪಾಟೀಲ್ ಯತ್ನಾಳ್ ದೆಹಲಿ ರೈತ ಚಳುವಳಿಯ ಬಗ್ಗೆ ಪ್ರತಿಕ್ರಿಯಿಸುತ್ತ ಅಲ್ಲಿ ಭಾಗವಹಿಸಿರುವವರೆಲ್ಲಾ ಶ್ರೀಮಂತರು, ಅವರು ಶೋಕಿಗಾಗಿ ಪ್ರತಿಭಟನೆ ನಡೆಸುತ್ತಿದ್ದಾರೆ ಎಂದು ಹೇಳಿದ್ದಾರೆ. ಅಗತ್ಯ ಬಿದ್ದರೆ ನಾವುಗಳೇ ಚಂದ ಎತ್ತಿ ಯತ್ನಾಳ್ ಗೆ ಟಿಕೇಟ್ ಮಾಡಿಕೊಡೋಣ. ಆತ ಒಮ್ಮೆ ಶಹಜಾನ್ ಪುರ ಗಡಿಗೆ ಬಂದು ಇಲ್ಲಿರುವ ಪ್ರತಿಭಟನಾ ನಿರತ ರೈತರನ್ನು ಮಾತನಾಡಿಸಿ ಅವರ ಹಿನ್ನೆಲೆಯನ್ನು ಕೇಳಲಿ, ಇಲ್ಲ ತನ್ನ ಮಾತನ್ನು ವಾಪಸ್ ತೆಗೆದುಕೊಳ್ಳಲಿ. “ಇದೊಂದು ಮಿನಿ ಇಂಡಿಯಾದಂತಿದೆ” ಎಂದು ಅಖಿಲ ಭಾರತ ಕಿಸಾನ್ ಸಭಾದ ಜಂಟಿ ಕಾರ್ಯದರ್ಶಿ ವಿಜೂ ಕೃಷ್ಣನ್ ಹೇಳಿದರು. ಮಾತನಾಡಿಸುವಾಗ ಅವರನ್ನ ‘ಇಷ್ಟೊಂದು ದೊಡ್ಡ ಸಂಖ್ಯೆಯ ಜನರಿಗೆ ಊಟ, ತಿಂಡಿ ಉಳಿಯುವ ವ್ಯವಸ್ಥೆ, ಇತ್ಯಾಧಿಗಳನ್ನು ಕಳೆದ ಒಂದುವರೆ ತಿಂಗಳುಗಳಿಂದ ಹೇಗೆ ನಡೆಸುತ್ತಿದ್ದೀರ ಇದಕ್ಕೆಲ್ಲ ನೀವು ಹಣವನ್ನ ಹೇಗೆ ಹೊಂದಿಸಿದಿರಿ’ ಎಂದು ಕೇಳಿದೆ ಅದಕ್ಕೆ ಅವರು ಹೇಳಿದರು “ಈ ಪ್ರತಿಭಟನೆ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಪ್ರತಿಭಟನೆಗೆ ದೇಶಾಧ್ಯಂತ ವ್ಯಾಪಕ ಸಹಾಯ, ನೆರವು ಹರಿದು ಬರುತ್ತಿದೆ. ಈ ಪ್ರದೇಶದ ಸುತ್ತ ಮುತ್ತಲಿನ ರೈತರು, ತಾವು ಬೆಳೆದ ತರಕಾರಿಗಳನ್ನು, ಪ್ರತಿ ನಿತ್ಯ ಬೇಕಾಗುವಷ್ಟು ಹಾಲನ್ನು ಸರಬರಾಜು ಮಾಡುತ್ತಿದ್ದಾರೆ. ಕೆಲವರು ಗೋಧಿ, ಅಕ್ಕಿ, ಹಾಸಿಗೆ ಮತ್ತು ಹೊದಿಕೆಗಳನ್ನು ಕೊಡುಗೆಯಾಗಿ ನೀಡುತ್ತಿದ್ದಾರೆ. ಉಳಿದ ಅಗತ್ಯತೆಗಳನ್ನು ಸಂಘಟನೆಗಳು ಪೂರೈಸುತ್ತಿವೆ”.

ಸಿಂಗು ಬಾರ್ಡರ್ ನಲ್ಲಿ ಲಂಗರ್ (ಉಚಿತ ಊಟದ ವ್ಯವಸ್ಥೆ) ಗಳನ್ನು ಸಿಕ್ ಸಮುದಾಯದ ಗುರುದ್ವಾರಗಳು ವಹಿಸಿಕೊಂಡಿದ್ದವು. ಆದರೆ ಇಲ್ಲಿ ರೈತ ಸಂಘಟನೆಗಳು ಲಂಗರ್ ಗಳನ್ನು ನಿರ್ಮಾಣ ಮಾಡಿದ್ದವು. ಅವರ ಅಡುಗೆಯ ಸ್ಟೋರ್ ರೂಂನ ಟೆಂಟ್ ಗಳಲ್ಲಿ ಸಂಗ್ರಹವಾಗಿರುವ ದಾಸ್ತಾನನ್ನು ಗಮನಿಸಿದರೆ ಕನಿಷ್ಟ 6 ತಿಂಗಳುಗಳ ಕಾಲ ಯಾವುದೇ ಸಮಸ್ಯೆ ಇಲ್ಲದೆ ಪ್ರತಿಭಟನೆಯನ್ನ ಮುಂದುವರೆಸುವ ಸೂಚನೆ ಕಾಣುತ್ತಿದೆ.

> ‘ಈ ಪ್ರತಿಭಟನೆ ಉತ್ತರ ಭಾರತದ ರೈತರ ಪ್ರತಿಭಟನೆ ಮಾತ್ರವಲ್ಲ ಇದು ಇಡೀ ದೇಶದ ಪ್ರತಿಭಟನೆ. ಕೇರಳವು ಇದೇ ದೇಶದಲ್ಲಿರುವುದರಿಂದ ನಾವು ಇಲ್ಲಿಗೆ ಬಂದಿದ್ದೇವೆ. ಈ ಚಳುವಳಿ ನಿರ್ಣಾಯಕ ಹಂತಕ್ಕೆ ತಲುಪುವುವ ವರೆಗೆ ನಾವುಗಳು ಇಲ್ಲಿಯೇ ಇರುತ್ತೇವೆ’
>
> *–ಬಾಲಗೋಪಾಲ್,*
> *ಕೇರಳ ಕಿಸಾನ ಸಭಾ ಪ್ರಧಾನ ಕಾರ್ಯದರ್ಶಿ*

ಇಲ್ಲಿನ ಮತ್ತೊಂದು ವಿಶೇಷವೆಂದರೆ ರಾಜಸ್ಥಾನದ ಮುಸ್ಲಿಂ ಸಮುದಾಯದ ಸಂಘಟನೆಯೊಂದು ಈ ಪ್ರತಿಭಟನೆ ಪ್ರಾರಂಭವಾದಾಗಿನಿಂದ ಪ್ರತಿಭಟನಾ ನಿರತ ರೈತರಿಗೆ ಹಣ್ಣುಗಳು ಮತ್ತು ಊಟ, ತಿಂಡಿ ಹಾಗೂ ಚಹಾದ ಲಂಗರನ್ನ ನಡೆಸಿಕೊಂಡು ಬಂದಿದ್ದಾರೆ. ರೈತರು ದುಡಿಯುವ ವರ್ಗವಾಗಿ ಒಂದುಗೂಡಿದರೆ ಅವರಿಗೆ ಸಹಾಯಕ್ಕೆ ನಿಲ್ಲಲು ಯಾವುದೇ ಧರ್ಮದ ಬೇಧಗಳಿಲ್ಲದೆ ಎಲ್ಲರೂ ಬಂದು ಕೈಜೋಡಿಸುತ್ತಾರೆ ಎನ್ನುವುದಕ್ಕೆ ಇದೊಂದು ಜೀವಂತ ಉದಾಹರಣೆ.

ಇಲ್ಲಿ ಟ್ರಾಕ್ಟರ್ ಗಳಿಂದ ನಿರ್ಮಾಣವಾಗಿರುವ ಮನೆಗಳಿಗೆ ಹೋಲಿಸಿದರೆ ಪ್ಲಾಸ್ಟಿಕ್ ಟಾರ್ಪಲ್ ಗಳಿಂದ ನಿರ್ಮಾಣವಾಗಿರುವ ಟೆಂಟ್ ಗಳ ಸಂಖ್ಯೆಯೇ ಹೆಚ್ಚು. ಪ್ರತಿ ಟೆಂಟುಗಳಲ್ಲೂ ಅಗತ್ಯವಾದ ವ್ಯವಸ್ಥೆಗಳನ್ನು ಮಾಡಲಾಗಿದೆ. ಮಾತ್ರವಲ್ಲ ಪ್ರತಿ ಟೆಂಟಿಗೂ ವಿದ್ಯುತ್ ದೀಪಗಳು ಮತ್ತು ಚಾರ್ಜರ್ ಪಾಯಿಂಟ್ ಗಳನ್ನು ಅಳವಡಿಸಲಾಗಿದೆ. ಈ ಕುರಿತು ಸಂಘಟನೆಯ ಜವಾಬ್ದಾರಿ ಹೊತ್ತವರನ್ನು ವಿಚಾರಿಸಿದಾಗ ಅವರು ಹೇಳಿದ ವಿಷಯ ನಿಜಕ್ಕೂ ಆಶ್ಚರ್ಯವಾಗಿತ್ತು. ಅವರು ಹೇಳಿದ ಮಾತಿದು “ನಾವು ನಮಗೆ ಬೇಕಿರುವ ಅಗತ್ಯ ವಿದ್ಯುತ್ತನ್ನು ಎಲ್ಲಿಂದಲೂ ಕಳ್ಳತನ ಮಾಡಿಲ್ಲ ನಾವು ಹೆದ್ದಾರಿಗಳಲ್ಲಿ ಕುಳಿತು ಪ್ರತಿಭಟನೆ ನಡೆಸುತ್ತಿರಬಹುದು ಆದರೆ ನಾವು ಸ್ವಾಭಿಮಾನಿಗಳು. ಯಾವುದೇ ವಿದ್ಯುತ್ ಕಂಪನಿಯಿಂದ ಬೇಕಾದರೂ ಯಾರಾದರೂ ತಾತ್ಕಾಲಿಕ ವಿದ್ಯುತ್ ಸಂಪರ್ಕವನ್ನು ಪಡೆಯುವ ಅವಕಾಶವಿದೆ. ಅದಕ್ಕೆ ಬೇಕಾದ ಮುಂಗಡ ಹಣವನ್ನು ಕಟ್ಟಿದರೆ ಇಲಾಖೆಯವರೇ ತಾತ್ಕಾಲಿಕ ಸಂಪರ್ಕವನ್ನು ಕಲ್ಪಿಸಿ ಮೀಟರ್ ಅಳವಡಿಸುತ್ತಾರೆ. ಅಂತಿಮವಾಗಿ ನಾವುಗಳು ಬಳಸಿದಷ್ಟು ವಿದ್ಯುತ್ ಗೆ ಬಿಲ್ ಪಾವತಿ ಮಾಡುತ್ತೇವೆ” ಇವರ ಮಾತುಗಳನ್ನು ಕೇಳಿ ನನಗೆ ಮಾತುಗಳು ಹೊರಡಲೇ ಇಲ್ಲ. ಈ ಪ್ರತಿಭಟನೆ ಇಷ್ಟೊಂದು ಶಿಸ್ತುಬದ್ದವಾಗಿ ಮತ್ತು ಪ್ರಾಮಾಣಿಕವಾಗಿ ನಡೆಯುತ್ತಿರುವ ಕಾರಣಗಳಿಂದಲೇ ಒಂದುವರೆ ತಿಂಗಳು ಕಳೆದರೂ ರೈತರು ಚಳಿ, ಮಳೆ, ದೂಳು, ಬಿಸಿಲಿನಲ್ಲಿ ರಸ್ತೆಯ ಮೇಲೆ ಹಗಲು ರಾತ್ರಿ ಕುಳಿತರೂ ದೈತ್ಯ ಮೋದಿ ಸರ್ಕಾರದಿಂದ ಈ ಚಳುವಳಿಯನ್ನು ಒಡೆಯಲು ಎಷ್ಟೇ ಕುತಂತ್ರ, ಅಪಪ್ರಚಾರಗಳನ್ನು ನಡೆಸಿದರೂ ಅದು ಸಾಧ್ಯವಾಗಲಿಲ್ಲ.

ಲಂಗರನ್ನು ದಾಟಿ ಹಾಗೆ ಮುಂದೆ ಹೋದರೆ ಊಟಕ್ಕೆ ಸರದಿ ಸಾಲಿನಲ್ಲಿ ನಿಂತಿದ್ದ ಹಾಗೆಯೇ, ಶಿಸ್ತುಬದ್ಧವಾಗಿ ಅಲ್ಲಿಯೂ ಪ್ರತಿಭಟನಾಕಾರರು ಸರದಿ ಸಾಲಿನಲ್ಲಿ ನಿಂತಿದ್ದರು. ಅಲ್ಲಿ ಏನನ್ನೊ ಹಂಚಲಾಗುತ್ತಿತ್ತು ಕುತೂಹಲದಿಂದ ಅತ್ತ ಕಡೆ ನೋಡಿದೆವು. ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಪ್ರತಿಯೊಬ್ಬರಿಗೂ ಕಾಲಿಗೆ ಶೂಸ್ ಮತ್ತು ಸಾಕ್ಸ್ ಗಳನ್ನು ಕೊಡಲಾಗುತ್ತಿತ್ತು. ಕುತೂಹಲ ಇನ್ನಷ್ಟು ಹೆಚ್ಚಾಗಿ ಆ ಟೆಂಟಿನ ಒಳಗೆ ಪ್ರವೇಶ ಪಡೆದರೆ ಇಲ್ಲಿ ಒಂದು ದೊಡ್ಡ ಸಾಮಾನುಗಳ ಗೋದಾಮೇ ನಿರ್ಮಾಣವಾಗಿತ್ತು. ಅಲ್ಲಿ ಶೂ, ಸಾಕ್ಸ್ ಮಾತ್ರವಲ್ಲ ಪೇಸ್ಟ್, ಬ್ರಷ್, ಬಟ್ಟೆ ಸೋಪು, ಮೈಸೋಪು, ಮಹಿಳೆಯದ ಸ್ಯಾನಿಟೈಸರ್ ಪ್ಯಾಡ್, ಚಳಿಯಿಂದ ರಕ್ಷಣೆ ಪಡೆಯಲು ಟೆಂಟ್ ನ ಸಾಮಗ್ರಿಗಳು, ಹಾಸಿಗೆಗಳು, ಬ್ಲಾಂಕೆಟ್ಸ್, ಟೋಪಿಗಳು ಜೊತೆಗೆ ಇನ್ನರ್ ವೇರ್ಸ್ ಹೀಗೆ ಒಬ್ಬ ಮನುಷ್ಯನಿಗೆ ಅಗತ್ಯವಿರುವ ಎಲ್ಲಾ ರೀತಿಯ ವಸ್ತುಗಳ ಸಂಗ್ರಹ ಅಲ್ಲಿತ್ತು. ಇವುಗಳಲ್ಲಿ ಯಾವುದು ಯಾರಿಗೆ ಅಗತ್ಯವಿದೆಯೋ ಅದೆಲ್ಲವನ್ನು ಉಚಿತವಾಗಿ ನೀಡುತ್ತಿದ್ದರು. ಅಂದರೆ ಪ್ರತಿಭಟನೆಗೆ ಭಾಗವಹಿಸಿದ ಯಾರೊಬ್ಬರಿಗೂ ಯಾವುದೇ ರೀತಿಗ ತೊಂದರೆಯಾಗದಂತೆ ನೋಡಿಕೊಳ್ಳುವ ಪ್ರಾಮಾಣಿಕ ಪ್ರಯತ್ನವನ್ನು ಇಲ್ಲಿ ಮಾಡಲಾಗುತ್ತಿದೆ.

ಇಂದು ರೈತ ಸಂಘಟನೆಗಳನ್ನೊಳಗೊಂಡ ಸರ್ಕಾರದ ಜೊತೆಗಿನ 9 ನೇ ಸುತ್ತಿನ ಮಾತುಕತೆ ಯಾವುದೇ ಪ್ರಯೋಜನ ವಿಲ್ಲದೆ ಮುಗಿದಿದೆ.

ಇಂದು ಈ ಗಡಿಯಲ್ಲಿ ಎಲ್ಲರೂ ಸೇರಿ ಪಂಜಿನ ಮೆರವಣಿಗೆಯನ್ನು ಸಂಜೆ 6 ಗಂಟೆಗೆ ಆರಂಭಿಸಿ ಸಾವಿರಾರು ರೈತರು ಉರಿಯುವ ಪಂಜುಗಳನ್ನು ಕೈಯಲ್ಲಿ ಹಿಡಿದು ಕೇಂದ್ರ ಸರ್ಕಾರದ ವಿರುದ್ದ ಮತ್ತು ರೈತ ವಿರೋಧಿ ಕಾನೂನುಗಳು ರದ್ದುಮಾಡಬೇಕೆಂದು ಆಗ್ರಹಿಸಿದರು. ಒಂದೆಡೆ ಕೊರೆವ ಚಳಿಯಲ್ಲಿ ಕೈಯಲ್ಲಿ ನಿಗಿನಿಗಿ ಬೆಂಕಿಯ ಉಂಡೆಯ ಪಂಜನ್ನಿಡಿದು ಮುಷ್ಟಿಕಟ್ಟಿ ಎಲ್ಲರೂ ಒಟ್ಟಿಗೆ ಘೋಷಣೆಗಳನ್ನು ಕೂಗುತ್ತಿದ್ದರೆ ಎದುರು ಯಾರು ಉಳಿಯಲು ಸಾಧ್ಯವಿಲ್ಲವೇನೋ ಎಂದೆನಿಸುತ್ತಿತ್ತು.

ಈ ಗಡಿಯಲ್ಲಿ ಇನ್ನೂ ಹತ್ತು ಹಲವು ವಿಶೇಷಗಳಿವೆ. ಇದು ಇಡೀ ಚಳುವಳಿಯ ಭವಿಷ್ಯವನ್ನು ಸೂಚಿಸುತ್ತಿತ್ತು. ಮತ್ತು ದೇಶದ ಎಲ್ಲ ರಾಜ್ಯಗಳಿಂದಲೂ ರೈತರು ಆಗಮಿಸಿ ಇದನ್ನು ದೇಶದ ಪ್ರತಿಭಟನೆಯನ್ನಾಗಿ ಪರಿವರ್ತಿಸಿದ್ದಾರೆ.

ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು.......... ಪುಟ 9 ರಿಂದ

ಹೇಳುತ್ತಾರೆ. ಇದು ಕೇಳುವುದಕ್ಕೆ ಸಿನಿಮಾದ ಡೈಲಾಗ್ ಅಂತ ಕೆಲವರಿಗೆ ಅನ್ನಿಸಬಹುದು. ಆದರೆ ಅವರು ಅನುಭವವಿಸುತ್ತಿರುವ ಸಂಕಷ್ಟ ಮತ್ತು ಏನನ್ನಾದರೂ ಸಾಧಿಸಬೇಕು ಎನ್ನವ ಅವರ ಛಲವನ್ನ ಕಣ್ಣಾರೆ ಕಂಡವರಿಗೆ ಇದು ಬೂಟಾಟಿಕೆಯ ಮಾತು ಖಂಡಿತ ಅಲ್ಲ, ಈ ಮಾತಿನಲ್ಲಿ ಒಂದು ಅಂತಸತ್ವ ಇದೆ ಎಂಬುದು ಗೊತ್ತಾಗುತ್ತದೆ.

ಪಲ್ವಲ್ ನ ಈ ಹೋರಾಟದ ಮತ್ತೊಂದು ವಿಶೇಷವೆಂದರೆ ಇಲ್ಲಿ ಪ್ರತೀ ದಿನ ಸರದಿಯಂತೆ ಸಾವಿರಾರು ಸಂಖ್ಯೆಯಲ್ಲಿ ಸ್ಥಳಿಯವಾಗಿರುವ ಸುತ್ತಮುತ್ತಲ ಹಳ್ಳಿಗಳಿಂದ ರೈತರು ಬಂದು ಇಲ್ಲಿ ಭಾಗವಹಿಸುತ್ತಿದ್ದಾರೆ. ಇದಕ್ಕಾಗಿ ರೈತ ಸಂಘಟನೆಗಳು ಮಾಡುತ್ತಿರುವ ಕೆಲಸ ಅತ್ಯಂತ ಶ್ರಮದಾಯಕವಾದದ್ದು.


ಈ ಮದ್ಯೆ ಹೋರಾಟದ ಕಣದಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಾಗುತ್ತಾ ಹೋಯಿತು ವೇದಿಕೆಯ ಮುಂಭಾಗ ಕುಳಿತುಕೊಳ್ಳಲು ನಿರ್ಮಾಣ ಮಾಡಿದ್ದ ಪೆಂಡಾಲ್ ನಲ್ಲಿ ಜಾಗ ಸಾಲದೆ ಅಲ್ಲಿದ್ದ ಗಂಡಸರೆಲ್ಲ ಪೆಂಡಾಲ್ ನ ಹೊರಗಡೆ ಕುಳಿತುಕೊಂಡು ಮಹಿಳೆಯರಿಗೆ ಅವಕಾಶ ಮಾಡಿಕೊಟ್ಟರು. ಹೋರಾಟದ ಕಣದಲ್ಲಿ ಮಹಿಳೆಯರಿಗೆ ಸಿಕ್ಕ ಸಮಾನ ಅವಕಾಶ ಇದೇ ರೀತಿ ಬದುಕಿನಲ್ಲೂ ಸಮಾಜದಲ್ಲೂ ಸಿಕ್ಕರೆ ಎಂತಹ ಅದ್ಭುತ ಸಮಸಮಾಜ ನಿರ್ಮಾಣವಾಗಬಹುದು ಎಂದೆನಿಸಿತು. ಮುಖ್ಯವಾಗಿ ಆಳುವವರನ್ನ ಶೋಷಣೆ ಕುರಿತ ಜಾನಪದ ಹಾಡುಗಳು, ಈ ಸಮರದಲ್ಲಿ ಹುಟ್ಟಿಕೊಂಡ ಮೋದಿ ವಿರುದ್ಧದ ಹಾಡುಗಳು, ಶಾಯರಿ (ಕವನ)ಗಳು ಇಲ್ಲಿ ಕೇಳಿ ಬಂದವು. ಇಲ್ಲಿ ಭಾಗವಹಿಸಿ ಮಾತನಾಡಿದ ಹಲವರು ಈ ಸರ್ಕಾರದ ಕರಾಳ ಕಾನೂನುಗಳ ವಿರುದ್ಧ ಕವನಗಳನ್ನು ರಚಿಸಿ ವಾಚನ ಮಾಡಿದರು. ನನಗೆ ಆಶ್ಚರ್ಯವಾಗಿದ್ದೇನೆಂದರೆ ನಮ್ಮಂತೆ ಇವರುಗಳು ತಾವು ರಚಿಸಿದ ಕವನಗಳನ್ನು ಪೇಪರ್ ನಲ್ಲೋ, ಮೋಬೈಲ್ ನಲ್ಲೋ ನೋಡಿ ವಾಚನ ಮಾಡುತ್ತಿರಲಿಲ್ಲ, ಉದ್ದ ಉದ್ದದ ಕವನಗಳನ್ನು ಹಾಗೆ ನಿರರ್ಗಳವಾಗಿ ವಾಚಿಸುತ್ತಿದ್ದುದನ್ನ ನೋಡಿದರೆ ಇದು ಮನದಾಳದಿಂದ ಪ್ರತಿರೋದದ ಕಿಚ್ಚಾಗಿ ಹೊರಹೊಮ್ಮತ್ತಿದೆ ಎಂದೆನಿಸುತ್ತಿತ್ತು.

ಈ ಚಳುವಳಿಯಲ್ಲಿ ಭಾಗವಹಿಸಲು ದೂರದ ತೆಲಂಗಾಣದಿಂದ ಶಾಲಾ ಶಿಕ್ಷಕರ ಸಂಘದ ನೇತೃತ್ವದಲ್ಲಿ ನೂರಾರು ಶಿಕ್ಷಕರು ಬಂದಿದ್ದರು. ಅವರಲ್ಲಿ ಕೆಲವರನ್ನ ಮಾತನಾಡಿಸಿದಾಗ “ನಾವು ಶಾಲೆಗಳಲ್ಲಿ ಪಾಠ ಮಾಡುವ ಮೇಷ್ಟುಗಳು ದೇಶಕ್ಕೆ ಅನ್ನಕೊಡುವ ರೈತ ಬೀದಿಯಲ್ಲಿರುವಾಗ ಅವರ ಮಕ್ಕಳಿಗೆ ಹೇಗೆ ನೆಮ್ಮದಿಯಿಂದ ಪಾಠ ಮಾಡಲು ಸಾಧ್ಯ, ಅದಕ್ಕಾಗಿ ಇಲ್ಲಿಯವರೆಗೂ ಬಂದಿದ್ದೇವೆ” ಎಂದರು.

ಇಲ್ಲಿಂದ ಇನ್ನೊಂದು ಗಡಿಗೆ ಹೋಗಲು ವಾಪಸ್ ಹೊರಟೆವು. ಕಳೆದ ಒಂದು ವಾರದಿಂದ ಉತ್ತರ ಭಾರತದ ಊಟವನ್ನೇ ತಿಂದ ನಮ್ಮ ನಾಲಗೆ ಸ್ವಲ್ಪ ರುಚಿ ಕಳೆದುಕೊಂಡಿತ್ತು. ಏನಾದರೂ ಮಾಡಿ ದಕ್ಷಿಣ ಭಾರತದ ಊಟ ಮಾಡೋಣ ಎಂದು ದೆಹಲಿಯಲ್ಲಿ ಹುಡುಕಾಟ ಆರಂಭಿಸಿದೆವು ಸಾಕಷ್ಟು ಸುತ್ತಾಡಿದ ಮೇಲೆ ಏಲೋ ಒಂದು ಕಡೆ ಸೌತ್ ಇಂಡಿಯನ್ ಮೀಲ್ಸ್ ಎಂದು ಒಂದು ಬೋರ್ಡ್ ಕಾಣಿಸಿತು. ಮೊದಲಿಗೆ ಸೌತ್ ಇಂಡಿಯನ್ ತಾಲಿ ಕಾಣಿಸಿತು ಅದನ್ನು ಆರ್ಡರ್ ಮಾಡಿದೆವು. ನಮ್ಮ ಕಣ್ಣುಗಳಿಂದ ನೋಟಕ್ಕೆ ಸಿಕ್ಕ ಆನಂದ ನಾಲಿಗೆಯ ಮೂಲಕ ರುಚಿಯಾಗಿ ಸಿಗಲಿಲ್ಲ. ಹೆಸರಿಗೆ ಮಾತ್ರ ಅದು ಸೌತ್ ಇಂಡಿಯನ್ ತಾಲಿ ಉಳಿದರಂತೆ ಎಲ್ಲದರ ರುಚಿಯೂ ನಾವು ಕಳೆದ ಒಂದು ವಾರದಿಂದ ತಿಂದ ರುಚಿಗೂ ಇದಕ್ಕೂ ಯಾವ ವ್ಯತ್ಯಾಸವೂ ಇರಲಿಲ್ಲ!

ರಾತ್ರಿ ಮಲಗುವುದರೊಳಗೆ ಬಂದ ಕಬರ್ ಏನೆಂದರೆ ಜನವರಿ 26 ರಂದು ನಡೆಯುವ ಗ್ಣಣರಾಜ್ಯೋತ್ಸವದ ಪೆರೇಡ್ ನಲ್ಲಿ ಭಾಗವಹಿಸಲು ಪಂಜಾಬ್ ನಿಂದ ಒಂದು ಲಕ್ಷ ಮತ್ತು ಹರಿಯಾಣದಿಂದ ಒಂದು ಲಕ್ಷ ಟ್ರ್ಯಾಕ್ಟರ್ ಗಳು ದೆಹಲಿಕಡೆಗೆ ಬರಲು ಸಿದ್ದವಾಗಿವೆಯಂತೆ ಜೊತೆಗೆ ಉತ್ತರ ಭಾರತದ ರಾಜ್ಯಗಳಿಂದಲೂ ದೊಡ್ಡ ಪ್ರಮಾಣದ ರೈತರು ಟ್ರ್ಯಾಕ್ಟರ್ ಗಳನ್ನು ದೆಹಲಿಗೆ ತರಲು ತಯಾರಿ ನಡೆಸಿದ್ದಾರೆ. ಜೊತೆಗೆ ರೈತರು ನಡೆಸುವ ಪರ್ಯಾಯ ಪೆರೆಡ್ ಗೆ ಹಲವು ಪ್ರದೇಶಗಳಲ್ಲಿ ತ್ರಿವರ್ಣ ಧ್ವಜವನ್ನು ಹಿಡಿದು ರೈತರ ತಾಲೀಮು ಆರಂಭವಾಗಿದೆ. ಈಗ ಎಲ್ಲರ ಚಿತ್ತ ಇಪ್ಪತ್ತಾರರತ್ತ.

ಸ್ವದೇಶಿ ಚಳವಳಿ ಮತ್ತು ಕಾರ್ಮಿಕ ವರ್ಗದ ಮುಷ್ಕರಗಳು



ಇಪ್ಪತ್ತನೇ ಶತಮಾನದ ಆರಂಭದಿಂದ ಮೊದಲ ಮಹಾಯುದ್ಧ ಪ್ರಾರಂಭವಾಗುವ ವರೆಗಿನ ಅವಧಿಯನ್ನು ಕಾರ್ಮಿಕರ ವ್ಯಾಪಕ ಮತ್ತು ಪಟ್ಟುಬಿಡದ ಹೋರಾಟಗಳಿಂದ ಗುರುತಿಸಬಹುದು. ಆರ್ಥಿಕ ಹೋರಾಟಗಳು ಮಾತ್ರವಲ್ಲ, ಭಾರತದ ಕಾರ್ಮಿಕ ವರ್ಗವು ಈ ಶತಮಾನದ ಮೊದಲ ದಶಕದಲ್ಲಿ ತನ್ನ ಮೊದಲ ಕ್ರಾಂತಿಕಾರಿ ರಾಜಕೀಯ ಹೋರಾಟದ ಅದ್ಭುತ ಸಾಧನೆಯನ್ನು ಮಾಡಿತು. ಈ ಹೋರಾಟಗಳ ಬೆಳವಣಿಗೆಗಳು ಅಂತಿಮವಾಗಿ ದೇಶದ ಮೊದಲ ಕಾರ್ಮಿಕ ಸಂಘಗಳ–ಭಾರತದ ಶ್ರಮಜೀವಿಗಳ ವರ್ಗ–ಸಂಘಟನೆಗಳ ಅಡಿಪಾಯವನ್ನು ಹಾಕಿದವು. ಆರ್ಥಿಕ ಪರಿಸ್ಥಿತಿಗಳು ಸತತವಾಗಿ ಹದಗೆಡುತ್ತ ಹೋದದ್ದು ಮತ್ತು ಹೆಚ್ಚಿದ ಕೆಲಸದ ಹೊರೆಯ ಮೂಲಕ ಶೋಷಣೆಯ ತೀವ್ರತೆಯು 1907 ರಲ್ಲಿ ದೇಶದ ವಿವಿಧ ರೈಲ್ವೆಗಳ ರೈಲ್ವೆ ನೌಕರರನ್ನು ವ್ಯಾಪಕವಾದ ಕ್ರಮಕ್ಕೆ ಪ್ರೇರೇಪಿಸಿತು. ವಿವಿಧ ರೈಲ್ವೆಗಳಲ್ಲಿ ರೈಲ್ವೆ ನೌಕರರ ಈ ವ್ಯಾಪಕ ಮುಷ್ಕರ ಕ್ರಮವನ್ನು 1905–08ರ ದೇಶವ್ಯಾಪಿ ಸಾಮ್ರಾಜ್ಯಶಾಹಿ–ವಿರೋಧಿ ಜಾಗೃತಿಯ ಸರಪಳಿಯಲ್ಲಿ ಒಂದು ಕೊಂಡಿಯಾಗಿ ಪರಿಗಣಿಸುವುದು ಸೂಕ್ತ.

ಮೂಲ ಲೇಖಕರು: **ಸುಕೋಮಲ್ ಸೇನ್** ಸಂಗ್ರಹ–ಅನುವಾದ: ಸಿ.ಆರ್.ಶಾನಭಾಗ

ವಸಾಹತುಶಾಹಿ ಅಧೀನತೆಯು ವಿಶಾಲವಾದ ಭಾರತದ ಉಪಖಂಡದ ಅಸಮ ಬೆಳವಣಿಗೆಗೆ ಬಹುತೇಕ ಕಾರಣವಾಗಿದೆ, ಬಂಗಾಳ, ಮಹಾರಾಷ್ಟ್ರ ಮತ್ತು ಮದ್ರಾಸ್ ಪ್ರೆಸಿಡೆನ್ಸಿಯ ಕೆಲವು ಪ್ರದೇಶಗಳು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಭಾರತದ ಇತರ ಪ್ರದೇಶಗಳಿಗಿಂತ ಬಹಳ ಮುನ್ನಡೆದವು. ಬಂಗಾಳದ ಕಲ್ಕತ್ತಾ, ಮಹಾರಾಷ್ಟ್ರದ ಬಾಂಬೆ ಮತ್ತು ಮದ್ರಾಸ್, ಈ ನಗರಗಳು ದೇಶದ ಆರ್ಥಿಕ ಮತ್ತು ರಾಜಕೀಯ ಚಟುವಟಿಕೆಗಳ ಪ್ರಮುಖ ಕೇಂದ್ರಗಳಾಗಿ ಮಾರ್ಪಟ್ಟವು.

1905 ರಲ್ಲಿ ಬಂಗಾಳದ ವಿಭಜನೆಯು ಸಾರ್ವಜನಿಕರ ಕೋಪವನ್ನು ಕೆರಳಿಸಿತು ಮತ್ತು ಸಾಮೂಹಿಕ ರಾಷ್ಟ್ರೀಯ ಉತ್ಕ್ರಾಂತಿಗೆ ಕಾರಣವಾಯಿತು. ರಾಷ್ಟ್ರೀಯ ಕಾಂಗ್ರೆಸ್ ನಾಯಕತ್ವವು ದಾದಾಭಾಯಿ ನೌರೋಜಿ ಮತ್ತು ಸುರೇಂದ್ರನಾಥ್ ಬ್ಯಾನರ್ಜಿಯಂತಹ ಉದಾರವಾದಿಗಳ ಕೈಯಿಂದ ತೀವ್ರಗಾಮಿಗಳಾದ ಬಾಲ ಗಂಗಾಧರ್ ತಿಲಕ್ ಮತ್ತು ಲಾಲಾ ಲಜಪತ್ ರಾಯ್ ಅವರ ಕೈಗೆ ಹೋಯಿತು.

ಈ ರಾಜಕೀಯ ಬೆಳವಣಿಗೆಯು ಭಾರತದ ಕಾರ್ಮಿಕ ವರ್ಗಕ್ಕೂ ತನ್ನ ಆರ್ಥಿಕ ಹೋರಾಟಗಳೊಂದಿಗೆ ಮುಂದುವರಿಯಲು ಮತ್ತು ಅವುಗಳನ್ನು ಉನ್ನತ ಹಂತಕ್ಕೆ ಏರಿಸಲು ಅನುಕೂಲಕರ ಸ್ಥಿತಿಯಾಗಿ ಕಾರ್ಯನಿರ್ವಹಿಸಿತು. ಇಪ್ಪತ್ತನೇ ಶತಮಾನದ ಆರಂಭದಿಂದ ಮೊದಲ ಮಹಾಯುದ್ಧ ಪ್ರಾರಂಭವಾಗುವ ವರೆಗಿನ ಅವಧಿಯನ್ನು ಕಾರ್ಮಿಕರ ವ್ಯಾಪಕ ಮತ್ತು ಪಟ್ಟುಬಿಡದ ಹೋರಾಟಗಳಿಂದ ಗುರುತಿಸಬಹುದು. ಮತ್ತು ಆರ್ಥಿಕ ಹೋರಾಟಗಳು ಮಾತ್ರವಲ್ಲ, ಭಾರತದ ಕಾರ್ಮಿಕ ವರ್ಗವು ಈ ಶತಮಾನದ ಮೊದಲ ದಶಕದಲ್ಲಿ ತನ್ನ ಮೊದಲ ಕ್ರಾಂತಿಕಾರಿ ರಾಜಕೀಯ ಹೋರಾಟದ ಅದ್ಭುತ ಸಾಧನೆಯನ್ನು ಮಾಡಿತು. ಈ ಹೋರಾಟಗಳ ಬೆಳವಣಿಗೆಗಳು ಅಂತಿಮವಾಗಿ ದೇಶದ ಮೊದಲ ಕಾರ್ಮಿಕ ಸಂಘಗಳ–ಭಾರತದ ಶ್ರಮಜೀವಿಗಳ ವರ್ಗ–ಸಂಘಟನೆಗಳ ಅಡಿಪಾಯವನ್ನು ಹಾಕಿದವು.

ಸ್ವದೇಶಿ ಚಳವಳಿಯ ಸಮಯದಲ್ಲಿ ಕಾರ್ಮಿಕರು

1905 ರಲ್ಲಿ ಬಂಗಾಳದ ವಿಭಜನೆಯಿಂದ ಹುಟ್ಟಿದ ಸ್ವದೇಶಿ ಚಳುವಳಿ ಪ್ರಾದೇಶಿಕವಾಗಿ ಬಂಗಾಳಕ್ಕೆ ಸೀಮಿತವಾಗಿರಲಿಲ್ಲ, ಅಥವಾ ಅದರ ಪ್ರಭಾವ ಮೇಲ್ವರ್ಗಗಳು ಮತ್ತು ಮಧ್ಯಮ ವರ್ಗಗಳಿಗೆ ಮಾತ್ರ ಸೀಮಿತವಾಗಿರದೆ, ಬಂಗಾಳದ ಕಾರ್ಮಿಕ ವರ್ಗವೂ ಸಹ ಈ ಚಳವಳಿಯ ಕಕ್ಷೆಯೊಳಗೆ ಬಂದಿತು ಮತ್ತು ಈ ಚಳುವಳಿ ವಿಭಜನೆಯ ವಿಷಯದ ಗಡಿಯನ್ನು ಮೀರಿತು, ವಸಾಹತುಶಾಹಿ ಅಧೀನತೆಯ ವಿರುದ್ಧ ಪ್ರಜ್ಞಾಪೂರ್ವಕ ಹೋರಾಟಕ್ಕೆ ಜನಸಾಮಾನ್ಯರನ್ನು ಜಾಗೃತಗೊಳಿಸಿತು. ಇದು ಭಾರತದ ರಾಜಕೀಯ ಇತಿಹಾಸದಲ್ಲಿ ರಾಷ್ಟ್ರೀಯ–ಬೂರ್ಜ್ವಾ ಘೋಷಣೆಗಳ ಅಡಿಯಲ್ಲಿ ಮೊದಲ ಸಂಘಟಿತ ಮತ್ತು ಪ್ರಜ್ಞಾಪೂರ್ವಕ ಸಾಮೂಹಿಕ ಹೋರಾಟವಾಗಿ ಮಾರ್ಪಟ್ಟಿತು.

ಈ ಅವಧಿಯಲ್ಲಿ ಸಂಭವಿಸಿದ ಹಲವಾರು ಮುಷ್ಕರಗಳಲ್ಲಿ, ಕಲ್ಕತ್ತಾದ ಭಾರತ ಸರ್ಕಾರದ ಮುದ್ರಣಾಲಯದಲ್ಲಿ ನಡೆದ ಮುಷ್ಕರವು ವಿಶೇಷ ಗಮನಕ್ಕೆ ಅರ್ಹವಾಗಿದೆ. ಈ ಸಂಸ್ಥೆಯ ಸುಮಾರು ಎರಡು ಸಾವಿರ ಕಾರ್ಮಿಕರು 1905 ರ ಸೆಪ್ಟೆಂಬರ್ 27 ರಂದು ಮುಷ್ಕರ ಪ್ರಾರಂಭಿಸಿದರು, ಅದು ಒಂದು ತಿಂಗಳು ಮುಂದುವರೆಯಿತು. ಕಾರ್ಮಿಕರ ಮುಖ್ಯ ಕುಂದುಕೊರತೆಗಳಲ್ಲಿ ಭಾನುವಾರ ಮತ್ತು ಗೆಜೆಟೆಡ್ ರಜಾದಿನಗಳಲ್ಲಿ ವೇತನ ಪಾವತಿಸದಿರುವುದು, ಅನಿಯಮಿತ ದಂಡ ವಿಧಿಸುವುದು, ಓವರ್–ಟೈಮ್ ವೇತನದ ಕಡಿಮೆ ದರ ಮತ್ತು ವೈದ್ಯಕೀಯ ಪ್ರಮಾಣಪತ್ರದ ಆಧಾರದಲ್ಲಿ ರಜೆ ನೀಡಲು ಅಧಿಕಾರಿಗಳು ನಿರಾಕರಿಸುವುದು ಸೇರಿದ್ದವು.

ಭಾರತ ಸರ್ಕಾರದ ಮುದ್ರಣಾಲಯದಲ್ಲಿ ಮುಷ್ಕರ ಪ್ರಾರಂಭವಾದಾಗ, ಅದರಲ್ಲಿ ಬಂಗಾಳ ಸಚಿವಾಲಯದ ಮುದ್ರಣಾಲಯದ ಕಾರ್ಮಿಕರೂ ಸೇರಿಕೊಂಡರು. ಮುಷ್ಕರನಿರತ ಪತ್ರಿಕಾ ಕಾರ್ಮಿಕರ ಕುಂದುಕೊರತೆಗಳ ಬಗ್ಗೆ ತನಿಖೆ ನಡೆಸಲು ಸರ್ಕಾರ ಬಂಗಾಳ ಸರ್ಕಾರದ ಹಣಕಾಸು ಇಲಾಖೆಯ ಅಂಡರ್ ಸೆಕ್ರೆಟರಿ ಜಿ.ರೈನ ಅವರನ್ನು ನೇಮಿಸಿತು. ಆರಂಭಿಕ ಅವಧಿಯಲ್ಲಿ, ಈ ವಿಷಯಗಳ ಬಗ್ಗೆ ಒಪ್ಪಂದವಾಯಿತು. ಆದರೆ ಒಪ್ಪಂದವಾದ ಕೆಲವೇ ದಿನಗಳಲ್ಲಿ ಕಾರ್ಮಿಕರ ಏಳು ನಾಯಕರನ್ನು ಸೇವೆಯಿಂದ ವಜಾಗೊಳಿಸಿ ಪೊಲೀಸರು ಬಂಧಿಸಿದರು. ಮುಷ್ಕರ ತಕ್ಷಣ ಪುನರಾರಂಭವಾಯಿತು. ತಮ್ಮ ಬೇಡಿಕೆಗಳ ಇತ್ಯರ್ಥಕ್ಕೆ ತಮಗೊಂದು ಸಂಘ ಅವಶ್ಯಕವೆಂದು ಬಯಸಿದ ಕಾರ್ಮಿಕರ ಆಶಯದಂತೆ 1905 ರ ಅಕ್ಟೋಬರ್ 21 ರಂದು ದೇಶದ ಆರಂಭಿಕ ಕಾರ್ಮಿಕ ಸಂಘಗಳಲ್ಲಿ ಒಂದಾದ ಬಂಗಾಳ ಪ್ರೆಸ್ ವರ್ಕರ್ಸ್ ಯೂನಿಯನ್ ಅಸ್ತಿತ್ವಕ್ಕೆ ಬಂದಿತು.

1905 ರಲ್ಲಿ ಉದ್ಭವಿಸಿದ ಮುಷ್ಕರಗಳ ಅಲೆಯು ಹಲವಾರು ಕೈಗಾರಿಕಾ ಘಟಕಗಳನ್ನು ನಡುಗಿಸಿತು. ಅದೇ ವರ್ಷದ ಸೆಪ್ಟೆಂಬರ್‌ನಲ್ಲಿ ಹೌರಾ ಮತ್ತು ಕಲ್ಕತ್ತಾ ಟ್ರಾಮ್‌ವೇಸ್ ಕಂಪನಿಯಲ್ಲಿ ಬರ್ನ್ & ಕಂ ನ ಕಾರ್ಮಿಕರು ಮುಷ್ಕರ ಹೂಡಿದರು. ಕಲ್ಕತ್ತಾ ಕಾರ್ಪೊರೇಶನ್‌ನ ಸುಮಾರು 2,000 ಕೂಲಿಗಳು ಮತ್ತು ಜಾಡಮಾಲಿಗಳು ಇದೇ ಅವಧಿಯಲ್ಲಿ ವೇತನ ಹೆಚ್ಚಳಕ್ಕೆ ಒತ್ತಾಯಿಸಿ ಸಂಘಟಿತ ಮುಷ್ಕರವನ್ನು ಮಾಡಿದರು, ಅವರ ಬೇಡಿಕೆಗಳು ಭಾಗಶಃ ಪೂರೈಸಿದವು. ಅಕ್ಟೋಬರ್ 1905 ರಲ್ಲಿ, ಈಸ್ಟ್ ಇಂಡಿಯಾ ರೈಲ್ವೆಯ ಕಾವಲುಗಾರರು ಮುಷ್ಕರ ಮಾಡಿದರು. ಸುಮಾರು 950 ಗಾರ್ಡ್‌ಗಳು ಈ ಮುಷ್ಕರಕ್ಕೆ ಸೇರಿಕೊಂಡರು, ಅದು ಪ್ರಸ್ತುತ ವೇತನ ಮಾದರಿಯ ವಿರುದ್ಧ ಗುರಿಯಿಟ್ಟಿತ್ತು. ಆಗಸ್ಟ್ 1906 ರಲ್ಲಿ ಕಲ್ಕತ್ತಾದಿಂದ ಕೆಲವು ಮೈಲಿ ದೂರದಲ್ಲಿದ್ದ ಕ್ಲೈವ್ ಸೆಣಬಿನ ಮಿಲ್ ಆಫ್ ಬಡ್ಜ್ ಬಡ್ಜ್‌ನಲ್ಲಿ ಒಂದು ದೊಡ್ಡ ಮುಷ್ಕರ ಸಂಭವಿಸಿತು, ಅಲ್ಲಿ ಒಂದು ಸಾವಿರ ಕಾರ್ಮಿಕರು ಉತ್ತಮ ಕೆಲಸದ ಪರಿಸ್ಥಿತಿಗಳಿಗಾಗಿ ಮತ್ತು ಬ್ರಿಟಿಷ್ ನಿರ್ವಾಹಕರ ಅವಮಾನಗೊಳಿಸುವ ವರ್ತನೆಯ ವಿರುದ್ಧ ಕೆಲಸ ಸ್ಥಗಿತಗೊಳಿಸಿ ಪ್ರತಿಭಟಿಸಿದರು. ಮುಷ್ಕರ ಸಮಯದಲ್ಲಿ, ಸೆಣಬಿನ ಕಾರ್ಮಿಕರ ಸಂಘವನ್ನು ರಚಿಸಲಾಯಿತು

ಕಲ್ಕತ್ತಾದ ಭಾರತ ಸರ್ಕಾರಿ ಮುದ್ರಣಾಲಯದಲ್ಲಿ ಮುಷ್ಕರದ ಹೊರತಾಗಿ, ಜೂನ್ 1906 ರಲ್ಲಿ ಕಲ್ಕತ್ತಾದ ಥಾಕರ್ ಸ್ಪಿಂಕ್ ಮತ್ತು ಕಂ. ಮುದ್ರಣಾಲಯದಲ್ಲಿ ಮುಷ್ಕರ ಸಂಭವಿಸಿತು. ಈ ಮುಷ್ಕರವನ್ನು 1905 ರಲ್ಲಿ ಕಲ್ಕತ್ತಾದಲ್ಲಿ ಅಸ್ತಿತ್ವಕ್ಕೆ ಬಂದ ಪ್ರಿಂಟರ್ಸ ಯೂನಿಯನ್ ಆಯೋಜಿಸಿತು. ಈ ಮುಷ್ಕರವು ಕಲ್ಕತ್ತಾದ ಇತರ ಮುದ್ರಣಾಲಯಗಳ ಕಾರ್ಮಿಕರ ಸಕ್ರಿಯ ಬೆಂಬಲವನ್ನು ಪಡೆದುಕೊಂಡಿತು, ಅವರು ಮುಷ್ಕರ ಮುಂದುವರಿದ ಸಮಯದಲ್ಲಿ ಸೌಹಾರ್ದ ರ್‍ಯಾಲಿಗಳು ಮತ್ತು ಮೆರವಣಿಗೆಗಳನ್ನು ನಡೆಸಿದರು. ಕಲ್ಕತ್ತಾದ ಪ್ರಿಂಟರ್ಸ ಯೂನಿಯನ್ 1906 ರ ಜೂನ್ 6 ರಂದು ಮುಷ್ಕರವನ್ನು ಬೆಂಬಲಿಸಿ ಆಯೋಜಿಸಿದ್ದ ಕಾರ್ಮಿಕರ ದೊಡ್ಡ ಸಭೆಯನ್ನುದ್ದೇಶಿಸಿ ಮಾತನಾಡಲು ಬಾಲ ಗಂಗಾಧರ್ ತಿಲಕ್, ಖಾಪರ್ಡೆ ಮತ್ತು ಡಾ.ಮುಂಜಿ ಅವರಂತ ಉನ್ನತ ರಾಷ್ಟ್ರೀಯ ನಾಯಕರನ್ನು ಆಹ್ವಾನಿಸಿತು.

ಧರ್ಮ ಮತ್ತು ಸಿದ್ಧಾಂತಗಳ ಆಧಾರದ ಮೇಲೆ ನಿಂತಿರುವ ಹಳೆಯ ಜಾತಿ ವ್ಯವಸ್ಥೆಯನ್ನು ಟ್ರೇಡ್ ಗಿಲ್ಡ್ ಮತ್ತು ಯೂನಿಯನ್‌ಗಳ ಇಂದಿನ ಅಗತ್ಯಗಳಿಗೆ ತಕ್ಕಂತೆ ಹೇಗೆ ಉಪಯುಕ್ತವಾಗಿ ಬದಲಾಯಿಸಬಹುದು ಎಂಬ ವಿಷಯದ ಬಗ್ಗೆ ತಿಲಕ್ ವಿವರಿಸಿದರು. ಯೂನಿಯನ್ ಮತ್ತು ಥಾಕರ್ ಸ್ಪಿಂಕ್ & ಕಂ ನಡುವೆ ಒಪ್ಪಂದವನ್ನು ಮಾಡಿಕೊಂಡ ನಂತರ. ಮುಷ್ಕರಕಾರರು 1906 ರ ಜೂನ್ 13 ರಂದು ಕೆಲಸಕ್ಕೆ ಮರಳಿದರು.

ಈ ಅವಧಿಯ ಸಾಮ್ರಾಜ್ಯಶಾಹಿ–ವಿರೋಧಿ ರಾಜಕೀಯ ಜಾಗೃತಿಯ ಪ್ರಭಾವದಡಿಯಲ್ಲಿ ನಡೆಯುತ್ತಿದ್ದ ಕಾರ್ಮಿಕ–ವರ್ಗದ ಮತ್ತೊಂದು ಪ್ರಮುಖ ಕ್ರಮವೆಂದರೆ, ಪೂರ್ವ ಭಾರತ ರೈಲ್ವೆಯ ಬಂಗಾಳ ವಿಭಾಗದಲ್ಲಿ 1906 ರ ಜುಲೈ–ಸೆಪ್ಟೆಂಬರ್‌ನಲ್ಲಿ ಭುಗಿಲೆದ್ದ ದೊಡ್ಡ ಮುಷ್ಕರ. ಭಾರತ ಮೂಲದ ಸಂಪೂರ್ಣ ಕಾರ್ಮಿಕ–ಪಡೆ ಹಲವು ದಿನಗಳ ಕಾಲ ನಡೆದ ಈ ಮುಷ್ಕರಕ್ಕೆ ಸೇರಿತು. ಮುಷ್ಕರದ ಬೇಡಿಕೆಗಳಲ್ಲಿ ಹೆಚ್ಚಿನ ವೇತನ ಮತ್ತು ಉತ್ತಮ ಕೆಲಸದ ಪರಿಸ್ಥಿತಿಗಳು ಮತ್ತು ಜನಾಂಗೀಯ ತಾರತಮ್ಯವನ್ನು ಹೊಗಲಾಡಿಸುವುದು ಸೇರಿದ್ದವು. ಮುಷ್ಕರವನ್ನು ಯಾವ ರೀತಿ ಆಯೋಜಿಸಲಾಗಿತ್ತೆಂದರೆ, ಪೊಲೀಸರು ನಿಲ್ದಾಣಗಳನ್ನು ಆಕ್ರಮಿಸಿಕೊಂಡಿದ್ದರೂ ಸಹ, ಕೆಲಸಗಾರರು ಹೆದರಲಿಲ್ಲ, ಮತ್ತು ನಾಯಕರು ವಿವಿಧ ನಿಲ್ದಾಣಗಳಿಗೆ ಭೇಟಿ ನೀಡಿ ಸಭೆಗಳನ್ನುದ್ದೇಶಿಸಿ ಮಾತನಾಡಿದರು. ಆದರೆ ವಸಾಹತುಶಾಹಿ ಆಡಳಿತಗಾರರು ಅಂತಿಮವಾಗಿ ಮುಷ್ಕರವನ್ನು ಹತ್ತಿಕ್ಕುವಲ್ಲಿ ಯಶಸ್ವಿಯಾದರು. ಮತ್ತು., ಹೆಚ್ಚು ಸಕ್ರಿಯವಾಗಿ ಭಾಗವಹಿಸಿದ್ದವರನ್ನು, 20 ರಿಂದ 25 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವವರನ್ನು ಸಹ ಸೇವೆಗಳಿಂದ ವಜಾಗೊಳಿಸಲಾಯಿತು.

ಅದೇನೇ ಇದ್ದರೂ, ರಾಷ್ಟ್ರೀಯ ಚಳವಳಿಯೊಂದಿಗೆ ನೇರವಾಗಿ ಸಂಪರ್ಕ ಹೊಂದಿದ ಮೊದಲ ಕಾರ್ಮಿಕರ ಮುಷ್ಕರವು ವ್ಯರ್ಥವಾಗಿ ಕೊನೆಗೊಳ್ಳಲಿಲ್ಲ, ಬದಲಾಗಿ ಇದು ಮೊದಲ ಭಾರತೀಯ ಕಾರ್ಮಿಕ ಸಂಘಗಳಲ್ಲಿ ಒಂದಾದ ಪೂರ್ವ ಭಾರತ ರೈಲ್ವೆ ನೌಕರರ ಸಂಘವನ್ನು ಪ್ರಾರಂಭಿಸುವಲ್ಲಿ ಫಲಪ್ರದವಾಯಿತು.

ಮುಷ್ಕರವನ್ನು ಹತ್ತಿಕ್ಕಿದ ನಂತರವೂ, ರೈಲ್ವೆ ನೌಕರರನ್ನು ಸಂಘಟಿಸುವಲ್ಲಿ ಟ್ರೇಡ್ ಯೂನಿಯನ್ ನಾಯಕರ ಅವಿರತ ಪ್ರಯತ್ನಗಳ ಬಗ್ಗೆ ಮತ್ತು ಅದರಲ್ಲೂ ವಿಶೇಷವಾಗಿ ಕೆಲಸಗಾರರಲ್ಲಿ ವೇಗವಾಗಿ ಹರಡುತಿದ್ದ ರಾಷ್ಟ್ರೀಯ ಭಾವನೆಗಳ ಬಗ್ಗೆ ಸಾಮ್ರಾಜ್ಯಶಾಹಿ ಸರ್ಕಾರವು ಗಾಬರಿಗೊಂಡಿತು.

ಅದೇ ವರ್ಷದ ಆಗಸ್ಟ ನಲ್ಲಿ ಜಮಾಲಪುರ್ ರೈಲ್ವೆ ಕಾರ್ಯಾಗಾರದಲ್ಲಿ ಯೂನಿಯನ್ ನೇತೃತ್ವದಲ್ಲಿ ಮತ್ತೊಂದು ಮುಷ್ಕರ ನಡೆಯಿತು ಮತ್ತು ಈ ಬಾರಿ ಮುಷ್ಕರನಿರತ ಕಾರ್ಮಿಕರು ಪೊಲೀಸ್ ದಾಳಿಯನ್ನು ವಿರೋಧಿಸುವಲ್ಲಿ ಯಶಸ್ವಿಯಾದರು. 1906 ರಲ್ಲಿ ರೈಲ್ವೆ ನೌಕರರ ಈ ಗಮನಾರ್ಹ ಮುಷ್ಕರವು ಇತರ ರೈಲ್ವೆಗಳಲ್ಲಿನ ಕಾರ್ಮಿಕರಲ್ಲಿ ಚೈತನ್ಯ ತುಂಬಿಸಿತು. ಇದರ ಪರಿಣಾಮವಾಗಿ 1907 ರಲ್ಲಿ ರೈಲ್ವೆ ನೌಕರರ ದೇಶವ್ಯಾಪಿ ಅಭೂತಪೂರ್ವ ಮುಷ್ಕರ ನಡೆಯಿತು.

1906 ರ ಡಿಸೆಂಬರ್ ಎರಡನೇ ವಾರದಲ್ಲಿ ಬ್ರಿಟಿಷ್ ಒಡೆತನದ ಹೂಗ್ಲಿ ಸೆಣಬಿನ ಗಿರಣಿಯಲ್ಲಿ ಒಂದು ಮುಷ್ಕರ ಸಂಭವಿಸಿತು. ರಾತ್ರಿ ಪಾಳಿ ಜಾರಿಗೊಳಿಸಿದರ ಮತ್ತು ವೇತನ ಕಡಿತದ ವಿರುದ್ಧ ಮುಷ್ಕರವನ್ನು ನಿರ್ದೇಶಿಸಲಾಯಿತು. ಹತ್ತಿ ಗಿರಣಿಯ ಕಾರ್ಮಿಕರು ಕೂಡ ಅದೇ ಸಮಯದಲ್ಲಿ ಮುಷ್ಕರ ನಡೆಸಿದರು. ಬಂಗಾಳದ ಕಲ್ಲಿದ್ದಲು ಕೈಗಾರಿಕೆಯಲ್ಲಿ ಕೆಲಸ ಮಾಡುವ ಕಾರ್ಮಿಕರು ಸರಳ ಟ್ರೇಡ್ ಯೂನಿಯನ್ ಪ್ರಜ್ಞೆಯಲ್ಲಿಯೂ ಹೆಚ್ಚು ಹಿಂದುಳಿದಿದ್ದರೂ, ಸಹ ಶೋಷಣೆಯ ವಿರುದ್ಧ ಮುಷ್ಕರ ಮಾಡುವ ಪ್ರವೃತ್ತಿಯನ್ನು ಪ್ರದರ್ಶಿಸಿದರು. ಬಂಗಾಳದ ರಾಷ್ಟ್ರೀಯ ಚಳವಳಿಯ ಅಗ್ರಗಣ್ಯ ನಾಯಕರಾದ ಬಿಪಿನ್ ಚಂದ್ರ ಪಾಲ್, ಸಿ.ಆರ್. ದಾಸ್. ಇನ್ನೂ ಕೆಲವು ರಾಷ್ಟ್ರೀಯ ನಾಯಕರು, ವಕೀಲರು ಮತ್ತು ಇತರ ಬುದ್ಧಿಜೀವಿಗಳು. ಉದಾ:. ಶ್ಯಾಮ್‌ಸುಂದರ್ ಚಕ್ರವರ್ತಿ, ಅಪೂರ್ಬಾ ಕುಮಾರ್ ಘೋಳ್, ಎಸ್.ಹಲ್ದಾರ್, ಅಶ್ವಿನಿ ಕುಮಾರ್ ಬ್ಯಾನರ್ಜಿ, ಪ್ರೇಮ್‌ತೋಶ್ ಬೋಸ್ ಸಹ ಕಾರ್ಮಿಕರ ಪರವಾಗಿ ಸಕ್ರಿಯವಾಗಿ ನಂತರು. ಅವರು ವಾಸ್ತವವಾಗಿ ಬಂಗಾಳದ ಆರಂಭಿಕ ಟ್ರೇಡ್ ಯೂನಿಯನ್ ಚಳವಳಿಯ ಸಂಘಟಕರಾಗಿದ್ದರು. ಆದರೆ ಅವರು ಮುಖ್ಯವಾಗಿ ಬ್ರಿಟಿಷ್ ಒಡೆತನದ ಕೈಗಾರಿಕೆಗಳಲ್ಲಿ ಕಾರ್ಮಿಕ ಚಳವಳಿಯನ್ನು ಪ್ರೋತ್ಸಾಹಿಸಿದರು. ಆದರೆ ಭಾರತದ ಒಡೆತನದ ಪ್ರಸಿದ್ಧ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ, ಅವರು ಹೆಚ್ಚಾಗಿ ಮೌನವಾಗಿದ್ದರು. 1905 ರ ಸಾಮ್ರಾಜ್ಯಶಾಹಿ–ವಿರೋಧಿ ರಾಜಕೀಯ ಉತ್ಕ್ರಾಂತಿಯಲ್ಲಿ ಬಂಗಾಳದ ಕಾರ್ಮಿಕ ವರ್ಗವು ಮಹತ್ವದ ಪಾತ್ರವನ್ನು ವಹಿಸಿತು ಎಂಬುದು ನಿರ್ವಿವಾದ. ಈ ಹೆಗ್ಗಳಿಕೆಯ ಹೊರತಾಗಿಯೂ, ಅವರ ವರ್ಗ–ಪ್ರಜ್ಞೆಯ ಅಪಕ್ವ ಬೆಳವಣಿಗೆಯು ಅವರನ್ನು ರಾಷ್ಟ್ರೀಯ–ಬೂರ್ಜ್ವಾ ನಾಯಕತ್ವದ ಅಡಿಯಾಳಾಗಿಯೇ ಇಟ್ಟಿತು.

ಇತರ ಪ್ರಾಂತ್ಯಗಳಲ್ಲಿ

1903 ರಲ್ಲಿ, ಮದ್ರಾಸ್ ಸರ್ಕಾರಿ ಮುದ್ರಣಾಲಯದ ಮುದ್ರಣ ಮತ್ತು ಯಂತ್ರ ವಿಭಾಗದಲ್ಲಿ ಕೆಲಸಗಾರರಿಗೆ ವೇತನವಿಲ್ಲದೆ ಅಧಿಕಾವಧಿ ಕೆಲಸ ಮಾಡಿಸುವದರ ವಿರುದ್ಧ ಮುಷ್ಕರ ನಡೆಯಿತು. ಈ ಮುಷ್ಕರ ಸುಮಾರು ಆರು ತಿಂಗಳ ಕಾಲ ನಡೆಯಿತು,

1905 ರ ಸುಮಾರಿಗೆ ವಿದ್ಯುದ್ದೀಪದ ಬೆಳಕಿನ ಪರಿಚಯವು ಗಿರಣಿ–ಮಾಲೀಕರಿಗೆ ಅನೇಕ ಗಿರಣಿಗಳಲ್ಲಿ ಕೆಲಸದ ಸಮಯವನ್ನು ಇನ್ನಷ್ಟು ಹೆಚ್ಚಿಸಲು ಪ್ರೇರೇಪಿಸಿತು. ಇದರಿಂದ ಕಾರ್ಮಿಕರು ಅಸಂತುಷ್ಟರಾದರು ಮತ್ತು ಅಲ್ಲಲ್ಲಿ ಹಲವಾರು ಮುಷ್ಕರಗಳು ನಡೆದವು. ಬಾಂಬೆಯ ಜವಳಿ ಉದ್ಯಮದಲ್ಲಿ, ವಿದ್ಯುತ್ ಬೆಳಕಿನ ಲಾಭವನ್ನು ಪಡೆದುಕೊಳ್ಳಲು ಮಾಲೀಕರು ಹೆಚ್ಚಿನ ಸಮಯವನ್ನು ವಿಧಿಸಿದಾಗ, 1905ರಲ್ಲಿ ಅನೇಕ ಗಿರಣಿಗಳಲ್ಲಿ ಹಲವಾರು ಮುಷ್ಕರಗಳು ಸಂಭವಿಸಿದವು. ಇವುಗಳಲ್ಲಿ ಕೆಲವು ಮುಷ್ಕರಗಳು ಸಮರಶೀಲ ಪ್ರದರ್ಶನಗಳೊಂದಿಗೆ ನಡೆದವು. ಅದೇ ವರ್ಷದ ಅಕ್ಟೋಬರ್‌ನಲ್ಲಿ ಮುಷ್ಕರಗಳು ಟೈಕುಮ್‌ದಾಸ್ ಮಿಲ್, ಫೀನಿಕ್ಸ್ ಮಿಲ್ ಮತ್ತು ಇತರ ಹಲವಾರು ಗಿರಣಿಗಳಲ್ಲಿ ವ್ಯಾಪಕವಾಗಿ. 1907 ರಲ್ಲೂ ಬಾಂಬೆಯಲ್ಲಿ ವೇತನ ಹೆಚ್ಚಳಕ್ಕಾಗಿ ಮುಷ್ಕರಗಳು ನಡೆದವು, ಅವುಗಳಲ್ಲಿ ಕೆಲವು ಒಂದು ವಾರಕ್ಕೂ ಹೆಚ್ಚು ಕಾಲ ನಡೆದವು.

ಬಾಂಬೆಯ ಐನೂರು ಪೋಸ್ಟ್‌ಮ್ಯಾನ್‌ಗಳು ವೇತನ ಹೆಚ್ಚಳಕ್ಕೆ ಒತ್ತಾಯಿಸಿ 1906 ರ ಆಗಸ್ಟ್ 17 ರಂದು ಮುಷ್ಕರ ನಡೆಸಿದರು. ಒಂದು ವಾರಕ್ಕೂ ಹೆಚ್ಚು ಕಾಲ ನಡೆದ ಮುಷ್ಕರವು ಅಂಚೆ ಸೇವೆಯನ್ನು ಸ್ಥಗಿತಗೊಳಿಸಿತು. ಮುಷ್ಕರನಿರತ ನೌಕರರ ಆರು ನಾಯಕರ ವಿರುದ್ಧ ಸರ್ಕಾರ ಬಂಧನ ವಾರಂಟ್ ಹೊರಡಿಸಿತು.

1906–7ರ ಅವಧಿಯಲ್ಲಿ ಕಾರ್ಮಿಕ ಚಳವಳಿಯ ಹೆಚ್ಚಿದ ಪ್ರಮಾಣವು ಹತ್ತಿ–ಜವಳಿ ಕೈಗಾರಿಕೆಗಳ ಜೊತೆಗೆ ಇತರ ಕೈಗಾರಿಕೆಗಳಲ್ಲಿನ ಕಾರ್ಮಿಕರ

ಪುಟ 14 ನೋಡಿ

ಬಾಲಾಕೋಟ್ ವಾಯು ದಾಳಿ ಆರ್ಣಬ್ ಸಂಭ್ರಮ!- ವಾಟ್ಸಪ್ ನಿಂದ ಬಯಲು?

ಟಿಆರ್‌ಪಿ ಹಗರಣಕ್ಕೆ ಕುರಿತಂತೆ ನಡೆಯುತ್ತಿರುವ ತನಿಖೆಯ ವೇಳೆ ರಿಪಬ್ಲಿಕ್ ಟಿವಿಯ ಆರ್ಣಬ್ ಗೋಸ್ವಾಮಿ ಮತ್ತು ಮಾಜಿ ಬಾರ್ಕ್(ಪ್ರಸಾರ ಪ್ರೇಕ್ಷಕಸ 'ಂಶೋಧನಾ ಮಂಡಳಿ) ಸಿಇಒ ಪಾರ್ಥೋ ದಾಸ್‌ಗುಪ್ತಾ ನಡುವಿನ ವಾಟ್ಸಾಪ್ ಸೋರಿಕೆಯಾಗಿ ಚಾಟ್ ಟ್ವಿಟರ್‌ನಲ್ಲಿ ಸಾಕಷ್ಟು ಸದ್ದು ಮಾಡಿದೆ. ಗೋಸ್ವಾಮಿ ಮತ್ತು ಬಾರ್ಕ್ ಸಿಇಒ ನಡುವಿನ ವಾಟ್ಸಾಪ್ ಚಾಟ್ ಸ್ಕ್ರೀನ್‌ಶಾಟ್‌ಗಳು ಸಾಮಾಜಿಕ ಜಾಲತಾಣದಲ್ಲಿ ತೀವ್ರ ಚರ್ಚೆಯನ್ನು ಹುಟ್ಟಿ ಹಾಕಿವೆ.

ಇವು ಅವರನ್ನ ಪವರ್ ಬ್ರೋಕರ್ ಆಗಿ ಗುರುತಿಸಿದ್ದು, ಅನೇಕ



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ಸಿಫಿ.ಕಾಂ

ಪಿತೂರಿಗಳನ್ನು ತೋರಿಸುತ್ತವೆ ಮತ್ತು ದೇಶದ ಯಾವುದೇ ಕಾನೂನು ನಿಯಮಗಳ ಪ್ರಕಾರ ಅವರು ದೀರ್ಘಕಾಲ ಜೈಲಿನಲ್ಲಿರುತ್ತಾರೆ ಎಂದು ಸುಪ್ರೀಂ ಕೋರ್ಟ್ ವಕೀಲ ಪ್ರಶಾಂತ್ ಭೂಷಣ್ ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಇವು ಟಿಆರ್‌ಪಿ ಕೇಸಿನಲ್ಲಿ ಮುಂಬೈ ಪೋಲೀಸ್ ಸಲ್ಲಿಸಿರುವ 3600 ಪುಟಗಳ ಪೂರಕ ಚಾರ್ಜ್‌ಶೀಟಿನ ಭಾಗವಾಗಿವೆ.

ಆರ್ಣಬ್ ಗೋಸ್ವಾಮಿ ಮತ್ತು ಬಾರ್ಕ್ ಸಿಇಒ ನಡುವಿನ ವಾಟ್ಸಾಪ್ ಚಾಟ್ ಸಂಭಾಷಣೆಯು ಅಧಿಕೃತವಾಗಿದ್ದರೆ, ಮುಂದಿನ ದಿನಗಳಲ್ಲಿ ಕಠಿಣ ಪರಿಸ್ಥಿತಿಯನ್ನು ಎದುರಿಸಬೇಕಾಗಬಹುದು ಎಂದು ತಜ್ಞರು ಹೇಳುತ್ತಿದ್ದಾರೆ. ಟಿಆರ್‌ಪಿ ಹಗರಣ ಪ್ರಕರಣದ ವಿಚಾರಣೆಯನ್ನು ಮುಂಬೈ ಹೈಕೋರ್ಟ್ ಜನವರಿ 29 ರವರೆಗೆ ಮುಂದೂಡಿದೆ. ಮುಂದಿನ ವಿಚಾರಣೆಯವರೆಗೆ ಗೋಸ್ವಾಮಿಯನ್ನು ಬಂಧಿಸುವುದಿಲ್ಲ ಎಂದು ಮುಂಬೈ ಪೊಲೀಸರು ತಿಳಿಸಿದ್ದಾರೆ.

ಈ ಬಗ್ಗೆ ತನಿಖೆ ನಡೆಸಲು ಜಂಟಿ ಸದನ ಸಮಿತಿ ರಚಿಸಬೇಕು ಎಂದು ಎನ್‌ಸಿಪಿ ಆಗ್ರಹವನ್ನು ಮಾಡಿದೆ. ಸೋರಿಕೆಯಾಗಿರುವ ವಾಟ್ಸಾಪ್ ಸಂಭಾಷಣೆಗಳು ದೇಶದಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿವೆ. ಬಾಲಕೋಟ್ ದಾಳಿಯ ಮಾಹಿತಿ ಆರ್ಣಬ್ ಗೋಸ್ವಾಮಿಗೆ ಮೊದಲೇ ತಿಳಿದಿತ್ತು ಎಂಬ ವಿಷಯವೂ ಚರ್ಚೆಯಾಗುತ್ತಿದ್ದು, ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಎನ್‌ಸಿಪಿ ಮುಖ್ಯಸ್ಥ ಮಹೇಶ್ ತಾಪಸೆ, "ಟಿಆರ್‌ಪಿಗಾಗಿ ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ವಿಷಯಗಳನ್ನು ಬಳಸಿಕೊಂಡಿರುವುದು ಅತ್ಯಂತ ಆಘಾತಕಾರಿ ಬೆಳವಣಿಗೆ," ಎಂದು ಪ್ರತಿಕ್ರಿಯಿಸಿದ್ದಾರೆ. ಈ 'ಚಾಟ್‌ಗೇಟ್' ಸಂಬಂಧ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಂದ


ವ್ಯಂಗ್ಯಚಿತ್ರ: ಪಿ. ಮಹಮ್ಮದ್

ಸ್ಪಷ್ಟನೆ ಬಯಸುತ್ತಿರುವುದಾಗಿ ಹೇಳಿದ್ದಾರೆ.

ಬಾಲ ಕೋಟ್ ವಾಯುದಾಳಿಗೆ ಸಂಬಂಧಿಸಿದಂತೆ ಆರ್ಣಬ್ ನಡೆ ಕುರಿತು ಪರ ವಿರೊಧದ ಚರ್ಚೆಗಳು ನಡೆಯುತ್ತಿವೆ. ಬಿಜೆಪಿಯರು ಆರ್ಣಬ್‌ನ್ನು ಸಮರ್ಥಿಸಿಕೊಂಡರೆ, ಅನೇಕರು ಇವರ ವಿರುದ್ಧ ಆಕ್ರೊಶ ವ್ಯಕ್ತಪಡಿಸುತ್ತಿದ್ದಾರೆ. ಅವತ್ತು ದೇಶದ ಮೇಲೆ ದಾಳಿ ನಡೆದಿತ್ತು. ನಲವತ್ತು ವೀರಯೋಧರ ದೇಹಗಳು ಚಿಂದಿಚಿಂದಿಯಾಗಿ ಬಿದ್ದಿದ್ದವು. ನಿಮ್ಮ ಆರ್ಣಬ್ ವಿಜಯೋತ್ಸಾಹದ ಕೇಕೆ ಹಾಕಿದನಲ್ಲ, ನಿಮಗೇನೂ ಅನಿಸೋದಿಲ್ವಾ ಅಂತ ಸಾಮಾಜಿಕ ಜಾಲತಾಣದಲ್ಲಿ ಕ್ರೀಯಾಶಿಲವಾಗಿರುವ ದಿನೇಶ್ ಕುಮಾರ ದಿನೋ ಆರ್ಣಬ್ ಸಮರ್ಥಕರನ್ನು ಪ್ರಶ್ನಿಸಿದ್ದಾರೆ.

ಮತ್ತೊಂದು ಹೊಸ ಎತ್ತರದಲ್ಲಿ ಪೆಟ್ರೋಲ್-ಡೀಸೆಲ್ ಬೆಲೆಗಳು

ಪೆಟ್ರೋಲ್- ಡೀಸೆಲ್ ದರ ಮತ್ತೆ ಹೊಸ ಎತ್ತರಕ್ಕೆ ಏರಿದೆ. ಪೆಟ್ರೋಲ್ ದರ ಲೀಟರ್ ಗೆ 25 ಪೈಸೆ ಏರಿಕೆ ಆಗಿ, ಬೆಂಗಳೂರಿನಲ್ಲಿ ರೂ.88.33, ನವದೆಹಲಿಯಲ್ಲಿ ರೂ. 85.45, ಕೋಲ್ಕತ್ತಾದಲ್ಲಿ ರೂ.86.87, ಮುಂಬೈನಲ್ಲಿ ರರೂ. 92.04, ಚೆನ್ನೈನಲ್ಲಿ ರೂ. 88.07 ಇದೆ.

ಡೀಸೆಲ್ ದರ ಕೂಡ ಲೀಟರ್ ಗೆ 25 ಪೈಸೆ ಹೆಚ್ಚಳವಾಗಿದ್ದು, ಬೆಂಗಳೂರಿನಲ್ಲಿ ರೂ. 80.20, ನವದೆಹಲಿಯಲ್ಲಿ ರೂ.75.63, ಕೋಲ್ಕತ್ತಾದಲ್ಲಿ ರೂ.79.23, ಮುಂಬೈನಲ್ಲಿ ರೂ.82.40, ಚೆನ್ನೈನಲ್ಲಿ ರೂ.80.90 ಇದೆ. ಅಂತರರಾಷ್ಟ್ರೀಯ ಕಚ್ಚಾ ತೈಲ ದರ, ವಿದೇಶಿ ವಿನಿಮಯ ದರ, ಕೇಂದ್ರ ಸರ್ಕಾರದ ಸುಂಕ ಮತ್ತು ಸ್ಥಳೀಯ ತೆರಿಗೆಗಳು ಅಥವಾ ವ್ಯಾಟ್ ಆಧಾರದ ಮೇಲೆ ಭಾರತದಲ್ಲಿ ನಿತ್ಯವೂ ತೈಲ ದರದ ಪರಿಷ್ಕರಣೆ ಆಗುತ್ತದೆ. ಕಳೆದ ಎರಡು ತಿಂಗಳಿಂದ ನಿರಂತರವಾಗಿ ಪೆಟ್ರೋಲ್, ಡಿಸೈಲ್, ಅಡಿಗೆ ಅನಿಲದರ ಹೆಚ್ಚಳವಾಗುತ್ತಿದೆ.

ಗುರುವಾರದಂದು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ದರ ಇಳಿಕೆ ಕಂಡಿತ್ತು. ಜಾಗತಿಕ ಬೆಂಚ್ ಮಾರ್ಕ್, ಬ್ರೆಂಟ್ ಕಚ್ಚಾ ಫ್ಯೂಚರ್ಸ್ 3 ಪರ್ಸೆಂಟ್ ಇಳಿಕೆ ಕಂಡು, ಬ್ಯಾರೆಲ್ ಗೆ 56.05 ಇತ್ತು. ಆದರೆ ಭಾರತದಲ್ಲಿ ಪೆಟ್ರೋಲ್ -ಡೀಸೆಲ್ ದರ ನಿಗದಿ ಮಾಡಿವಾಗ ಅಂತರರಾಷ್ಟ್ರೀಯ ಮಟ್ಟದ ಬೆಲೆಯ ಹದಿನೈದು ದಿನಗಳ ಸರಾಸರಿಯನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

ಯು.ಎಸ್. ಹೊಸ ಅಧ್ಯಕ್ಷ ಜೋ ಬೈಡನ್ ಕೊರೊನಾ ಉತ್ತೇಜನ ಪ್ಯಾಕೇಜ್ ದೊಡ್ಡ ಮಟ್ಟದಲ್ಲಿ ಘೋಷಣೆ ಮಾಡುವ ನಿರೀಕ್ಷೆಯಲ್ಲಿ ಕಳೆದ ಎರಡು ದಿನಗಳು ಅಂತರ್ರಾಷ್ಟ್ರೀಯ ತೈಲ ಬೆಲೆ ಬೆಂಚ್ ಮಾರ್ಕ್ ಮೇಲೇರಿತ್ತು. ಒಪೆಕ್ ಮತ್ತು ಸಹವರ್ತಿಗಳಿಂದ ಉತ್ಪಾದನೆ ಕಡಿತ ಮಾಡುವ ನಿರ್ಧಾರಕ್ಕೆ ಬಂದಿರುವುದು ಸಹ ತೈಲ ಬೆಲೆ ಏರಿಕೆಗೆ ಕಾರಣವಾಗಿದೆ ಎನ್ನಲಾಗಿದೆ.

ಆದರೆ ಭಾರತದಲ್ಲಿ ಇಂಧನ ನಬೆಲೆಗಳು ಏಷ್ಯಾದಲ್ಲೇ ಅತಿ ಹೆಚ್ಚು ಎಂದು ಹೇಳಲಾಗುತ್ತಿದೆ. ಅದಕ್ಕೆ ಕಾರಣ ಕೇಂದ್ರ ಸರಕಾರ ಇಂಧನದ ಮೇಲಿನ ತೆರಿಗೆಗಳನ್ನು ಮತ್ತೆ-ಮತ್ತೆ ಹೆಚ್ಚಿಸುತ್ತಿರುವುದು. ಕಳೆದ ಒಂದು ವರ್ಷದಲ್ಲೇ ಕೊರೊನ ದಾಳಿಯ ಜೊತೆಗೇ ಎರಡು ಬಾರಿ ಆಮದು ಮತ್ತು ಅಬಕಾರಿ ತೆರಿಗೆಗಳನ್ನು ಏರಿಸಲಾಗಿದೆ. 2014ರಲ್ಲಿ ಅಚ್ಛೇ ದಿನ್ ಆರಂಭವಾದ ಮೇಲೆ ಈ ತೆರಿಗೆಗಳಲ್ಲಿ ಐದು ಪಟ್ಟು ಏರಿಕೆ ಮಾಡಲಾಗಿದೆ. ಈಗ ಬಳಕೆದಾರರು ತೆರುವ ಬೆಲೆಗಳಲ್ಲಿ ಮೂರನೇ ಎರಡರಷ್ಟು ಈ ತೆರಿಗೆಗಳದ್ದೇ ಪಾಲು ಎನ್ನಲಾಗಿದೆ.

ಟ್ರ್ಯಾಕ್ಟರ್ ರ‍್ಯಾಲಿ-ಮಧ್ಯಪ್ರವೇಶಿಸಲು ಸುಪ್ರಿಂ ಕೋರ್ಟ್ ನಕಾರ

ಗಣರಾಜ್ಯೋತ್ಸವ ದಿನದಂದು ದೆಹಲಿಯಲ್ಲಿ ರೈತರ ಟ್ರ್ಯಾಕ್ಟರ್ ರ‍್ಯಾಲಿಯ ನಿರ್ವಹಣೆಗೆ ಸಂಬಂಧಿಸಿದಂತೆ ನಿರ್ದೇಶನ ಕೋರಿ ದೆಹಲಿ ಪೊಲೀಸರು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಜನವರಿ 18ರಂದು ಪರಿಶೀಲಿಸಿದೆ.

"ಕಾನೂನು ಸುವ್ಯವಸ್ಥೆ ಕಾಪಾಡುವ ಜವಾಬ್ದಾರಿ ಪೊಲೀಸರದ್ದು. ಹೀಗಾಗಿ ರೈತರ ಟ್ರ್ಯಾಕ್ಟರ್ ರ‍್ಯಾಲಿಗೆ ಅವಕಾಶ ನೀಡಬೇಕೋ ಬೇಡವೋ ಎಂಬುದನ್ನು ಪೊಲೀಸರು ಮೊದಲು ನಿರ್ಧರಿಸಬೇಕಿದೆ. ಅವರೇ ಈ ವಿಷಯದಲ್ಲಿ ನಿರ್ಧಾರ ತೆಗೆದುಕೊಳ್ಳಬೇಕಿರುವವರು" ಎಂದು ಹೇಳಿದೆ.


ವಿಚಾರಣೆ ನಡೆಸಿದ ಮುಖ್ಯ ನ್ಯಾಯಾಧೀಶರನ್ನು ಒಳಗೊಂಡ ಪೀಠವು, "ಪೊಲೀಸರು ಕಾನೂನಿನಡಿಯಲ್ಲಿ ಎಲ್ಲಾ ಅಧಿಕಾರ ಬಳಸಿಕೊಳ್ಳಲು ಅವಕಾಶವಿದೆ" ಎಂದು ತಿಳಿಸಿದ್ದು, ಜನವರಿ 20ಕ್ಕೆ ವಿಚಾರಣೆಯನ್ನು ಮುಂದೂಡಿತು.

ಜನವರಿ 20ರಂದು "ಅನುಮತಿ ನೀಡಬೇಕೇ ಬೇಡವೇ ಎಂದು ನಿರ್ಧರಿಸಬೇಕಾದ್ದು ಪೋಲಿಸ್. ನೀವು ದೇಶದ ಕಾರ್ಯಾಂಗ. ನಿಮಗೆ ಸೂಕ್ತ ಆದೇಶಗಳನ್ನು ನೀಡುವ ಅಧಿಕಾರ ಇದೆ. ದಯವಿಟ್ಟು ಅದನ್ನು ಮಾಡಿ. ನ್ಯಾಯಾಲಯ ಮಧ್ಯಪ್ರವೇಶಿಸಲು ಸಾಧ್ಯವಿಲ್ಲ" ಎಂದು ಟಿಪ್ಪಣಿ ಮಾಡಿತು."ನಾವು ಆದೇಶ ನೀಡುವುದಿಲ್ಲ. ಈ ಅರ್ಜಿಯನ್ನು ಹಿಂತೆಗೆದುಕೊಳ್ಳು ಅವಕಾಶ ಕೊಡುತ್ತೆವೆ. ನಿಮಗೆ ಅಧಿಕಾರವಿದೆ. ನೀವೇ ನಿರ್ಧರಿಸಿ" ಎಂದು ನ್ಯಾಯಾಧೀಶರುಗಳು ಹೇಳಿದರು.

ಜನವರಿ 25 ರ ವರೆಗೆ ಏನಾಗುತ್ತೋ ನೋಡೋಣ, ಅದುವರೆಗೆ ಇದನ್ನು ಬಾಕಿ ಇಡಬಹುದು ಎಂದು ಸರಕಾರದ ಪರವಾಗಿ ಸಾಲಿಸಿಟರ್ ಜನರಲ್ ಸೂಚಿಸಿದರು. ಆದರೆ ಹಾಗೆ ಮಾಡಲು ನ್ಯಾಯಾಲಯ ನಿರಾಕರಿಸಿತು.

ಕಳೆದ ವಾರ ಕೇಂದ್ರದ ಮೂರು ವಿವಾದಿತ ಕೃಷಿ ಕಾಯ್ದೆಗಳ ಜಾರಿಗೆ ತಾತ್ಕಾಲಿಕ ತಡೆಯೊಡ್ಡಿದ್ದ ಸುಪ್ರೀಂ ಕೋರ್ಟ್, ನಾಲ್ಕು ಸದಸ್ಯರನ್ನೊಳಗೊಂಡ ಸಮಿತಿ ರಚಿಸಿ ರೈತರು ಹಾಗೂ ಕೇಂದ್ರದ ನಡುವಿನ ಬಿಕ್ಕಟ್ಟನ್ನು ಶಮನಗೊಳಿಸಲು ಮುಂದಾಗಿತ್ತು. ಆದರೆ ಈ ಸಮಿತಿಯ ಯಾವುದೇ ಸಭೆಗಳಿಗೂ ಹೋಗುವುದಿಲ್ಲ ಎಂದು ರೈತ ಸಂಘಟನೆಗಳು ಈಗಾಗಲೇ ನಿರ್ಧಾರವನ್ನು ಮಾಡಿವೆ.

ಕೇಂದ್ರ ಸರಕಾರ ಕೋರ್ಟ್, ಹಾಗೂ ಪೊಲೀಸ್ ಮೂಲಕ ರೈತರ ಹೋರಾಟಕ್ಕೆ ತಡೆ ಒಡ್ಡುವ ಪ್ರಯತ್ನ ಮಾಡುತ್ತಿದೆ. ಯಾವುದೇ ಕಾರಣಕ್ಕೂ ಚಳುವಳಿ ತಡೆಯಲು ಸಾಧ್ಯವಿಲ್ಲ. ಕಾಯ್ದೆ ವಾಪಸ್ಸಾಗುವವರೆಗೂ ನಮ್ಮ ಹೋರಾಟ ನಿಲ್ಲುವುದಿಲ್ಲ. ಗಣರಾಜ್ಯೋತ್ಸವದ ಟ್ರಾಕ್ಟರ್ ಪರೇಡ ನ್ನು ಶಾಂತಿಯುತವಾಗಿ ನಡೆಸುತ್ತೇವೆ ಎಂದು ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷರಾದ ಅಶೋಕ ಧವಳೆ ಸ್ಪಷ್ಟಪಡಿಸಿದ್ದಾರೆ.


ವ್ಯಂಗ್ಯಚಿತ್ರ: ಸಾತ್ವಿಕ್ ಗಡೆ, ದಿ ಹಿಂದು

ಪ್ರಧಾನ ಮಂತ್ರಿಗಳು ರಾಷ್ಟ್ರೀಯ ಯುವಜನ ದಿನವಾಗಿ ಆಚರಿಸುತ್ತಿರುವ ಸ್ವಾಮಿ ವಿವೇಕಾನಂದ ಜಯಂತಿಯ ದಿನ ಯುವಜನರಿಗೆ ವಂಶಾಡಳಿತವನ್ನು ಕಿತ್ತು ಹಾಕಲು ರಾಜಕೀಯವನ್ನು ಪ್ರವೇಶಿಸುವಂತೆ ಕರೆ ನೀಡಿದರು. ಯುವಜನರಿಗೆ ವರ್ಷಕ್ಕೆ ಎರಡು ಕೋಟಿ ಉದ್ಯೋಗಗಳ ಅಚ್ಛೇ ದಿನ್ ಭರವಸೆಯ ಬಗ್ಗೆ ಚಕಾರವೆತ್ತಲಿಲ್ಲ. "ಯುವ ಉತ್ಸಾಹ್-ನಯೇ ಭಾರತ್‌ಕಾ' ಈ ವರ್ಷದ ಯುವ ಜನ ದಿನಾಚರಣೆಯ ಥೀಮ್ ಆಗಿತ್ತು.-ಸುದ್ದಿ



ಏಳಿ, ಎದ್ದೇಳಿ,
ಅವರು ಉದ್ಯೋಗದ ಭರವಸೆಯನ್ನು
ಈಡೇರಿಸುವ ವರೆಗೆ
ಕೇಳುವುದನ್ನು ನಿಲ್ಲಿಸಬೇಡಿ!

ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ರೈತರ ಪ್ರತಿಭಟನೆಯ ಹಿಂದಿನ ಕತೆ-ವ್ಯಥೆ

ನಗರವಾಸಿಗಳ ಪ್ರಶ್ನೆಗಳಿಗೆ ಕೃಷಿ ತಜ್ಞರೊಬ್ಬರ ಉತ್ತರಗಳು



ಮೂರು ಹೊಸ ಕೃಷಿ ಕಾನೂನುಗಳು ರೈತರಿಗೆ ಲಾಭದಾಯಕವಾಗಿವೆ ಎಂದು ಕೇಂದ್ರ ಸರ್ಕಾರ ಮತ್ತು ಮಾಧ್ಯಮಗಳು ಟಾಂ ಟಾಂ ಮಾಡುತ್ತಿರುವಾಗ, ಈ ಕಾನೂನುಗಳನ್ನು ರದ್ದು ಮಾಡುವವರೆಗೂ ತಾವು ಹಿಂದೆ ಸರಿಯುವುದಿಲ್ಲ ಎಂದು ದೆಹಲಿಯ ಗಡಿ ಭಾಗಗಳಲ್ಲಿ ಕ್ಯಾಂಪ್ ಮಾಡಿ ಪ್ರತಿಭಟನೆ ನಡೆಸುತ್ತಿರುವ ರೈತರು ಘೋಷಿಸಿದ್ದಾರೆ. ಈ ಪ್ರತಿಭಟನೆಯ ಸಾಧಕ-ಬಾಧಕಗಳ ಬಗ್ಗೆ, ತಪ್ಪು ಮಾಹಿತಿ ಮತ್ತು ವಾಸ್ತವಾಂಶಗಳ ನಡುವೆ ಸ್ವಲ್ಪ ಗೊಂದಲವಿದ್ದರೆ ಅದನ್ನು ಅರ್ಥಮಾಡಿಕೊಳ್ಳಬಹುದು. ಆದರೆ, ತಮ್ಮದೇ ಲೋಕದಲ್ಲಿ ವಿಹರಿಸುತ್ತಿರುವ ಭಾರತದ ಸುಮಾರು ಮಂದಿ ನಗರವಾಸಿಗಳು ರೈತರ ಬಗ್ಗೆ ಒಂದು ರೀತಿಯ ತಿರಸ್ಕಾರ ಭಾವನೆ ಬೆಳೆಸಿಕೊಂಡಿದ್ದಾರೆ. ಇದಕ್ಕೆ ಒಂದು ಕಾರಣವೆಂದರೆ, ಪ್ರತಿಭಟನೆಯ ಹಿಂದಿರುವ ಕತೆ-ವ್ಯಥೆಗಳು ಅವರಿಗೆ ಬಹುಶಃ ಗೊತ್ತಿರಲಿಕ್ಕಿಲ್ಲ. ಈ ಹಿನ್ನೆಲೆಯಲ್ಲಿ, ರೈತರ ಆದಾಯ ಸಮಾನತೆಗಾಗಿ ಕಳೆದ ಎರಡು ದಶಕಗಳಿಂದ ಹೋರಾಟ ನಡೆಸುತ್ತಿರುವ ಪತ್ರಕರ್ತ, ಲೇಖಕ ಮತ್ತು ಆಹಾರ ಮತ್ತು ವ್ಯಾಪಾರ ನೀತಿ ತಜ್ಞ ದೇವಿಂದರ್ ಶರ್ಮಾ ಅವರೊಂದಿಗೆ ಪತ್ರಕರ್ತರೊಬ್ಬರು ನಡೆಸಿದ ಸಂದರ್ಶನದ ಪ್ರಶ್ನೆ-ಉತ್ತರಗಳ ಪೈಕಿ ಐದನ್ನು ಇಲ್ಲಿ ಸಂಕ್ಷಿಪ್ತವಾಗಿ ಕೊಡಲಾಗಿದೆ.

(ಕೃಪೆ: ರೋಹಿತ್‌ಕುಮಾರ್- ದಿ ವೈರ್.ಇನ್) ಸಂಗ್ರಹ-ಅನುವಾದ: ಕೆ.ಎಂ.ನಾಗರಾಜ್

ರೈತರು ದುಃಖಿತರಾಗಿದ್ದಾರೆ, ಏಕೆ?

ಈ ಮೂರು ಹೊಸ ಕೃಷಿ ಕಾನೂನುಗಳು ರೈತ ಸಮುದಾಯವನ್ನು ಕೆರಳಿಸಿವೆ. ಆದ್ದರಿಂದ, ಅವರು ಪ್ರತಿಭಟನೆ ನಡೆಸುತ್ತಿದ್ದಾರೆ ಎಂಬುದು ಅನೇಕರ ಭಾವನೆ. ವಾಸ್ತವಿಕವಾಗಿ ಹೇಳುವುದಾದರೆ, ಕಳೆದ 40 ವರ್ಷಗಳಲ್ಲಿ ಕೃಷಿಗೆ ಮಾಡಿದ ಭಾರಿ ಅನ್ಯಾಯ ಮತ್ತು ಅಸಮಾನತೆಗಳನ್ನು ಮೂರು ಅಧ್ಯಯನಗಳು ಬಹಿರಂಗಪಡಿಸಿವೆ. ರೈತರಲ್ಲಿ ಮಡುಗಟ್ಟಿದ್ದ ಆಕ್ರೋಶವು ಕೊನೆಗೂ ಕಟ್ಟೆಯೊಡೆದು ಹರಿದಿದೆ.

ವಿಶ್ವ ಸಂಸ್ಥೆಯ ಅಂಗ ಸಂಸ್ಥೆಯೊಂದು (UNCTAD) ನಡೆಸಿದ ಅಧ್ಯಯನದ ಪ್ರಕಾರ, 1980ರ ಮತ್ತು 2000ರ ದಶಕದ ನಡುವೆ, ಪ್ರಪಂಚದಾದ್ಯಂತ ಕೃಷಿ ಉತ್ಪನ್ನಗಳ ಮನೆ ಬಾಗಿಲ ಬೆಲೆಯು ನಿಶ್ಚಲವಾಗಿತ್ತು. ಅಂದರೆ, 2000ನೇ ಇಸವಿಯಲ್ಲಿ ರೈತರ ಆದಾಯವು (ಹಣದುಬ್ಬರಕ್ಕೆ ಹೊಂದಿಸಿ ಲೆಕ್ಕಹಾಕಿದ ನಂತರ) 1980ರ ದಶಕದಲ್ಲಿ ಇದ್ದಷ್ಟೇ ಇತ್ತು. ಈ ಸಮಸ್ಯೆಯನ್ನು ಶ್ರೀಮಂತ ದೇಶಗಳು ತಮ್ಮ ರೈತರಿಗೆ ನೇರ ಆದಾಯ ವರ್ಗಾವಣೆ ಮತ್ತು ಇತರ ಸವಲತ್ತುಗಳನ್ನು ಒದಗಿಸುವ ಮೂಲಕ ಬಗೆಹರಿಸಿದವು. ಆದರೆ, ಅಭಿವೃದ್ಧಿಶೀಲ ದೇಶಗಳಿಗೆ ಈ ರೀತಿ ಮಾಡಲು ಸಾಧ್ಯವಾಗಲಿಲ್ಲ. ಆದ್ದರಿಂದ, ಕಳೆದ 20 ವರ್ಷಗಳಿಂದ ಈ ದೇಶಗಳ ರೈತರು ಮೌನವಾಗಿ ನರಳಿದರು.

ನವದೆಹಲಿಯ ಒಂದು ಚಿಂತಕರ ಚಾವಡಿ (think tank) ಮತ್ತು ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಸ್ಥೆ (OECD) ಮತ್ತೊಂದು ಅಧ್ಯಯನವನ್ನು 2008ರಲ್ಲಿ ನಡೆಸಿದವು. ಈ ಅಧ್ಯಯನದ ಪ್ರಕಾರ 2010 ರಿಂದ 2017ರ ಅವಧಿಯಲ್ಲಿ ಭಾರತದ ರೈತರು ತಮ್ಮ ಕೃಷಿ ಆದಾಯದಲ್ಲಿ 45 ಲಕ್ಷ ಕೋಟಿ ರೂ.ಗಳ ನಷ್ಟ ಅನುಭವಿಸಿದರು. ಈ ನಷ್ಟವನ್ನು ಕೆಲವೇ ಕೆಲವು ಬೆಳೆಗಳಿಗೆ ಮಾತ್ರ ಲೆಕ್ಕಹಾಕಲಾಗಿತ್ತು. ಹಾಗಾಗಿ, ಎಲ್ಲ ಬೆಳೆಗಳನ್ನೂ ಸೇರಿಸಿ ಲೆಕ್ಕ ಹಾಕಿದರೆ, ರೈತರು ಅನುಭವಿಸಿದ ನಷ್ಟವು ಇನ್ನೂ ಹೆಚ್ಚಿನದ್ದೇ. ಅಂದರೆ, ರೈತರಿಗೆ ನ್ಯಾಯಯುತವಾದ ಆದಾಯ ದೊರಕದ ಕಾರಣದಿಂದಾಗಿ ಅವರು ಪ್ರತಿ ವರ್ಷವೂ ಸುಮಾರು 2.64 ಲಕ್ಷ ಕೋಟಿ ರೂ.ಗಳನ್ನು ಕಳೆದುಕೊಳ್ಳುತ್ತಾರೆ.

ನಂತರ ಬಂದದ್ದು 2016ರ ಸರ್ಕಾರದ ಆರ್ಥಿಕ ಸಮೀಕ್ಷಾ ವರದಿ. ಈ ವರದಿಯ ಪ್ರಕಾರ ಭಾರತದ 17 ರಾಜ್ಯಗಳಲ್ಲಿ, (ದೇಶದ ಸುಮಾರು ಅರ್ಧಭಾಗದಷ್ಟು) ಒಂದು ರೈತ ಕುಟುಂಬದ ಸರಾಸರಿ ವಾರ್ಷಿಕ ಆದಾಯವು ಕೇವಲ 20,000 ರೂಗಳು ಅಥವಾ ತಿಂಗಳಿಗೆ 1,700 ರೂಪಾಯಿಗಳಿಗಿಂತ ಕಡಿಮೆ ಇದೆ. ಈ ಹಣದಲ್ಲಿ ಒಂದು ಹಸುವನ್ನೂ ಸಾಕಲು ಸಾಧ್ಯವಿಲ್ಲ! ಈ ಅಲ್ಪ ಆದಾಯದಿಂದ ರೈತ ಸಮುದಾಯವು ಬದುಕುಳಿದಿದೆ ಎಂಬುದೇ ಒಂದು ಆಶ್ಚರ್ಯ.

ಈ ಕೆಲವು ಅಂಶಗಳನ್ನು ಪ್ರಸ್ತಾಪಿಸಿದ ಉದ್ದೇಶವೆಂದರೆ, ಕಳೆದ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಕೃಷಿಯು ಒಂದು ಭೀಕರ ಬಿಕ್ಕಟ್ಟಿಗೆ ಒಳಗಾಗಿದೆ. ಮೈ ಕೊರೆಯುವ ಚಳಿಯಲ್ಲಿ ದೆಹಲಿಯ ಗಡಿ ಭಾಗದಲ್ಲಿ ರೈತರು ಜಮಾಯಿಸಿರುವುದು, ಅವರು ಸಾಕಷ್ಟು ನೊಂದಿದ್ದಾರೆ ಎಂಬುದನ್ನು ಸೂಚಿಸುತ್ತದೆ. ವಿದ್ವಜ್ಜನರು, ಗಣ್ಯರು, ಅರ್ಥಶಾಸ್ತ್ರಜ್ಞರು ಈ ಎಲ್ಲರೂ ರೈತರಿಗೆ ನ್ಯಾಯ ಒದಗಿಸುವಲ್ಲಿ ವಿಫಲರಾಗಿದ್ದಾರೆ. ಆದ್ದರಿಂದ, ರೈತರು ತಮ್ಮ ಉಳಿವಿನ ಹೋರಾಟ ನಡೆಸುತ್ತಿದ್ದಾರೆ. ಇದ್ದದ್ದನ್ನು ಇಲಿ ಕಚ್ಚಿಕೊಂಡು ಹೋಯಿತು ಎನ್ನುವ ಹಾಗೆ ಈ ಕೃಷಿ ಕಾಯ್ದೆಗಳು ಜಾರಿಯಾದಾಗ ತಮ್ಮಲ್ಲಿರುವ ಸರ್ವಸ್ವವನ್ನೂ ಕಳೆದುಕೊಳ್ಳುವ ಭೀತಿಯು ರೈತರನ್ನು ಈ ರೀತಿಯ ಪ್ರತಿಭಟನೆಗೆ ತಳ್ಳಿದೆ. ಇದು, ಜಗತ್ತಿನ ಯಾವ ಭಾಗದಲ್ಲಿಯೂ ಕಂಡಿರದಂತಹ ಒಂದು ಅಭೂತಪೂರ್ವ ಪ್ರತಿಭಟನೆ.

ಇದು ಶ್ರೀಮಂತ ಪಂಜಾಬಿ ರೈತರ ಪ್ರತಿಭಟನೆಯಲ್ಲವೆ?

ಪಂಜಾಬ್ ಕೃಷಿ ವಿಶ್ವವಿದ್ಯಾಲಯ, ಪಂಜಾಬ್ ವಿಶ್ವವಿದ್ಯಾಲಯ ಮತ್ತು ಗುರು ನಾನಕ್ ದೇವ್ ವಿಶ್ವವಿದ್ಯಾಲಯಗಳು ಜಂಟಿಯಾಗಿ ನಡೆಸಿದ ಒಂದು ಅಧ್ಯಯನದ ಪ್ರಕಾರ, 2000-2015ರ ಅವಧಿಯಲ್ಲಿ, ಪಂಜಾಬಿನಲ್ಲಿ 16,600 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪಂಜಾಬಿನ ಕೃಷಿಕರ ಒಟ್ಟು ಸಾಲದ ಹೊರೆ ಸುಮಾರು 1 ಲಕ್ಷ ಕೋಟಿ ರೂಪಾಯಿಗಳು! ರೈತರು ನಿಜವಾಗಿಯೂ ಶ್ರೀಮಂತರಾಗಿದ್ದರೆ, ಇಷ್ಟು ದೊಡ್ಡ ಸಂಖ್ಯೆಯಲ್ಲಿ ಅವರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೇ? ರೈತರ ಹೋರಾಟದ ವಿಷಯದಲ್ಲಿ ಮಾತನಾಡುವಾಗ, ರೈತರು ಹೊಂದಿರುವ ಭೂ ಹಿಡುವಳಿಯ ಅಂದಾಜು ನಮ್ಮ ಗಮನದಲ್ಲಿರಬೇಕಾಗುತ್ತದೆ. ಭಾರತದ 86% ರೈತರು ಐದು ಎಕರೆಗಿಂತ ಕಡಿಮೆ (ಸಣ್ಣ ರೈತರು) ಭೂ ಹಿಡುವಳಿ ಹೊಂದಿದ್ದಾರೆ. 10% ರೈತರು 6 ರಿಂದ 8 ಎಕರೆ (ಮಧ್ಯಮ ರೈತರು) ಭೂ ಹಿಡುವಳಿ ಹೊಂದಿದ್ದಾರೆ. ಕೇವಲ 4% ರೈತರು 10 ಎಕರೆಗೂ ಹೆಚ್ಚು ಜಮೀನು ಹೊಂದಿದ್ದಾರೆ. ಅಂದರೆ, ಕೇವಲ 4% ರೈತರಿಗೆ 10 ಎಕರೆಗಿಂತ ಹೆಚ್ಚು ಜಮೀನು ಇರುವಾಗ, ನಾವು ಯಾವ ರೀತಿಯ ಶ್ರೀಮಂತ ರೈತರ ಬಗ್ಗೆ ಮಾತನಾಡುತ್ತಿದ್ದೇವೆ? ಪಂಜಾಬ್‌ನಲ್ಲಿ, ಸುಮಾರು 70% ಸಣ್ಣ ರೈತರು ಕನಿಷ್ಠ ಬೆಂಬಲ ಬೆಲೆಯ ಪ್ರಯೋಜನ ಪಡೆಯುತ್ತಾರೆ, ನಿಜ. ಕನಿಷ್ಠ ಬೆಂಬಲ ಬೆಲೆಯ ಪ್ರಯೋಜನ ಪಡೆಯುವವರಲ್ಲಿ ಅವರೇ ಹೆಚ್ಚು. ಆದ್ದರಿಂದ ಕನಿಷ್ಠ ಬೆಂಬಲ ಬೆಲೆ ಪಡೆಯುವ ಶ್ರೀಮಂತ ರೈತರೇ ಈ ಹೋರಾಟ ನಡೆಸುತ್ತಿದ್ದಾರೆ ಎಂಬುದು ಹಾಸ್ಯಾಸ್ಪದ.



ಈ ಪ್ರತಿಭಟನೆಯು ವಿರೋಧ ಪಕ್ಷಗಳ ಪ್ರಚೋದನೆಯಿಂದ ನಡೆಯುತ್ತಿದೆ ಎಂದು ಆರೋಪಿಸುವವರಿಗೆ ಹೀಗೆ ಹೇಳಬಹುದು: "ಮೈ ಕೊರೆಯುವ ಈ ಚಳಿಯಲ್ಲಿ ಒಂದೇ ಒಂದು ರಾತ್ರಿ ನಿಮ್ಮ ಮನೆಯ ಹೊರಗೆ ಮಲಗಿ, ಅದು ಹೇಗಿರುತ್ತದೆ ಎಂಬುದನ್ನು ಅನುಭವಿಸಿ ನೋಡಿ. ಹಣ ಕೊಟ್ಟರೂ ಸಹ ಯಾರೂ ಚಳಿಯಲ್ಲಿ ಮನೆಯಿಂದ ಹೊರಗೆ ಮಲಗುವುದಿಲ್ಲ. ದೆಹಲಿಯ ಹೊರವಲಯದ ರಸ್ತೆಯ ಮೇಲೆ ಒಂದು ಟ್ರಾಲಿಯಲ್ಲಿ ಅಥವಾ ಒಂದು ಟೆಂಟ್‌ನಲ್ಲಿ ಒಂದೇ ಒಂದು ರಾತ್ರಿ ಕಳೆಯಿರಿ ನೋಡೋಣ. ಹಣಕ್ಕಾಗಿಯೇ ಆದರೂ ಒಂದು ತಿಂಗಳಿಗಿಂತ ಹೆಚ್ಚು ಕಾಲ ನೀವು ರಸ್ತೆಯ ಮೇಲೆ ವಾಸ ಮಾಡಬಲ್ಲಿರಾ ಎಂದು ಯೋಚಿಸಿ". ಮನ ಕಲಕುವ ಪ್ರತಿಭಟನೆಯ ದೃಶ್ಯಗಳು ರೈತರ ಬಗ್ಗೆ ಹೊಂದಿರುವ ತಾತ್ಸಾರ ಮನೋಭಾವವನ್ನು ತೊರೆಯಲು ಕಾರಣವಾದರೆ, ಅಷ್ಟು ಮಟ್ಟಿಗೆ ಒಳ್ಳೆಯದೇ. ಪ್ರತಿಭಟನಾ ನಿರತ ರೈತರನ್ನು ಗೌರವಿಸೋಣ, ಅವರಿಗೆ ಏನು ಬೇಕು ಮತ್ತು ಅದನ್ನು ಅವರಿಗೆ ದೊರಕಿಸಲು ನಾವು ಏನು ಮಾಡಬಹುದು ಎಂಬುದನ್ನು ಅರ್ಥಮಾಡಿಕೊಳ್ಳಲು ಮೊದಲು ಪ್ರಯತ್ನಿಸೋಣ.

ಎಷ್ಟು ರೈತ ಸಂಘಟನೆಗಳು ಈ ಕಾನೂನುಗಳನ್ನು ಬೆಂಬಲಿಸುತ್ತವೆ?

ಬಹುಸಂಖ್ಯಾತ ರೈತರು ಈ ಕಾನೂನುಗಳ ಪರವಾಗಿದ್ದರೆ, ಪ್ರತಿಭಟನೆಯು ಇಷ್ಟು ದೊಡ್ಡದಿರುತ್ತಿತ್ತೇ? ಅನೇಕ ರೈತ ಸಂಘಟನೆಗಳು ಒಂದೇ ವೇದಿಕೆಯಲ್ಲಿ ಸೇರಿರುವುದೇ ಒಂದು ವಿಶೇಷ. ಎರಡು ದಶಕಗಳಿಂದಲೂ ರೈತರೊಂದಿಗೆ ಕೆಲಸ ಮಾಡಿರುವ ಅನುಭವವಿರುವ ನನಗೆ, ವಿವಿಧ ರೈತ ಸಂಘಟನೆಗಳು ಏಕಾಭಿಪ್ರಾಯಕ್ಕೆ ಬರುವುದನ್ನು ಕಾಣುವುದೇ ಕಷ್ಟ. ಇಲ್ಲಿ ನೀವು ಪಂಜಾಬ್, ಹರಿಯಾಣ, ರಾಜಸ್ಥಾನ, ಪಶ್ಚಿಮ ಉತ್ತರ ಪ್ರದೇಶ ಮತ್ತು ದೇಶದ ಇತರ ಭಾಗಗಳ ರೈತ ಒಕ್ಕೂಟಗಳ ನಾಯಕರನ್ನು ಕಾಣುತ್ತೀರಿ. ಇದು ಏನನ್ನು ತೋರಿಸುತ್ತದೆ ಎಂದರೆ, ವಿಕೋಪಕ್ಕೆ ಹೋಗಿರುವ ಪರಿಸ್ಥಿತಿಯಲ್ಲಿ, ತಮ್ಮ ನಡುವಿನ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು, ರೈತರು ತಮ್ಮ ಉಳಿವಿಗಾಗಿ ಈಗ ಒಂದಾಗಿ ಹೋರಾಟ ಮಾಡುತ್ತಿದ್ದಾರೆ. ಈ ಕಾನೂನುಗಳು ರೈತರಿಗೆ ಅನುಕೂಲಕರವಾಗಿವೆ ಎಂದು ಹೇಳುವ ಸಂಘಟನೆಗಳ ಬಗ್ಗೆ ಇಷ್ಟನ್ನು ಮಾತ್ರ ಹೇಳಬಹುದು: ಒಂದು ವಿಸಿಟಿಂಗ್ ಕಾರ್ಡ್ ಮುದ್ರಿಸಿಕೊಂಡು ನೀವೂ ಒಂದು ರೈತ ಸಂಘಟನೆಯನ್ನು ಪ್ರತಿನಿಧಿಸುತ್ತೀರಿ ಎಂದು ಹೇಳುವುದು ಕಷ್ಟವೇನಲ್ಲ. ಮುಖ್ಯವಾದ ಅಂಶವೆಂದರೆ ಇಷ್ಟೊಂದು ಬೃಹತ್ ಸಂಖ್ಯೆಯ ರೈತರು ಸಂಘಟಿತರಾಗಿ ಪ್ರತಿಭಟನೆ ನಡೆಸಿದ್ದಾರೆ. ರೈತರ ಒಂದೇ ಒಂದು ದೊಡ್ಡ ಗುಂಪು ದುಃಖಿತರಾಗಿದ್ದರೂ ಸಹ, ಅವರು ಏಕೆ ದುಃಖಿತರಾಗಿದ್ದಾರೆ ಮತ್ತು ಅವರಿಗೆ ಹೇಗೆ ಸಹಾಯ ಮಾಡಬಹುದು ಎಂಬುದು ಮುಖ್ಯ, ಅಲ್ಲವೆ? ಅವರನ್ನು ಹೀಯಾಳಿಸುವುದರ ಬದಲು.

ಕಾರ್ಪೊರೇಟ್ ಕೃಷಿ ಅಷ್ಟೊಂದು ಕೆಟ್ಟದ್ದೇ?

ಮೊನ್ನೆ ನನ್ನನ್ನು ಸಂದರ್ಶನ ಮಾಡುತ್ತಿದ್ದ ಒಂದು ಟಿ.ವಿ ಚಾನೆಲ್‌ನವರು, "ಈ ಕೃಷಿ ಕಾನೂನುಗಳ ಬಗ್ಗೆ ಮಾರುಕಟ್ಟೆಗಳು ಸಡಗರ-ಉತ್ಸಾಹದಲ್ಲಿರುವಾಗ, ರೈತರು ಏಕೆ ಅಸಂತುಷ್ಟರಾಗಿದ್ದಾರೆ?" ಎಂದು ಕೇಳಿದರು. "ನಿಮ್ಮ ಪ್ರಶ್ನೆಯನ್ನು ನೀವೇ ಉತ್ತರಿಸಿದ್ದೀರಿ. ಈ ಕಾನೂನುಗಳು ಷೇರು ಮಾರುಕಟ್ಟೆಗೆ ಅನುಕೂಲಕರವಾಗಿವೆ. ಹಾಗಾಗಿ ಮಾರುಕಟ್ಟೆಯು ಸಡಗರ-ಉತ್ಸಾಹದಲ್ಲಿದೆ. ಈ ಕಾನೂನುಗಳು ರೈತರಿಗೆ ಮಾರಕವಾಗಿವೆ. ಹಾಗಾಗಿ ಅವರು ಬೀದಿಗಿಳಿದಿದ್ದಾರೆ" ಎಂದು ಹೇಳಿದೆ.

ಜಗತ್ತು ಕಾರ್ಪೊರೇಟ್ ಕೃಷಿಯತ್ತ ಸಾಗುತ್ತಿದೆ, ನಿಜ. ಆದರೆ, ಅದರಿಂದ ರೈತರ ಆದಾಯ ವೃದ್ಧಿಸಿಲ್ಲ. ಉದಾಹರಣೆಗೆ, ಈ ಕೃಷಿ ಕಾನೂನುಗಳನ್ನು ನಾವು ಎರವಲು ಪಡೆದ ಅಮೇರಿಕಾ ದೇಶವನ್ನು ತೆಗೆದುಕೊಳ್ಳಿ. ಸುಮಾರು ಏಳು ದಶಕಗಳಿಂದಲೂ ಅಮೆರಿಕದಲ್ಲಿ, ಮಾರುಕಟ್ಟೆಗಳು ಮತ್ತು ಕೃಷಿ ವ್ಯಾಪಾರಗಳು ಮುಕ್ತವಾಗಿಯೇ ಇವೆ. ಆದರೂ, ಅಲ್ಲಿನ ಕೃಷಿ ಆದಾಯವು ಇಳಿಮುಖವಾಗುತ್ತಿದೆ. 2020ರಲ್ಲಿ, ಅಮೆರಿಕದಲ್ಲಿ ರೈತರು ದಿವಾಳಿಗೆ ಒಳಗಾಗಿದ್ದ ಮೊತ್ತವು 425 ಶತಕೋಟಿ ಡಾಲರ್‌ಗೂ ಹೆಚ್ಚಿನದು. ಕೃಷಿ ಸುಧಾರಣೆಗಳು ನಿಜಕ್ಕೂ ಅನುಕೂಲಕರವಾಗಿದ್ದರೆ ರೈತರು ದಿವಾಳಿಯಾಗುತ್ತಾರೆಯೇ? ಅಮೆರಿಕ ಕೂಡ ಕೃಷಿ ಬಿಕ್ಕಟ್ಟಿಗೆ ಒಳಗಾಗಿದೆ. ಗ್ರಾಮೀಣ ಅಮೇರಿಕಾದಲ್ಲಿ ಆತ್ಮಹತ್ಯೆಗಳು ಅಲ್ಲಿನ ನಗರಗಳಿಗೆ ಹೋಲಿಸಿದರೆ 45% ಹೆಚ್ಚು ಇವೆ. ಕಳೆದ ಕೆಲವು ವರ್ಷಗಳಲ್ಲಿ, ಅಮೇರಿಕಾದಲ್ಲಿ ಸಣ್ಣ ಕೃಷಿ ಹಿಡುವಳಿಗಳು ಕಣ್ಮರೆಯಾಗಿವೆ. ಅಮೆರಿಕದ ಜನಸಂಖ್ಯೆಯ ಶೇ.1.5ರಷ್ಟು ಮಂದಿ ಮಾತ್ರ ಈಗ ಕೃಷಿಯಲ್ಲಿ ತೊಡಗಿದ್ದಾರೆ. ಆದರೂ, ಅಮೆರಿಕವು ಜಗತ್ತಿನಲ್ಲೇ ಅತಿ ದೊಡ್ಡ ಕೃಷಿ ಉತ್ಪಾದಕ ದೇಶವಾಗಿ ಮುಂದುವರಿದಿದೆ. ಅಮೆರಿಕದ ಕೃಷಿಯ ಬಗ್ಗೆ ಮಾತನಾಡುವಾಗ, ದೊಡ್ಡ ದೊಡ್ಡ ಯಂತ್ರಗಳು, ದೊಡ್ಡ ದೊಡ್ಡ ಕೃಷಿ ಕಾರ್ಪೊರೇಟ್‌ಗಳು ಮತ್ತು ದೈತ್ಯ ಕೃಷಿಯ ಬಗ್ಗೆ ಮಾತನಾಡುತ್ತೇವೆ ಎಂದು ಅರ್ಥ. ಆದರೆ, ನಾವು ಭಾರತದ ಕೃಷಿಯ ಬಗ್ಗೆ ಮಾತನಾಡುವಾಗ, ಅದು ಲಕ್ಷ ಲಕ್ಷ ಸಣ್ಣ ರೈತರ ಬಗ್ಗೆ ಎಂದು ಅರ್ಥ.

ಅಮೆರಿಕದಲ್ಲಿ ಎಪಿಎಂಸಿಯೂ ಇಲ್ಲ, ಕನಿಷ್ಠ ಬೆಂಬಲ ಬೆಲೆಯೂ ಇಲ್ಲ. ವಾಲ್‌ಮಾರ್ಟ್ ನಂತಹ ದೈತ್ಯ ಚಿಲ್ಲರೆ ವ್ಯಾಪಾರಿ ಸಂಸ್ಥೆಗಳು ಹೊಂದಿರುವ ವಸ್ತುಗಳ ದಾಸ್ತಾನಿಗೆ ಮಿತಿಯೂ ಇಲ್ಲ. ಅಮೇರಿಕಾದಲ್ಲಿ ಗುತ್ತಿಗೆ ಬೇಸಾಯವೂ ಇದೆ ಮತ್ತು ಸರಕು ವ್ಯಾಪಾರವೂ ಇದೆ. ಆದರೂ, ಅಮೆರಿಕದ ರೈತರಿಗೆ ಸರ್ಕಾರವು ಪ್ರತಿ ವರ್ಷ ಸರಾಸರಿ 62,000 ಡಾಲರ್ ಸಬ್ಸಿಡಿ ನೀಡುತ್ತದೆ. ಈಗ ಪ್ರಶ್ನೆಯೆಂದರೆ, ಮುಕ್ತ ಮಾರುಕಟ್ಟೆಗಳು ನಿಜಕ್ಕೂ ದಕ್ಷವಾಗಿದ್ದರೆ, ಸರ್ಕಾರವು ಕೃಷಿ ವಲಯಕ್ಕೆ ಅಷ್ಟೊಂದು ಹಣವನ್ನು ಸುರಿಯುವುದಾದರೂ ಏಕೆ? ಪ್ರಪಂಚದ ಅತ್ಯಂತ ಶ್ರೀಮಂತ ವ್ಯಾಪಾರ ಒಕ್ಕೂಟದ (OECD) ದೇಶಗಳು, ನೇರ ಆದಾಯ ವರ್ಗಾವಣೆ ಅಥವಾ ಸಬ್ಸಿಡಿಗಳ ಮೂಲಕ ಪ್ರತಿ ವರ್ಷವೂ ನೂರಾರು ಕೋಟಿ ಡಾಲರ್‌ಗಳನ್ನು ಕೃಷಿ ಕ್ಷೇತ್ರಕ್ಕೆ ಸುರಿಯುತ್ತವೆ. ಕೃಷಿಗೆ ಯುರೋಪ್ ವಾರ್ಷಿಕ 100 ಶತಕೋಟಿ ಡಾಲರ್‌ಗಳ ಸಬ್ಸಿಡಿ ನೀಡುತ್ತಿದೆ. ಅದರಲ್ಲಿ ಅರ್ಧದಷ್ಟು ರೈತರಿಗೆ ನೇರ ಆದಾಯ ಬೆಂಬಲವಾಗಿ ವರ್ಗಾವಣೆಯಾಗುತ್ತದೆ. ಆದ್ದರಿಂದ, ಕೃಷಿ ವಲಯದಲ್ಲಿ ನಾವು ಕಾಣುವ 'ಮಾರುಕಟ್ಟೆ ದಕ್ಷತೆ'ಯು, ವಾಸ್ತವವಾಗಿ, ಕೃಷಿ ವಲಯಕ್ಕೆ ಸರ್ಕಾರದ

ಪುಟ 14 ನೋಡಿ

ನಗರವಾಸಿಗಳ ಪ್ರಶ್ನೆಗಳಿಗೆ ಕೃಷಿ ತಜ್ಞರೊಬ್ಬರ ಉತ್ತರಗಳು

ಪುಟ 13 ರಿಂದ

ಆರ್ಥಿಕ ಬೆಂಬಲವೇ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಸುಸ್ಥಿರ ಮತ್ತು ಕಾರ್ಯಸಾಧ್ಯ ಕೃಷಿ ಇದೆ ಎಂದರೆ ಅದು ಮಾರುಕಟ್ಟೆಗಳ ದಕ್ಷತೆಯ ಕಾರಣದಿಂದಲ್ಲ; ಅಲ್ಲಿನ ಸರ್ಕಾರಗಳು ಒದಗಿಸಿದ ಸಬ್ಸಿಡಿಯ ಕಾರಣದಿಂದ ಎಂಬ ಅಂಶದ ಬಗ್ಗೆ ನಾವು ಸ್ಪಷ್ಟತೆಯನ್ನು ಹೊಂದಿರಬೇಕಾಗುತ್ತದೆ. ಪ್ರಾಸಂಗಿಕವಾಗಿ ಹೇಳುವುದಾದರೆ, ಅಮೆರಿಕ ಮತ್ತು ಐರೋಪ್ಯ ಒಕ್ಕೂಟವನ್ನೂ ಕೂಡ ಹಿಂದಿಕ್ಕಿ, ಜಗತ್ತಿನಲ್ಲೇ ಈಗ ಅತಿ ಹೆಚ್ಚು ಕೃಷಿ ಸಬ್ಸಿಡಿಯನ್ನು ಒದಗಿಸುವ ದೇಶವಾಗಿ ಚೀನಾ ಹೊರಹೊಮ್ಮಿದೆ. 2016ರಲ್ಲಿ ಚೀನಾ ಸರ್ಕಾರವು ತನ್ನ ಕೃಷಿ ವಲಯಕ್ಕೆ 212 ಶತಕೋಟಿ ಡಾಲರ್ ಮೊತ್ತದ ಸಬ್ಸಿಡಿಯನ್ನು ನೀಡಿದೆ. ಗೋಧಿ ಬೆಳೆಯುವ ರೈತರ ಆದಾಯದಲ್ಲಿ ಶೇ.38ರಷ್ಟು ಸಬ್ಸಿಡಿಗಳ ಮೂಲಕ ಬರುತ್ತದೆ, ಅಕ್ಕಿ ಬೆಳೆಯುವ ರೈತರ ಶೇ.32ರಷ್ಟು ಆದಾಯವು ಸಬ್ಸಿಡಿಗಳ ಮೂಲಕ ಬರುತ್ತದೆ. ಅಧಿಕ ಇಳುವರಿಯ ಬೆಳೆಗಳಲ್ಲ, ಸಬ್ಸಿಡಿಗಳು ರೈತರಿಗೆ ಹೆಚ್ಚಿನ ಆದಾಯ ನೀಡುತ್ತವೆ.

ತಂತ್ರಜ್ಞಾನವನ್ನು ಅಳವಡಿಸಿಕೊಂಡಾಗ ಉತ್ಪಾದಕತೆ ಹೆಚ್ಚುತ್ತದೆ ಮತ್ತು ಆದಾಯವೂ ಹೆಚ್ಚುತ್ತದೆ, ನಿಜ. 1970ರ ದಶಕದಲ್ಲಿ, ಅಮೇರಿಕಾ ದೇಶವು ಉನ್ನತ ತಂತ್ರಜ್ಞಾನ ಅಳವಡಿಸಿಕೊಂಡ ಮತ್ತು ಹೆಚ್ಚು ಇಳುವರಿ ನೀಡುವ ಜಾನುವಾರುಗಳಿಂದ ಕೂಡಿದ ಅನೇಕ ಸಣ್ಣ ಸಣ್ಣ ಹೈನು ಕೃಷಿ ಉದ್ದಿಮೆ ಸಂಸ್ಥೆಗಳನ್ನು ಹೊಂದಿತ್ತು. ಅವು ಒಂದು ಮಾದರಿಯೂ ಆಗಿದ್ದವು. ಆದರೆ, ಸುಮಾರು ಹತ್ತು ವರ್ಷಗಳ ಹಿಂದೆ, ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯಲ್ಲಿ ಒಬ್ಬ ಡೈರಿ ರೈತನ ಆತ್ಮಹತ್ಯೆಯ ಆಘಾತಕಾರಿ ವರದಿಯನ್ನು ಓದಿದ್ದೆ. ಹಾಲಿನ ದರ ಕುಸಿತದಿಂದ ಆತ ಎಷ್ಟು ನೊಂದಿದ್ದನೆಂದರೆ, ತನ್ನ 51 ಹಸುಗಳ ಮೇಲೆ ಮೊದಲು ಗುಂಡು ಹಾರಿಸಿ, ನಂತರ ತಾನೂ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದ. ನಾನು ಹೇಳ ಹೊರಟಿದ್ದ ವಿಷಯವೇನೆಂದರೆ, ಅಮೇರಿಕದಲ್ಲೂ ಕಷ್ಟ ಕಾರ್ಪಣ್ಯಗಳಿವೆ. 1970ರ ದಶಕದಲ್ಲಿ ಅಮೇರಿಕಾದಲ್ಲಿದ್ದ ಡೈರಿ ಫಾರ್ಮ್‌ಗಳ ಪೈಕಿ 93% ಈಗ ಮುಚ್ಚಿವೆ. ಆದರೆ, ಹಾಲಿನ ಉತ್ಪಾದನೆ ಏರಿಕೆಯಾಗಿದೆ. ದೊಡ್ಡ ದೊಡ್ಡ ಕಾರ್ಪೊರೇಟ್‌ಗಳು ದೈತ್ಯ ಡೈರಿಗಳನ್ನು ಸ್ಥಾಪಿಸಿರುವ ಕಾರಣದಿಂದಾಗಿ ಹಾಲಿನ ದರ ಕುಸಿತಗೊಂಡು ಶೇ.93ರಷ್ಟು ಹೈನು ಕೃಷಿ ಸಂಸ್ಥೆಗಳು ಮುಚ್ಚಿವೆ. ತಂತ್ರಜ್ಞಾನ ಮತ್ತು ಉತ್ಪಾದಕತೆಗಳು ಹೈನುಗಾರರ ಸಹಾಯಕ್ಕೆ ಬಾರದೆ ಹೋದವು. ಹಾಲಿನ ದರ ಕುಸಿತವು ಉತ್ಪಾದನಾ ವೆಚ್ಚಗಳನ್ನೂ ಸಹ ಭರಿಸಲಾಗದ ಹಂತವನ್ನು ತಲುಪಿದಾಗ ಹೈನುಗಾರರು ತಮ್ಮ ಡೈರಿಗಳನ್ನು ಮುಚ್ಚಿದರು. ಹೈನುಗಾರಿಕೆಯನ್ನು ತೊರೆದರು. ಈ ಒಂದು ಉದಾಹರಣೆಯೇ ರೈತರ ಆದಾಯವನ್ನು ಹೆಚ್ಚಿಸಲು ನೆರವಾಗಬೇಕಾದ ಅಂಶಗಳು ವಾಸ್ತವವಾಗಿ ನೆರವಾಗಲಿಲ್ಲ ಎಂಬುದನ್ನು ತೋರಿಸುತ್ತದೆ. ಇದು ನಮಗೆ ಒಂದು ಎಚ್ಚರಿಕೆಯ ಗಂಟೆಯಾಗಬೇಕು. ರೈತರಿಗೆ ನಿಜಕ್ಕೂ ಬೇಕಾಗಿರುವುದು ನೇರ ಆದಾಯ ಬೆಂಬಲ. ಯುರೋಪ್ ಒದಗಿಸುವ ಸಬ್ಸಿಡಿಯಲ್ಲಿ ಶೇ.50ರಷ್ಟನ್ನು ನೇರ ಆದಾಯ ಬೆಂಬಲ ರೂಪದಲ್ಲಿ ನೀಡಲಾಗುತ್ತದೆ. ತನ್ನ ರೈತರಿಗೆ ವಾರ್ಷಿಕ 62,000 ಡಾಲರ್ ಸಬ್ಸಿಡಿಯನ್ನು ಅಮೆರಿಕ ನೀಡುತ್ತದೆ. ಆದ್ದರಿಂದ ಕೃಷಿಯನ್ನು ಸುಸ್ಥಿರವಾಗಿರಿಸುವ ಅಂಶವೆಂದರೆ, ಸಬ್ಸಿಡಿಯೇ.

ಕೃಷಿಯನ್ನು ಉಳಿಸುವ ದಾರಿ ಯಾವುದು?

ನಮ್ಮ ಇತಿಹಾಸದಲ್ಲಿ ಇದೊಂದು ನಿರ್ಣಾಯಕ ಘಟ್ಟ. ಈ ರೈತ ಚಳುವಳಿಯು ನಮ್ಮೆಲ್ಲರನ್ನೂ ಪರಿಸ್ಥಿತಿಯ ಬಗ್ಗೆ ಎಚ್ಚರ ಮೂಡಿಸಿ ಅದನ್ನು ಸರಿಪಡಿಸುವ ಬಗ್ಗೆ ಆಲೋಚಿಸುವಂತೆ ಮಾಡಬೇಕು. ಎಲ್ಲಕ್ಕಿಂತ ಮೊದಲು ಪ್ರತಿಯೊಬ್ಬ ರೈತನಿಗೂ ತನ್ನ ಉತ್ಪನ್ನಗಳಿಗೆ ಒಂದು ಖಾತ್ರಿಯಾದ ಬೆಲೆ ದೊರೆಯಬೇಕು. ಕಾರ್ಮಿಕರಿಗೆ ಕನಿಷ್ಠ ವೇತನ ಕೊಡಲು ಸಾಧ್ಯವಿದ್ದರೆ, ರೈತರಿಗೆ ಕನಿಷ್ಠ ಬೆಂಬಲ ಬೆಲೆ ಕೊಡಲು ಏಕೆ ಸಾಧ್ಯವಿಲ್ಲ? ಹಸಿರು ಕ್ರಾಂತಿಯ ಸಂದರ್ಭದಲ್ಲಿ ನಮ್ಮ ನೀತಿ ನಿರೂಪಕರು ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸುವ ಒಂದು ಗಮನಾರ್ಹ ಕೆಲಸ ಮಾಡಿದ್ದರು. ಕಾಲದ ಪರೀಕ್ಷೆಯಲ್ಲಿ ಜಯಶಾಲಿಯಾಗಿರುವ ಕನಿಷ್ಠ ಬೆಂಬಲ ಬೆಲೆ ಪದ್ಧತಿಯನ್ನು ಕಾನೂನುಬದ್ಧಗೊಳಿಸಬೇಕು.

'ದಿ ವೈರ್' ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿರುವ ಒಂದು ವಿಶ್ಲೇಷಣೆಯ ಪ್ರಕಾರ, 2020ರ ಅಕ್ಟೋಬರ್ ಮತ್ತು ನವೆಂಬರ್ ಈ ಎರಡು ತಿಂಗಳುಗಳಲ್ಲಿ, ಕೇವಲ ಗೋಧಿ ಮತ್ತು ಭತ್ತಕ್ಕೆ ಮಾತ್ರ ಅಲ್ಲ, ರೈತರು ತಮ್ಮ ಎಲ್ಲಾ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ಪಡೆದಿದ್ದರೆ, ಕೇವಲ ಈ ಎರಡು ತಿಂಗಳಲ್ಲಿ ತಮ್ಮ ಫಸಲಿನ ಮಾರಾಟದ ಬಾಬ್ತು 1900 ಕೋಟಿ ರೂ. ಲಾಭ ಪಡೆಯುತ್ತಿದ್ದರು. ದೇಶದ ಅರ್ಧ ಭಾಗದಷ್ಟು ರೈತರ ಸರಾಸರಿ ವಾರ್ಷಿಕ ಆದಾಯವು ಕೇವಲ 20 ಸಾವಿರ ರೂ ಎಂಬುದನ್ನು ಪರಿಗಣಿಸಿದಾಗ, ಇದೆಷ್ಟು ದೊಡ್ಡ ಮೊತ್ತದ ಹಣ ಮತ್ತು ರೈತರಿಗೆ ಅದರಿಂದ ಸಿಗುವ ಲಾಭವೆಷ್ಟು ಎಂಬುದನ್ನು ಊಹಿಸಿಕೊಳ್ಳಬಹುದು.

ರೈತರು ಬೆಳೆದ ಉತ್ಪನ್ನಗಳಿಗೆ ಹೆಚ್ಚಿನ ಬೆಲೆ ಕೊಡುತ್ತೇವೆ ಎಂದು ಕಾರ್ಪೊರೇಟ್‌ಗಳು ಹೇಳುತ್ತವೆ. ಆದರೆ, ಅದು ಯಾವ ಬೆಲೆಗಿಂತ ಎಷ್ಟು ಹೆಚ್ಚು? ಯಾರಿಗೂ ಗೊತ್ತಿಲ್ಲ. ಬೆಲೆಗಳ ಬಗ್ಗೆ ನಮ್ಮ ಬಳಿ ಇರುವ ಏಕೈಕ ಮಾನದಂಡವೆಂದರೆ ಎಂಎಸ್‌ಪಿ ಮಾತ್ರ. ಕಾರ್ಪೊರೇಟ್‌ಗಳು, ನೀತಿ-ನಿರೂಪಕರು ಮತ್ತು ಅರ್ಥಶಾಸ್ತ್ರಜ್ಞರು "ಹೆಚ್ಚಿನ ಬೆಲೆ" ಬಗ್ಗೆ ಒಮ್ಮತಾಭಿಪ್ರಾಯವನ್ನು ಹೊಂದಿದ್ದರೆ, ಎಂಎಸ್‌ಪಿಯನ್ನು ನಿಗದಿಪಡಿಸುವಲ್ಲಿ ಮತ್ತು ಅದನ್ನು ಒಂದು ಕಾನೂನು ಬದ್ಧ ಹಕ್ಕಾಗಿಸುವಲ್ಲಿರುವ ಸಮಸ್ಯೆ ಏನು? ಕೇಂದ್ರವು ಎಂಎಸ್‌ಪಿಯನ್ನು ಒಂದು ಕಾನೂನಾಗಿ ಮಾಡಿದರೆ, ಸುಧಾರಣೆಗಳು ಕುಸಿದು ಬೀಳುತ್ತವೆ ಎಂದೂ ಹೇಳುತ್ತವೆ ಇದೇ ಕಾರ್ಪೊರೇಟ್‌ಗಳು! ನಮ್ಮಲ್ಲಿ ಸುಮಾರು 7000 ಎ.ಪಿ.ಎಂ.ಸಿಗಳಿವೆ. ಎಂಎಸ್‌ಪಿ ವಿತರಣೆಯಲ್ಲಿರುವ ಕೆಲವು ಸಮಸ್ಯೆಗಳನ್ನು ನಿಭಾಯಿಸಲು ಐದು ಕಿಲೋಮೀಟರ್ ವ್ಯಾಪ್ತಿಯಲ್ಲಿ ಒಂದು ಮಂಡಿ ಇರಬೇಕಾಗುತ್ತದೆ. ಈ ಲೆಕ್ಕಾಚಾರದಂತೆ ನಮಗೆ 42,000 ಮಂಡಿಗಳು ಬೇಕಾಗುತ್ತವೆ. ಪ್ರತಿ ಆಹಾರ ಡಾಲರ್ ನಲ್ಲಿ ರೈತನ ಆದಾಯದ ಪಾಲು ಕೇವಲ 8 ಸೆಂಟ್ ಎಂದು ಅಮೇರಿಕಾದ ಕೃಷಿ ಇಲಾಖೆ ಹೇಳುತ್ತದೆ. ಅಂದರೆ, ಗ್ರಾಹಕರು ಆಹಾರ ಖರೀದಿಸುವ ಪ್ರತಿ ಡಾಲರ್ ಖರ್ಚಿನಲ್ಲಿ ರೈತನ ಆದಾಯದ ಪಾಲು ಕೇವಲ 8% ಮಾತ್ರ. ಈ ಅಂಶವು, ಅಮೆರಿಕದ ರೈತರು ಏಕೆ ಬಿಕ್ಕಟ್ಟಿನಲ್ಲಿದ್ದಾರೆ ಎಂಬುದನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಅಮೇರಿಕಾದ ಕೃಷಿಗೆ ಸಂಬಂಧಿಸಿದ ಈ ಅಂಶವನ್ನು ಭಾರತದ ಅಮುಲ್ ಸಹಕಾರಿ ಡೈರಿಯೊಂದಿಗೆ ಹೋಲಿಸಿ ನೋಡಿ. ನೀವು 100 ರೂ.ಗಳ ಮೌಲ್ಯದ ಅಮುಲ್ ಹಾಲು ಖರೀದಿಸಿದರೆ, ಅದರಲ್ಲಿ 70 ರೂ.ಗಳು ರೈತರಿಗೆ ಹೋಗುತ್ತದೆ ಎಂದು ಅಮುಲ್‌ನ ವ್ಯವಸ್ಥಾಪಕ ನಿರ್ದೇಶಕರು ಹೇಳಿರುವುದು ದಾಖಲೆಯಲ್ಲಿದೆ. ರೈತರ ಪಾಲು ಶೇ.70! ಅಂದರೆ, ಲಾಭದಲ್ಲಿ ಹೆಚ್ಚಿನ ಪಾಲನ್ನು ರೈತರು ಪಡೆಯುತ್ತಾರೆ.

ಅಮುಲ್‌ನಿಂದ ಕಲಿತ ಈ ಪಾಠದ ಮಾದರಿಯನ್ನು ತರಕಾರಿ, ಬೇಳೆಕಾಳುಗಳು, ಹಣ್ಣುಗಳು ಇತ್ಯಾದಿಗಳಿಗೆ ಅಳವಡಿಸಿಕೊಳ್ಳಲು ನಾವೇಕೆ ನಾಚಿಕೆಪಟ್ಟುಕೊಳ್ಳಬೇಕು? ಹಿತ್ತಲ ಗಿಡ ಮದ್ದಲ್ಲ ಎನ್ನುವ ರೀತಿಯಲ್ಲಿ, ಕೃಷಿಯನ್ನು ಕಾರ್ಪೊರೇಟ್‌ಗಳ ಶೋಷಣೆಗೆ ತೆರೆದಿಡುವ ಬದಲು, ದೇಶದಲ್ಲಿ ಸಹಕಾರ ಜಾಲವನ್ನು ವಿಸ್ತರಿಸಲಿ. ಕೊನೆಯದಾಗಿ ಹೇಳಬೇಕಾದ ಒಂದು ವಿಷಯವೆಂದರೆ, ನಮ್ಮ ಆರ್ಥಿಕ ನೀತಿಯು ಕೃಷಿಯನ್ನು ಸಮಾಜದ ಮೇಲೆ ಹೇರಿದ ಒಂದು ಹೊರೆಯಾಗಿ ನೋಡುತ್ತದೆ. ಕೃಷಿಯಿಂದ ಜನರನ್ನು ನಗರಗಳಿಗೆ ಸ್ಥಳಾಂತರಿಸದ ಹೊರತು ಆರ್ಥಿಕ ಪ್ರಗತಿ ಸಾಧ್ಯವಿಲ್ಲ ಎಂಬ ನೀತಿ ಬದಲಾಗಬೇಕು. ಕೇವಲ ಎರಡು ದಿನಗಳಲ್ಲಿ 80 ದಶಲಕ್ಷ ಜನರು ಅಂತರ ರಾಜ್ಯ ಮತ್ತು ಅಂತರ್-ರಾಜ್ಯಗಳೆರಡರಲ್ಲೂ ವಾಪಾಸು-ವಲಸೆ ಹೋದುದನ್ನು ನಾವು ಕಂಡೆವು. ಈ ವಿದ್ಯಮಾನವು ನಗರ ಪ್ರದೇಶದಿಂದ ಜನರನ್ನು ಹೊರದೂಡಿದ ಆರ್ಥಿಕ ಮಾದರಿಯು ದೋಷಪೂರಿತವಾಗಿದೆ ಎಂಬುದನ್ನು ನಮಗೆ ತಿಳಿಸುತ್ತದೆ. ಈ ಮಾದರಿಯನ್ನು ಬದಲಾಯಿಸುವ ಮತ್ತು ಕೃಷಿಯನ್ನು ಆರ್ಥಿಕ ಬೆಳವಣಿಗೆಯ ಒಂದು ಶಕ್ತಿ ಕೇಂದ್ರವನ್ನಾಗಿ ಮಾಡುವ ಸಾಧ್ಯತೆಯನ್ನು ಅನ್ವೇಷಿಸಬೇಕಾಗಿದೆ.

ಸ್ವದೇಶಿ ಚಳವಳಿ ಮತ್ತು ಕಾರ್ಮಿಕ ವರ್ಗದ ಮುಷ್ಕರಗಳು

ಪುಟ 11 ರಿಂದ

ಸ್ಥಿತಿಗತಿಗಳನ್ನು ಪರಿಶೀಲಿಸುವಂತೆ ಸರ್ಕಾರದ ಮೇಲೆ ಒತ್ತಾಯ ತಂದಿತು. 1907 ರ ಕೊನೆಯಲ್ಲಿ, ಫ್ಯಾಕ್ಟರಿ ಲೇಬರ್ ಆಯೋಗವನ್ನು ಮಾರಿಸನ್ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಯಿತು.

1907 ರಲ್ಲಿ ರೈಲ್ವೆ ಕೆಲಸಗಾರರ ವ್ಯಾಪಕ ಮುಷ್ಕರಗಳು

ಆರ್ಥಿಕ ಪರಿಸ್ಥಿತಿಗಳು ಸತತವಾಗಿ ಹದಗೆಡುತ್ತ ಹೋದದ್ದು ಮತ್ತು ಹೆಚ್ಚಿದ ಕೆಲಸದ ಹೊರೆಯ ಮೂಲಕ ಶೋಷಣೆಯ ತೀವ್ರತೆಯು 1907 ರಲ್ಲಿ ದೇಶದ ವಿವಿಧ ರೈಲ್ವೆಗಳ ರೈಲ್ವೆ ನೌಕರರನ್ನು ವ್ಯಾಪಕವಾದ ಕ್ರಮಕ್ಕೆ ಪ್ರೇರೇಪಿಸಿತು. ದೊಡ್ಡ ರೈಲ್ವೆ ಕಾರ್ಯಾಗಾರಗಳಲ್ಲಿನ ಕಾರ್ಮಿಕರು ಆಡಳಿತದ ದಮನಕಾರಿ ನೀತಿಗಳ ವಿರುದ್ಧ ತೀವ್ರ ಪ್ರತಿರೋಧವನ್ನು ವ್ಯಕ್ತಪಡಿಸಿದರು. ಬಾಂಬೆಯಲ್ಲಿನ ರೈಲ್ವೆ ಕಾರ್ಯಾಗಾರದ 3,000 ಕಾರ್ಮಿಕರು 1907 ರ ಮೇ 1 ರಂದು ಕೆಲಸ ಸ್ಥಗಿತ ಮಾಡಿದರು. ಮುಷ್ಕರವು ಒಂದು ವಾರದವರೆಗೆ ಮುಂದುವರೆಯಿತು ಮತ್ತು ಕೆಲವು ರಿಯಾಯಿತಿಗಳನ್ನು ಗೆದ್ದ ನಂತರವೇ ಕೆಲಸಗಾರರು ಕೆಲಸಕ್ಕೆ ಮರಳಿದರು.

ಪೂರ್ವ-ಭಾರತ ರೈಲ್ವೆಯ ಕೆಲಸಗಾರರು 1907 ರ ಅತಿದೊಡ್ಡ ಮುಷ್ಕರಗಳನ್ನು ಆಯೋಜಿಸಿದರು. ರೈಲ್ವೆ ಗಾರ್ಡ್‌ಗಳು ಮತ್ತು ಎಂಜಿನ್ ಚಾಲಕರು ನವೆಂಬರ್ 18 ರಂದು ಅನಿರ್ದಿಷ್ಟ ಮುಷ್ಕರವನ್ನು ಪ್ರಾರಂಭಿಸಿದರು. ಆದಾಗ್ಯೂ, ಹೆಚ್ಚಿನ ಮುಷ್ಕರಕಾರರು ಯುರೋಪಿಯನ್ ಮೂಲದವರು ಮತ್ತು ಆಂಗ್ಲೋ-ಇಂಡಿಯನ್ನರು. ಭಾಗವಹಿಸಿದ ಭಾರತದ ನೌಕರರು ಸಣ್ಣ ಪ್ರಮಾಣದಲ್ಲಿದ್ದರು. ಮುಷ್ಕರನಿರತ ನೌಕರರ ಬೇಡಿಕೆಗಳು ಸಹ ಸಂಪೂರ್ಣವಾಗಿ ಆರ್ಥಿಕವಾಗಿದ್ದವು. ಆದರೂ, ಈ ಮುಷ್ಕರವು ದೇಶವನ್ನು ಬಹಳವಾಗಿ ಕಲಕಿತು ಮತ್ತು ದುಡಿಯುವ ಜನಸಮುದಾಯದ ಸಂಘಟಿತ ಕಾರ್ಯಾಚರಣೆಯ ಶಕ್ತಿಯನ್ನು ಸೂಕ್ತವಾಗಿ ಪ್ರದರ್ಶಿಸಿತು.

ಅಸನ್ಸೋಲ್ ರೈಲ್ವೆ ನಿಲ್ದಾಣದಲ್ಲಿ ಪ್ರಾರಂಭವಾದ ಮುಷ್ಕರ ಶೀಘ್ರದಲ್ಲೇ ಅಲಹಾಬಾದ್‌ನಂತ ಉತ್ತರದ ತುಂಡುಲಾ ವರೆಗೆ ಹರಡಿತು. 43-ಅಂಶಗಳ ಬೇಡಿಕೆ-ಪತ್ರದೊಂದಿಗೆ ಈ ಕಾರ್ಯಾಚರಣೆಯು ಪ್ರಾರಂಭವಾಯಿತು.

ಮುಷ್ಕರ ಎಷ್ಟು ಯಶಸ್ವಿಯಾಯಿತು ಎಂದರೆ ವಾಸ್ತವಿಕವಾಗಿ ಯಾವುದೇ ರೈಲುಗಳು ಕಲ್ಕತ್ತಾಗೆ ತಲುಪಲು ಸಾಧ್ಯವಾಗಲಿಲ್ಲ. ಬೆಂಗಾಲ್-ನಾಗ್ಪುರ ರೈಲ್ವೆಯ ರೈಲಿನ ಮೂಲಕ ಬಿಪಿನ್ ಚಂದ್ರ ಪಾಲ್ ಮತ್ತು ಇತರ ಕೆಲವು ಕೈದಿಗಳನ್ನು ಅಸನ್ಸೋಲ್‌ನಿಂದ ಕಲ್ಕತ್ತಾಗೆ ಕರೆತರಲು ವ್ಯವಸ್ಥಾಪಕರು ಪ್ರಯತ್ನಿಸಿದರು, ಆದರೆ 200 ಮುಷ್ಕರಕಾರರು ಹಳಿಯ ಮೇಲೆ ನಿಂತು ಆ ಪ್ರಯತ್ನವನ್ನು ವಿಫಲಗೊಳಿಸಿದರು. ಹೌರಾ ನಿಲ್ದಾಣದ ರೈಲ್ವೆ ನೌಕರರು ಎಷ್ಟು ದೃಢವಾಗಿ ಮುಷ್ಕರವನ್ನು ಮುಂದುವರೆಸಲು ಮತ್ತು ಯಾವುದೇ ರೈಲು ನಿಲ್ದಾಣದಿಂದ ಹೊರಹೋಗಲು ಅವಕಾಶ ನೀಡುವುದಿಲ್ಲ ಎಂದು ನಿರ್ಧರಿಸಿದರೆಂದರೆ, ನೂರಾರು ಪ್ರಯಾಣಿಕರು ಸಿಕ್ಕಿಹಾಕಿಕೊಂಡರು ಮತ್ತು 300 ವ್ಯಾಗನ್ ಸರಕು ರೈಲುಗಳು ಸಂಪೂರ್ಣವಾಗಿ ಸ್ಥಗಿತವಾದವು. ನವೆಂಬರ್ 20 ರ ಹೊತ್ತಿಗೆ ಅಲಹಾಬಾದ್ ಮತ್ತು ಕಾನ್ಪುರ್ ಸಂಪೂರ್ಣವಾಗಿ ಸ್ಥಗಿತವಾದವು., ಮತ್ತು ಎಲ್ಲಾ ರೈಲುಗಳು ಹೌರಾ-ಕಲ್ಕಾ ಮಾರ್ಗದಲ್ಲಿ ಓಡುವುದನ್ನು ನಿಲ್ಲಿಸಿದವು. ಈ ಅಸ್ತವ್ಯಸ್ತತೆಯು ಕಲ್ಕತ್ತಾ ಗಿರಣಿಗಳಲ್ಲಿ ಮತ್ತು ಕಲ್ಕತ್ತಾ ಬಂದರಿನಲ್ಲಿ ಹೊರಹೋಗುವ ಹಡಗುಗಳನ್ನು ನಡೆಸಲು ತೀವ್ರ ಕಲ್ಲಿದ್ದಲು ಕೊರತೆಗೆ ಕಾರಣವಾಯಿತು. ನವೆಂಬರ್ 24 ರ ಹೊತ್ತಿಗೆ ಕಲ್ಕತ್ತಾ ಬಂದರು ಪ್ರದೇಶದಲ್ಲಿ ಸುಮಾರು 1,000 ಖಾಲಿ ವ್ಯಾಗನ್‌ಗಳು ಮತ್ತು 400 ಲೋಡ್ ವ್ಯಾಗನ್‌ಗಳು ಸಿಲುಕಿಕೊಂಡವು. ಹೆಚ್ಚುತ್ತಿದ್ದ ಮುಷ್ಕರದ ಅಲೆಗಳು ಬುರ್ದ್ವಾನ್, ಅಸನ್ಸೋಲ್, ಮೊಘಲ್ಸರಾಯ್, ಅಲಹಾಬಾದ್, ತುಂಡುಲಾ, ಕಾನ್ಪುರ್, ಅಂಬಾಲಾ ಮತ್ತು ಇತರ ಹಲವಾರು ನಿಲ್ದಾಣಗಳನ್ನು ಅಪ್ಪಳಿಸಿದವು. ಈ ಮಾರ್ಗಗಳಲ್ಲಿನ ರೈಲು ಸಂವಹನವು ಸಂಪೂರ್ಣವಾಗಿ ಮುರಿದು ಬಿದ್ದಿತು.

ರೈಲ್ವೆ ಅಧಿಕಾರಿಗಳು ಮತ್ತು ಸರ್ಕಾರವು ದಮನಕಾರಿ ಕ್ರಮಗಳಿಗೆ ಇಳಿದರು. ರೈಲ್ವೆ ನಿಲ್ದಾಣಗಳಲ್ಲಿ ಸೈನಿಕರು ಮತ್ತು ಸಶಸ್ತ್ರ ಪೊಲೀಸರನ್ನು ನಿಯೋಜಿಸಲಾಯಿತು. ಹೌರಾ ನಿಲ್ದಾಣವನ್ನು ಸೈನ್ಯದ ನಿಯಂತ್ರಣದಲ್ಲಿಡಲಾಯಿತು ಮತ್ತು ಸಶಸ್ತ್ರ ಪಡೆಗಳ ದೊಡ್ಡ ತುಕಡಿಯನ್ನು ಅಸನ್ಸೋಲ್‌ಗೆ ರವಾನಿಸಲಾಯಿತು.

ಆದರೆ ಬಲಪ್ರದರ್ಶನದ ಮೂಲಕ ಕಾರ್ಮಿಕರನ್ನು ಹೆದರಿಸುವ ಅಧಿಕಾರಿಗಳ ಈ ಪ್ರಯತ್ನವು ವ್ಯತಿರಿಕ್ತ ಫಲಿತಾಂಶವನ್ನು ನೀಡಿತು. ಮುಷ್ಕರ ಬಂಗಾಳ-ನಾಗ್ಪುರ ರೈಲ್ವೆಗೂ ಹರಡಿತು. ಈ ರೈಲ್ವೆಯ ಎಂಜಿನ್-ಡ್ರೈವರ್‌ಗಳನ್ನು ಬೇರೆ ಮಾರ್ಗಗಳಲ್ಲಿ ಬಳಸುವ ಅಧಿಕಾರಿಗಳ ಪ್ರಯತ್ನವು ಅವರನ್ನು ತೀವ್ರವಾಗಿ ಕೆರಳಿಸಿತು. ಕಾವಲುಗಾರರೂ ಮುಷ್ಕರಕ್ಕೆ ಸೇರಿದರು, ಆದರೆ ಈ ಮುಷ್ಕರವು 24 ಗಂಟೆಗಳಿಗಿಂತ ಹೆಚ್ಚು ಕಾಲ ನಡೆಯಲಿಲ್ಲ. ರೈಲ್ವೆ ಅಧಿಕಾರಿಗಳು ಮತ್ತು ನೌಕರರ ಪ್ರತಿನಿಧಿಗಳನ್ನು ಒಳಗೊಂಡ ಶಾಂತಿ ಸಮಿತಿಯನ್ನು ರಚಿಸಲಾಯಿತು, ಈ ಸಮಿತಿಯು ಮುಷ್ಕರಕಾರರ ಬೇಡಿಕೆಗಳನ್ನು ಇತ್ಯರ್ಥಪಡಿಸುವ ಭರವಸೆ ನೀಡಿತು. ಮುಷ್ಕರವನ್ನು ನವೆಂಬರ್ 28, 1907 ರಂದು ಹಿಂಪಡೆಯಲಾಯಿತು.

1907 ರ ನವೆಂಬರ್ 18 ರಿಂದ ನವೆಂಬರ್ 28 ರವರೆಗೆ ಈಸ್ಟ್ ಇಂಡಿಯಾ ರೈಲ್ವೆಯಲ್ಲಿ ನಡೆದ ಹತ್ತು ದಿನಗಳ ಸುದೀರ್ಘ ಮುಷ್ಕರವು ವೈಸ್ರಾಯ್‌ರ ಪ್ರಧಾನ ಕಚೇರಿಯಾದ ಕಲ್ಕತ್ತಾ ನಗರವನ್ನು ಭಾರತದ ಉಳಿದ ಭಾಗಗಳಿಂದ ಸಂಪೂರ್ಣವಾಗಿ ಕಡಿತಗೊಳಿಸಿತು.

1907 ರ ಡಿಸೆಂಬರ್ 21 ರಂದು ಪೂರ್ವ ಬಂಗಾಳ ರೈಲ್ವೆಯಲ್ಲಿ ಮತ್ತೆ ಮುಷ್ಕರ ಪ್ರಾರಂಭವಾಯಿತು. ಈ ಬಾರಿ ಎಂಜಿನ್ ಚಾಲಕರು, ಅಗ್ನಿಶಾಮಕ ಸಿಬ್ಬಂದಿ ಮತ್ತು ಬ್ರೇಕ್‌ಮೆನ್ ಹೆಚ್ಚಿನ ವೇತನವನ್ನು ಕೋರಿ ಮುಷ್ಕರ ಮಾಡಿದರು. ಸೈನ್ಯವನ್ನು ಕರೆಸಲಾಯಿತು ಮತ್ತು ಬ್ರಿಟಿಷ್ ಸೈನಿಕರನ್ನು ರೈಲುಗಳನ್ನು ಓಡಿಸಲು ತೊಡಗಿಸಲಾಯಿತು. ಮುಷ್ಕರನಿರತ ರೈಲ್ವೆ ನೌಕರರ ಮೇಲೆ ಏಕಕಾಲದಲ್ಲಿ ಭಾರಿ ದಬ್ಬಾಳಿಕೆಯನ್ನು ನಡೆಸಲಾಯಿತು. ಅವರಲ್ಲಿ 600 ಜನರನ್ನು ಸೇವೆಯಿಂದ ವಜಾಗೊಳಿಸಲಾಯಿತು ಮತ್ತು ಇನ್ನೂ ಅನೇಕರನ್ನು ವಿವಿಧ ವಿಧಾನಗಳಲ್ಲಿ ನಿರ್ದಾಕ್ಷಿಣ್ಯವಾಗಿ ಶಿಕ್ಷಿಸಲಾಯಿತು. 1908 ರ ಜನವರಿ ಮೊದಲ ವಾರದಲ್ಲಿ, ಮುಷ್ಕರ ಕೊನೆಗೊಂಡಿತು.

1908 ರ ಜನವರಿಯಲ್ಲಿ, ಬಾಂಬೆಯಲ್ಲಿನ ರೈಲ್ವೆ ಕಾರ್ಯಾಗಾರದ 8000 ಕಾರ್ಮಿಕರು ಮತ್ತೆ ಹೆಚ್ಚುತ್ತಿದ್ದ ಜೀವನ ವೆಚ್ಚಕ್ಕೆ ಪರಿಹಾರ ನೀಡುವಂತೆ ಒತ್ತಾಯಿಸಿ ಮುಷ್ಕರ ಹೂಡಿದರು.. ಕುಂದುಕೊರತೆಗಳ ಭಾಗಶಃ ಇತ್ಯರ್ಥದ ನಂತರ ಕೆಲಸಗಾರರು ಮತ್ತೆ ಕರ್ತವ್ಯವನ್ನು ಪ್ರಾರಂಭಿಸಿದರು.

ವಿವಿಧ ರೈಲ್ವೆಗಳಲ್ಲಿ ರೈಲ್ವೆ ನೌಕರರ ಈ ವ್ಯಾಪಕ ಮುಷ್ಕರ ಕಾರ್ಯಾಚರಣೆಯನ್ನು 1905-08ರ ದೇಶವ್ಯಾಪಿ ಸಾಮ್ರಾಜ್ಯಶಾಹಿ-ವಿರೋಧಿ ಜಾಗೃತಿಯ ಸರಪಳಿಯಲ್ಲಿ ಒಂದು ಕೊಂಡಿಯಾಗಿ ಪರಿಗಣಿಸುವುದು ಸೂಕ್ತ. ■

‘ತುರ್ತು’ ಪರಿಸ್ಥಿತಿಯಲ್ಲಿ ಬಿಡೆನ್–ಕಮಲಾ ಪದಗ್ರಹಣ



ಟ್ರಂಪ್ ಬೆಂಬಲಿಗ ಉಗ್ರ ಬಲಪಂಥೀಯ ಗುಂಪುಗಳು ಜನವರಿ 20ರ ಪದಗ್ರಹಣ ಸಮಾರಂಭದಲ್ಲೂ ಸಹ ಸಶಸ್ತ್ರ ದಾಳಿ ಮತ್ತು ದಂಗೆಗೆ ಪ್ರಯತ್ನ ನಡೆಸಲು ಯೋಜಿಸಿದ್ದಾರೆ ಎಂಬ ಬೇಹುಗಾರಿಕೆ ವರದಿ ಆಧಾರದ ಮೇಲೆ 25 ಸಾವಿರ "‘ನೇಶನಲ್ ಗಾರ್ಡ್ಸ್" ಸೈನಿಕರನ್ನು ಸಜ್ಜುಗೊಳಿಸಲಾಗಿತ್ತು. ಇದು ಇರಾಕ್, ಅಫ್ಘಾನಿಸ್ತಾನ ಮತ್ತು ಸಿರಿಯಾ ಗಳಲ್ಲಿ ಸಜ್ಜುಗೊಳಿಸಲಾದ ಒಟ್ಟು ಅಮೆರಿಕನ್ ಸೈನಿಕರಿಗಿಂತ ಹೆಚ್ಚು! ಅವರನ್ನು ಸಜ್ಜುಗೊಳಿಸುವ ಮೊದಲು ಅವರ ಹಿನ್ನೆಲೆಯನ್ನು ಮೂರು ಬಾರಿ ಪರಿಶೀಲಿಸಲಾಗಿತ್ತಂತೆ. ಅಧಿಕಾರ ವಹಿಸಿಕೊಂಡ ಮೊದಲ ದಿನವೇ ಬಿಡೆನ್ ಆಂತರಿಕವಾಗಿಯೂ ಅಂತರ್ರಾಷ್ಟ್ರೀಯವಾಗಿಯೂ ಟ್ರಂಪ್ ತೆಗೆದುಕೊಂಡ 17 ‘ವಿನಾಶಕಾರಿ’ ನಿರ್ಣಯಗಳನ್ನು ಹಿಂತೆಗೆದುಕೊಳ್ಳುವ ಮತ್ತು ತಪ್ಪು ಧೋರಣೆಗಳನ್ನು ಬದಲಿಸುವ ಆದೇಶಗಳಿಗೆ ಸಹಿ ಹಾಕಿದ್ದಾರೆ ಎಂದು ವರದಿಯಾಗಿದೆ.

ಜನವರಿ 20 ರಂದು ಮಧ್ಯಾಹ್ನ 12 (ವಾಶಿಂಗ್ಟನ್ ಸಮಯ ಮತ್ತು ಭಾರತದ 10.30 ರಾತ್ರಿ) ಗಂಟೆಗೆ ಜೋ ಬಿಡೆನ್ ಮತ್ತು ಕಮಲಾ ಹ್ಯಾರೀಸ್ ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ ಪದಗ್ರಹಣ ಸಾಂಗವಾಗಿ ನೆರವೇರಿದೆ. ವಾಶಿಂಗ್ಟನ್ ನಲ್ಲಿ ತುರ್ತು ಪರಿಸ್ಥಿತಿ ಹೇರಲಾಗಿದ್ದು ಈ ಪದಗ್ರಹಣ ಗಂಭೀರವಾದ ವಿಶಿಷ್ಟ ಪರಿಸ್ಥಿತಿಯಲ್ಲಿ ನಡೆಯಿತು. ‘ನ ಭೂತೋ ನ ಭವಿಷ್ಯತಿ’ ಎನ್ನಬಹುದಾದ ಹಲವು ‘ಪ್ರಥಮ’ಗಳನ್ನು ಹೊಂದಿರುವ ಮತ್ತು ಹಲವು ಕಾರಣಗಳಿಗೆ ಇದು ಚಾರಿತ್ರಿಕ ಪದಗ್ರಹಣವಾಗಿತ್ತು.

ಜನವರಿ 6 ರಂದು ಟ್ರಂಪ್ ಬೆಂಬಲಿಗರ ಸಶಸ್ತ್ರ ದಾಳಿ ಮತ್ತು ದಂಗೆಯನ್ನು ಕಂಡ ಕ್ಯಾಪಿಟೋಲ್ (ಯು.ಎಸ್ ಪಾರ್ಲಿಮೆಂಟ್ ಭವನ) ಮುಂದೆ ನಡೆಯುವ ಬಹಿರಂಗ ಸಭೆಗೆ ಆ ಕಾರಣಕ್ಕಾಗಿ ಅಭೂತಪೂರ್ವ ಎಚ್ಚರಿಕೆ ವಹಿಸಲಾಗಿತ್ತು. ಟ್ರಂಪ್ ಬೆಂಬಲಿಗ ಉಗ್ರ ಬಲಪಂಥೀಯ ಗುಂಪುಗಳು ಸಶಸ್ತ್ರ ದಾಳಿ ಮತ್ತು ದಂಗೆಗೆ ಪ್ರಯತ್ನ ನಡೆಸಲು ಯೋಜಿಸಿದ್ದಾರೆ ಎಂಬ ಬೇಹುಗಾರಿಕೆ ವರದಿ ಆಧಾರದ ಮೇಲೆ 25 ಸಾವಿರ "‘ನೇಶನಲ್ ಗಾರ್ಡ್ಸ್" ಸೈನಿಕರನ್ನು ಸಜ್ಜುಗೊಳಿಸಲಾಗಿತ್ತು. ಇದು ಇರಾಕ್, ಅಫ್ಘಾನಿಸ್ತಾನ ಮತ್ತು ಸಿರಿಯಾ ಗಳಲ್ಲಿ ಸಜ್ಜುಗೊಳಿಸಲಾದ ಒಟ್ಟು ಅಮೆರಿಕನ್ ಸೈನಿಕರಿಗಿಂತ ಹೆಚ್ಚು ! ಅವರನ್ನು ಸಜ್ಜುಗೊಳಿಸುವ ಮೊದಲು ಅವರ ಹಿನ್ನೆಲೆಯನ್ನು ಮೂರು ಬಾರಿ ಪರಿಶೀಲಿಸಲಾಗಿತ್ತಂತೆ. ಯಾಕೆಂದರೆ ಜನವರಿ 6ರ ದಂಗೆಯಲ್ಲಿ ಹಾಲಿ ಮತ್ತು ಮಾಜಿ ಭದ್ರತಾ ಮತ್ತು ಪೋಲಿಸ್ ಪಡೆಯ ಹಲವರು ಭಾಗವಹಿಸಿದ್ದಾರೆ ಮತ್ತು ಕ್ಯಾಪಿಟೋಲ್ ಪೋಲಿಸ್ ಪಡೆಯ ಹಲವರು ದಂಗೆಕೋರರ ಜೊತೆ ಶಾಮೀಲಾಗಿದ್ದರು ಎಂಬ ಮಾಹಿತಿ ಜನವರಿ 6ರ ದಂಗೆಯ ಕುರಿತು ನಡೆಯುತ್ತಿರುವ ತನಿಖೆಗಳಿಂದ ಬಯಲಾಗಿದೆಯಂತೆ. ವಾಶಿಂಗ್ಟನ್ನಿನ ಕ್ಯಾಪಿಟೋಲ್ ಪ್ರದೇಶ ಇರಾಕಿನ ರಾಜಧಾನಿ ಬಾಗ್ದಾದ್ ನ ಅತಿ ಭದ್ರತಾ ಕ್ಷೇತ್ರವಾದ ‘ಗ್ರೀನ್ ಝೋನ್’ ನಂತೆ ಕಾಣಿಸುತ್ತಿತ್ತು ಎಂದು ವರದಿಗಾರರು ಹೇಳಿದ್ದಾರೆ. ದೇಶದಾದ್ಯಂತ ಪ್ರಾಂತೀಯ ರಾಜಧಾನಿಗಳಲ್ಲಿರುವ ಪ್ರಾಂತೀಯ ಕ್ಯಾಪಿಟೋಲ್ ಭವನಗಳ ಮತ್ತು ಆಯಕಟ್ಟಿನ ಪ್ರದೇಶಗಳಲ್ಲಿ ಇಧೇ ರೀತಿ "‘ನೇಶನಲ್ ಗಾರ್ಡ್ಸ್" ಸೈನಿಕರನ್ನು ಸಜ್ಜುಗೊಳಿಸಲಾಗಿತ್ತು. ಅಧ್ಯಕ್ಷೀಯ ಪದಗ್ರಹಣಕ್ಕೆ ಈ ಪ್ರಮಾಣದ ಪಡೆಗಳ ಸಜ್ಜುಗೊಳಿಸುವಿಕೆ ಇದೇ ಮೊದಲು ಎನ್ನಲಾಗಿದೆ.

ಜನವರಿ 6ರ ದಂಗೆಯ ಮತ್ತು ಎಂದೂ ಕಂಡರಿಯದ ದೇಶವ್ಯಾಪಿ ಕೊವಿದ್–19 ಸಾವು–ನೋವುಗಳ ಕರಾಳ ನೆರಳು ಅಧ್ಯಕ್ಷೀಯ ಪದಗ್ರಹಣ ಸಮಾರಂಭದ ಮೇಲಾಗಿತ್ತು. ಸಮಾರಂಭದಲ್ಲಿ ಭಾಗವಹಿಸುವವರ ಸಂಖ್ಯೆಯನ್ನು ದೈಹಿಕ ಅಂತರ ಕಾಪಾಡಲು ಮತ್ತು ಭದ್ರತಾ ದೃಷ್ಟಿಯಿಂದ ಸೀಮಿತಗೊಳಿಸಲಾಗಿತ್ತು. ಅಧ್ಯಕ್ಷೀಯ ಪದಗ್ರಹಣಕ್ಕೆ ಸಂಬಂಧಿಸಿದ ಹಲವು ‘ಪ್ರಥಮ’ಗಳಲ್ಲಿ ಪ್ರಮುಖವಾದ್ದು ಹೊರಹೋಗುತ್ತಿರುವ ಅಧ್ಯಕ್ಷ ಟ್ರಂಪ್ ಸಮಾರಂಭದಲ್ಲಿ ಭಾಗವಹಿಸುವುದಿಲ್ಲ ಎಂಧು ಘೋಷಿಸಿದ್ದು. ಆ ಮೂಲಕ ಟ್ರಂಪ್ ಹೊರಹೋಗುತ್ತಿರುವ ಅಧ್ಯಕ್ಷರು ಹೊಸ ಅಧ್ಯಕ್ಷರ ಪದಗ್ರಹಣ ಸಮಾರಂಭದಲ್ಲಿ ಭಾಗವಹಿಸಿ ಹರಸುವ 150 ವರ್ಷಗಳಿಂದ ನಡೆದುಕೊಂಡು ಬಂದಿದ್ದ ಸಂಪ್ರದಾಯವನ್ನು ಮುರಿದಿದ್ದಾರೆ. ಆದರೆ ಉಪಾಧ್ಯಕ್ಷ ಪೆನ್ಸ್ ಹಾಗೂ ಬದುಕಿರುವ ಎಲ್ಲ ಮಾಜಿ ಅಧ್ಯಕ್ಷರುಗಳು ಭಾಗವಹಿಸಿದ್ದರು.

ಅಧ್ಯಕ್ಷ ಟ್ರಂಪ್ ಎರಡು ಬಾರಿ ಮಹಾಭಿಯೋಗಕ್ಕೆ (ಇಂಪೀಚ್ ಮೆಂಟ್) ಒಳಗಾಗುತ್ತಿರುವ ಮೊದಲ ಅಧ್ಯಕ್ಷರಾದ ‘ವಿಕ್ರಮ’ ಸಾಧಿಸಿದ್ದಾರೆ! ಜನವರಿ 6ರ ದಂಗೆಗೆ ನೇರವಾಗಿ ಪ್ರಚೋದಿಸಿದ್ದಾರೆ ಎಂದು ಆಪಾದಿಸುವ ಮಹಾಭಿಯೋಗಕ್ಕೆ ಯು.ಎಸ್. ಕೆಳಸದನ (ಜನ ಪ್ರತಿನಿಧಿ ಸಭೆ) ಅನುಮೋದನೆ ನೀಡಿದ್ದು, ಮೇಲ್ಸದನವಾದ ಸೆನೆಟ್ ನಲ್ಲಿ ಅದಕ್ಕೆ ಮೂರನೇ ಎರಡು ಬಹುಮತ ಬಂದರೆ (ಆ ಸಾಧ್ಯತೆ ಇದೆ ಎನ್ನಲಾಗಿದೆ) ಮುಂದೆ ಅಧ್ಯಕ್ಷ ಅಥವಾ ಯಾವುದೇ ಚುನಾಯಿತ ರಾಜಕೀಯ ಹುದ್ದೆಗೆ ಆಯ್ಕೆಯಾಗುವ ಹಕ್ಕನ್ನು ಟ್ರಂಪ್ ಕಳೆದುಕೊಳ್ಳುತ್ತಾರೆ. ಹೊರಹೋಗುವ ಅಧ್ಯಕ್ಷರು ಹೊಸ ಅಧ್ಯಕ್ಷರನ್ನು ಅಧಿಕಾರ ಹಸ್ತಾಂತರದ ಮೊದಲು ಪತ್ನಿ(ಅಥವಾ ಪತಿ) ಸಮೇತ ಆಹ್ವಾನಿಸುವ ಸಾಂಪ್ರದಾಯಿಕ ಶಿಷ್ಟಾಚಾರವನ್ನು ಸಹ ಮುರಿದಿದ್ದಾರೆ. ಅಧಿಕಾರದ ಹಸ್ತಾಂತರದ ನಂತರ ಶ್ವೇತಭವನಕ್ಕೆ ಹೊಸ ಅಧ್ಯಕ್ಷರಿರ ಕುಟುಂಬವನ್ನು ಔಪಚಾರಿಕವಾಗಿ ಸ್ವಾಗತಿಸುವ ಸಾಂಪ್ರದಾಯಿಕ ಶಿಷ್ಟಾಚಾರವನ್ನು ಸಹ ಪಾಲಿಸಲಿಲ್ಲ. ಅದೇ ದಿನ ಟ್ರಂಪ್ ಮತ್ತು ಕುಟುಂಬದೊಂದಿಗೆ ಶ್ವೇತಭವನ ಖಾಲಿ ಮಾಡಿದ್ದರು. ಅಧಿಕಾರ ಹಸ್ತಾಂತರದ ಪ್ರಕ್ರಿಯೆಯ ಭಾಗವಾಗಿ ಸಹ ಅವರು ಚುನಾಯಿತ ಅಧ್ಯಕ್ಷ ಬಿಡೆನ್ ಅವರನ್ನು ಭೇಟಿಯಾಗಲಿಲ್ಲ. ಬಿಡೆನ್ ಚುನಾಯಿತ ಅಧ್ಯಕ್ಷ ಎಂದು ಖಾಸಗಿಯಾಗಿ ಅಥವಾ ಸಾರ್ವಜನಿಕವಾಗಿ ಅವರನ್ನು ಟ್ರಂಪ್ ಅಭಿನಂದಿಸಿಯೂ ಇಲ್ಲ. ಪರೋಕ್ಷವಾಗಿಯಷ್ಟೇ ಬಿಡೆನ್ ಚುನಾಯಿತ ಅಧ್ಯಕ್ಷ ಎಂದು ಒಪ್ಪಿಕೊಂಡಿದ್ದಾರೆ. ಯು.ಎಸ್ ಚುನಾಯಿತ ಸದನಗಳ ಜಂಟಿ ಸಭೆಯಲ್ಲಿ ಚುನಾವಣಾ ಫಲಿತಾಂಶವನ್ನು ಔಪಚಾರಿಕವಾಗಿ ಅನುಮೋದಿಸುವ ಕೊನೆಯ ಹಂತದ ವರೆಗೆ ಅಧ್ಯಕ್ಷರ ಚುನಾವಣಾ ಪ್ರಕ್ರಿಯೆಯ ಎಲ್ಲ ಹಂತಗಳಲ್ಲಿ ಕಾನೂನು–ಸಂವಿಧಾನ ಬದ್ಧವಾದ ಮತ್ತು ಕಾನೂನು–ಸಂವಿಧಾನ ಬಾಹಿರವಾದ ಎಲ್ಲ ಸಾಧ್ಯ ಕ್ರಮಗಳನ್ನು ಒಬ್ಬ ಅಧ್ಯಕ್ಷರು ಕೈಗೊಂಡಿರುವುದು ಸಹ ಇದೇ ಮೊದಲು.



ಬಿಡೆನ್ ಆಂತರಿಕವಾಗಿಯೂ ಅಂತರ್ರಾಷ್ಟ್ರೀಯವಾಗಿಯೂ ಗಂಭೀರ ಪರಿಸ್ಥಿತಿಯಲ್ಲಿ ಅಧಿಕಾರ ವಹಿಸಿಕೊಂಡಿದ್ದಾರೆ. ಜನವರಿ 6ರ ದಂಗೆ ಮೂಲಕ "ಬಲಾತ್ಕಾರದ ಆಡಳಿತ ಬದಲಾವಣೆ"ಯ ಪ್ರಯತ್ನ ದೇಶ ಎಷ್ಟು ಒಡೆದ ಮನೆಯಾಗಿದೆ ಎಂದು ಮುಖಕ್ಕೆ ರಾಚುವಂತೆ ಜಗತ್ತಿಗೆ ತಿಳಿಸಿದೆ. ಅಮೆರಿಕದ ‘ಅತ್ಯಂತ ಹಳೆಯ ಪ್ರಜಾಪ್ರಭುತ್ವ ವ್ಯವಸ್ಥೆ’ ಎಂಬ ಹೆಗ್ಗಳಿಕೆ ಆಂತರಿಕವಾಗಿಯೂ ಅಂತರ್ರಾಷ್ಟ್ರೀಯವಾಗಿಯೂ ಮಣ್ಣುಪಾಲಾಗಿದೆ.’ ಇದು ಯಾವತ್ತೂ ನಿಜವಾಗಿರಲಿಲ್ಲ ಎಂಬುದು ಬೇರೆಯ ಮಾತು. ಆದರೆ ಈಗ ಅದು ಇನ್ನೊಂದು ಮೂರನೆಯ ಜಗತ್ತಿನ ‘ಬನಾನಾ ರಿಪಬ್ಲಿಕ್’ ನಂತೆ ಅಷ್ಟೇ ಎಂಬುದು ಜಗಜ್ಜಾಹೀರಾಗಿದೆ. ಜಗತ್ತಿಗೆ ‘ಪ್ರಜಾಪ್ರಭುತ್ವ’ ಮತ್ತು ‘ಮಾನವ ಹಕ್ಕು’ಗಳ ಪಾಠ ಹೇಳುತ್ತಾ, ತನ್ನ ಮೂಗಿಗೆ ನೇರಕ್ಕಿರದ ಸರಕಾರಗಳ (ಯುಗೊಸ್ಲಾವಿಯ, ಇರಾಕ್, ಲಿಬಿಯಾ, ಬೊಲಿವಿಯ ಇತ್ಯಾದಿ) "ಬಲಾತ್ಕಾರದ ಆಡಳಿತ ಬದಲಾವಣೆ"ಯನ್ನು ಮಾಡುತ್ತಿದ್ದುದರ ಕಟು ಔಷಧಿಯ ರುಚಿ ಅದಕ್ಕೆ ಗೊತ್ತಾಗುತ್ತಿದೆ ಎಂದು ಮೂರನೆಯ ಜಗತ್ತಿನಲ್ಲಿ ಯು.ಎಸ್ ಈಗ ಮೂದಲಿಕೆಗೆ ತುತ್ತಾಗಿದೆ.

ಅಮೆರಿಕದ "ಜಾಗತಿಕ ಅಧಿನಾಯಕತ್ವ’ ಸಹ ಧೂಳಿಪಟವಾಗಿದೆ. ಅದರ ಪ್ರತೀಕಗಳಾಗಿದ್ದ ನಾಟೋ ಮುಂತಾದ ಸಂಸ್ಥೆಗಳು ದುರ್ಬಲವಾಗಿವೆ. ನಿಕಟ ಸಹವರ್ತಿಗಳಾಗಿದ್ದ ಕೆನಡಾ, ಯುರೋ ಕೂಟ, ಆಸಿಯನ್ ಗಳು ದೂರ ಸರಿದಿವೆ. ಇವೆಲ್ಲವನ್ನು ಸರಿ ಪಡಿಸಿ ಟ್ರಂಪ್ ಮಾಡಿದ ವಿನಾಶ ಕೃತ್ಯಗಳನ್ನು ಸರಿಪಡಿಸಬೇಕಾದ ಸವಾಲು ಬಿಡೆನ್ ಮುಂದಿದೆ. ಟ್ರಂಪ್ ನಿರ್ಲಕ್ಷದಿಂದ ವಿಕೋಕ್ಕೆ ಹೋಗಿರುವ ಕೊವಿಡ್ ಪರಿಹಾರಕ್ಕೆ ಸಹ ತುರ್ತು ಕ್ರಮ ಕೈಗೊಳ್ಳಬೇಕಾಗಿದೆ.

ಈ ನಡುವೆ ಅಧ್ಯಕ್ಷ ಟ್ರಂಪ್ ತಮ್ಮ ಬೆಂಬಲಿಗರು ಮತ್ತು ಬೇಕಾಬಿಟ್ಟಿಯಾಗಿ ದೇಶೀಯ ಮತ್ತು ಅಂತರ್ರಾಷ್ಟ್ರೀಯವಾಗಿ ಹೀನ ಅಪರಾಧಗಳನ್ನು ಎಸಗಿದವರಿಗೆ ಕ್ಷಮಾದಾನ ಕೊಡುವುದರಲ್ಲಿ ‘ಬ್ಯುಸಿ’ಯಾಗಿದ್ದರು. ಕೊನೆಯ ದಿನ ಜನವರಿ 6 ದಂಗೆಯಲ್ಲಿ ಭಾಗವಹಿಸಿದ ಬೆಂಬಲಿಗ ಸೆನೆಟರುಗಳು, ಪ್ರತಿನಿಧಿಗಳು, ಭ್ರಷ್ಟಾಚಾರ ಮತ್ತಿತರ ಅಪರಾಧಗಳ ಆಪಾದನೆ ಎದುರಿಸುತ್ತಿರುವ ತನ್ನ ಕುಟುಂಬದ ಸದಸ್ಯರು ಮತ್ತು ಕಂಪನಿಯ ಅಧಿಕಾರಿಗಳಿಗೆ ಕ್ಷಮದಾನ ಕೊಡಬೇಕೆ ಬೇಡವೇ ಎಂಬ ಜಿಜ್ಞಾಸೆಯಲಿದ್ದರು. ಅದನ್ನು ಮಾಡಿದ್ದರೂ ಇನ್ನೂ 70 ವಿವಾದಿತ ವ್ಯಕ್ತಿಗಳಿಗೆ ಟ್ರಂಪ್ ಕ್ಷಮಾದಾನವನ್ನು ನೀಡಿದ್ದಾರೆ. ಕೊನೆಯ ಒಂದು ವಾರದಲ್ಲಿ ಸಾರ್ವಜನಿಕವಾಗಿ ಕಾಣಿಸಿಕೊಳ್ಳದಿರುವುದು ಮತ್ತು ಹೇಳಿಕೆಯನ್ನೂ ನೀಡದಿರುವುದು ಸಹ ಎರಡನೆಯ ಮಹಾಭಿಯೋಗದ ಭಯದಿಂದಾಗಿಯಷ್ಟೇ ಎಂದು ಹೇಳಲಾಗಿದೆ. ಕೊನೆಯ ದಿನದ ಭಾಷಣದಲ್ಲಿ ಟ್ರಂಪ್ ತನ್ನ ನಾಲ್ಕು ವರ್ಷದ ಸಾಧನೆಗಳನ್ನು ಕೊಚ್ಚಿಕೊಂಡು ಶೀಘ್ರದಲ್ಲೆ ಯಾವುದೋ ರೂಪದಲ್ಲಿ ಮತ್ತೆ ಬರುವುದಾಗಿ ಬೆದರಿಕೆ ಹಾಕಿದ್ದಾರೆ!

ಜಗದ ಸುತ್ತ

ವಸಂತರಾಜ ಎನ್.ಕೆ.

ಅಧಿಕಾರ ವಹಿಸಿಕೊಂಡ ಮೊದಲ ದಿನವೇ ಬಿಡೆನ್ ಆಂತರಿಕವಾಗಿಯೂ ಅಂತರ್ರಾಷ್ಟ್ರೀಯವಾಗಿಯೂ ಟ್ರಂಪ್ ತೆಗೆದುಕೊಂಡ 17 ‘ವಿನಾಶಕಾರಿ’ ನಿರ್ಣಯಗಳನ್ನು ಹಿಂತೆಗೆದುಕೊಳ್ಳುವ ಮತ್ತು ತಪ್ಪು ಧೋರಣೆಗಳನ್ನು ಬದಲಿಸುವ ಆದೇಶಗಳಿಗೆ ಸಹಿ ಹಾಕಿದ್ದಾರೆ ಎಂದು ವರದಿಯಾಗಿದೆ. ಟ್ರಂಪ್ ಆಡಳಿತದಲ್ಲಿ ಹೊರ ಬಂದಿದ್ದ ಕ್ರಮವನ್ನು ರದ್ದು ಮಾಡಿ, ವಿಶ್ವ ಆರೋಗ್ಯ ಸಂಸ್ಥೆ ಮತ್ತು ಪ್ಯಾರೀಸ್ ಒಪ್ಪಂದ ಗಳನ್ನು ಮತ್ತೆ ಸೇರಿಕೊಳ್ಳುವ ಪ್ರಕ್ರಿಯೆ ಆರಂಭಿಸುವ ಆದೇಶ ಹೊರಡಿಸಿದ್ದಾರೆ. ಕೊವಿದ್ ಪರಿಸ್ಥಿತಿಗೆ ವೇಗವಾಗಿ ಸ್ಪಂದಿಸಲು ಮತ್ತು ವ್ಯಾಕ್ಸೀನ್ ವಿತರಣೆ ಸೇರಿದಂತೆ ಎಲ್ಲ ಕೊವಿದ್ ಸಂಬಂಧಿತ ಕೆಲಸಗಳ ಸಂಯೋಜನೆಗೆ ವಿಶೇಷ ಸಂಯೋಜಕರನ್ನು ನೇಮಿಸಿದ್ದಾರೆ. ಫಡರಲ್ ಸರಕಾರದ ಪ್ರದೇಶಗಳಲ್ಲಿ ಮಾಸ್ಕ್ ಕಡ್ಡಾಯಗೊಳಿಸುವ ಆದೇಶ ಸಹ ಹೊರಡಿಸಿದ್ದಾರೆ. ಬಾಡಿಗೆ ಅಥವಾ ಸಾಲ ಕಂತು ಕಟ್ಟದ್ದಕ್ಕೆ ಮನೆಯಿಂದ ಹೊರ ಹಾಕುವುದಕ್ಕೆ ಮಾರ್ಚ್ 31 ರ ವರೆಗೆ ತಡೆಯಾಜ್ಞೆ ನೀಡಿದ್ದಾರೆ. ವಿದ್ಯಾರ್ಥಿಗಳ ಶಿಕ್ಷಣ ಸಾಲದ ಕಂತು ಮತ್ತು ಬಡ್ಡಿ ಕಟ್ಟುವುದಕ್ಕೆ ಮಾಫಿಯನ್ನು ಸೆಪ್ಟೆಂಬರ್ 30 ರ ವರೆಗೆ ಮಾಫಿ ನೀಡಲಾಗಿದೆ. ಏಳು ಮುಸ್ಲಿಂ ದೇಶಗಳವರಿಗೆ ವೀಸಾ ನಿಷೇಧ ಹಿಂತೆಗೆದುಕೊಳ್ಳಲು ಸಹ ಆಜ್ಞೆ ಮಾಡಿದ್ದಾರೆ. ಮೆಕ್ಸಿಕೊ ಗೋಡೆ ಕಟ್ಟುವ ಕೆಲಸಕ್ಕೆ ತಕ್ಷಣ ತಡೆ ಹಾಕಿದ್ದಾರೆ. ಪರಿಸರ ರಕ್ಷಣೆಗೆ ಸಂಭಂಧಿಸಿದ ಕಾನೂನುಗಳಿಂದ ರಿಯಾಯಿತಿ ನೀಡುವ ಮತ್ತು ನಿಬಂಧನೆಗಳನ್ನು ಸಡಿಲಿಸುವ ಅಥವಾ ವಿವಾದಿತ ಪ್ರಾಜೆಕ್ಟುಗಳಿಗೆ ಸಮ್ಮತಿ ನೀಡುವ ಸುಮಾರು 100 ಟ್ರಂಪ್ ನಿರ್ಣಯಗಳನ್ನು ರದ್ದು ಮಾಡಿದ್ದಾರೆ.

ಬ್ರೆಜಿಲ್ ಗೆ ಆಮ್ಲಜನಕ ಟ್ಯಾಂಕುಗಳನ್ನು ಕಳಿಸಿದ ವೆನೆಜುವೆಲಾ

ಬ್ರೆಜಿಲ್ ನ ಅಮೆಜೋನಾಸ್ ರಾಜ್ಯದಲ್ಲಿ ಕಳೆದ ಡಿಸೆಂಬರಿನಿಂದ ಕೋವಿಡ್–19 ಹರಡುವಿಕೆಯ ತೀವ್ರತೆಯಿಂದಾಗಿ, ಪರಿಸ್ಥಿತಿಯು ಹಠಾತ್ತಾಗಿ ಉಲ್ಬಣಗೊಂಡಿತ್ತು. ಅಲ್ಲಿನ ಆರೋಗ್ಯ ವ್ಯವಸ್ಥೆಯು ತೀವ್ರವಾಗಿ ಕುಸಿತಗೊಂಡಿತ್ತು. ಐಸಿಯು ಹಾಸಿಗೆಗಳು ಮತ್ತು ಆಮ್ಲಜನಕದ ಕೊರತೆ ಉಂಟಾಗಿತ್ತು. ಅಮೆಜೊನಾಸ್ ನ ಗವರ್ನರ್ ವಿಲ್ಸನ್ ಲಿಮಾ ರವರ ಕೋರಿಕೆಯ ಮೇರೆಗೆ, ತಕ್ಷಣವೇ ವೆನೆಜುವೆಲಾ ದ ಅಧ್ಯಕ್ಷ ನಿಕೋಲಸ್ ಮಡುರೊ ರವರು, ಅಗತ್ಯವಿದ್ದ ಆಮ್ಲಜನಕದ ಟ್ಯಾಂಕುಗಳನ್ನು ಅಮೆಜೋನಾಸ್ ರಾಜ್ಯಕ್ಕೆ ಕಳುಹಿಸಿ ಕೊಟ್ಟಿದ್ದು, ವೆನೆಜುವೆಲಾ ಜನತೆಯ ಅಂತರಾಷ್ಟ್ರೀಯ ಮಾನವೀಯ ಸೌಹಾರ್ದತೆಯನ್ನು ಮೆರೆಸಿದ್ದಾರೆ. ಇದು ಜಗತ್ತಿನ ಇತರೆ ದೇಶಗಳ ಶ್ಲಾಘನೆಗೆ ಪಾತ್ರವಾಗಿದೆ. ಬ್ರೆಜಿಲ್ ನಲ್ಲಿ ಇತ್ತೀಚೆಗೆ ಬಂದ ಸರಕಾರವು ವೆನೆಜುವೇಲಾ ವನ್ನು ತನ್ನ ವೈರಿಯಂತೆ ನೋಡುತ್ತಿದೆ. ಇದನ್ನು ಲೆಕ್ಕಿಸದೆ ವೆನೆಜುವೆಲಾ ಈ ಸಹಾಯಹಸ್ತ ಚಾಚಿತ್ತು ಎಂಬುದು ಗಮನಾರ್ಹವಾಗಿದೆ.

ಗವರ್ನರ್ ವಿಲ್ಸನ್ ಲಿಮಾ ಅವರ ಪ್ರಕಾರ, ಆಮ್ಲಜನಕದ ಬಳಕೆ ಹಿಂದಿನ ಅತ್ಯಂತ ಹೆಚ್ಚು ಬಳಕೆಯಾಗಿದ್ದ 2020 ರ ಏಪ್ರಿಲ್ ಗಿಂತ ಬಳಕೆ ಜನವರಿ 13ರ ಹೊತ್ತಿಗೆ ಸುಮಾರು 130% ಹೆಚ್ಚಾಗಿದ್ದು, ತೀವ್ರ ಕೊರತೆ ಉಂಟಾಗಿತ್ತು. ಜನವರಿ 14 ರ ರಾತ್ರಿ ಹಂಚಿಕೊಂಡ ರಾಷ್ಟ್ರೀಯ ಆರೋಗ್ಯ ಕಾರ್ಯದರ್ಶಿಗಳ ಮಂಡಳಿಯ (ಕೊನಾಸ್) ಬುಲೆಟಿನ್ ಪ್ರಕಾರ, ಅಮೆಜೊನಾಸ್ ರಾಜ್ಯದಲ್ಲಿ ಜನವರಿ 3 ರಿಂದ 9 ರ ವಾರದಲ್ಲಿ 344 ಸಾವುಗಳು ಆಗಿದ್ದವು.. ಡಿಸೆಂಬರ್ 27 ರಿಂದ ಜನವರಿ 2 ರ ಹಿಂದಿನ ವಾರದಲ್ಲಿ 152 ಸಾವುಗಳು ಆಗಿದ್ದವು. ರೋಗದ ಹೊಸ ಪ್ರಕರಣಗಳ ಸಂಖ್ಯೆಯಲ್ಲಿಯೂ ಹೆಚ್ಚಳವಾಗಿತ್ತು. ಜನವರಿ 3 ರಿಂದ 9 ರವರೆಗೆ, 11,129 ಹೊಸ ಸೋಂಕುಗಳು ಇದ್ದರೆ, ಹಿಂದಿನ ವಾರದಲ್ಲಿ, ಡಿಸೆಂಬರ್ 27 ರಿಂದ ಜನವರಿ 2 ರವರೆಗೆ, 5,930 ಹೊಸ ಸೋಂಕುಗಳು ಆಗಿದ್ದವು.

ಜೈರ್ ಬೋಲ್ಸೊನಾರೊ ಅವರು 2019 ರಲ್ಲಿ ಅಧಿಕಾರ ವಹಿಸಿಕೊಂಡಾಗಿನಿಂದ ವೆನಿಜುವೆಲಾದ ಮೇಲೆ ಆಕ್ರಮಣಕಾರಿ ನೀತಿಯನ್ನು ಅನುಸರಿಸಿಕೊಂಡು ಬಂದಿದ್ದಾರೆ. ಹಾಗೆಯೇ, ಉಭಯ ದೇಶಗಳ ನಡುವೆ ಅಸ್ತಿತ್ವದಲ್ಲಿದ್ದ ಆರ್ಥಿಕ ಮತ್ತು ರಾಜಕೀಯ ಸಹಕಾರದ ಅನೇಕ ಐತಿಹಾಸಿಕ ಸಂಪರ್ಕಗಳನ್ನು ಹಾಳು ಮಾಡಿದ್ದಾರೆ. ಆದಾಗ್ಯೂ, ‘ಮನೌಸ್ ನಲ್ಲಿನ ಸಾರ್ವಜನಿಕ ಆರೋಗ್ಯ ಬಿಕ್ಕಟ್ಟಿನಲ್ಲಿ ಪಾಲ್ಗೊಳ್ಳಿ, ಎಲ್ಲಕ್ಕಿಂತ ಹೆಚ್ಚಾಗಿ ಲ್ಯಾಟಿನ್ ಅಮೆರಿಕನ್ ಐಕಮತ್ಯ ವನ್ನು ಎತ್ತಿಹಿಡಿಯಿರಿ" ಎಂಬ ಮಡುರೊ ರವರ ಟ್ವೀಟ್ ಮಾಡಿದ್ದರು.

JANASHAKTHI KANNADA VARA PATRIKE January 25-31, 2021 Price: Rs. 10/- Date of Publication: 22 January 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ದೆಹಲಿ ರೈತ ಚಳುವಳಿ ನೇರ ಅನುಭವ-3 :

'ಜೈಜವಾನ್ ಜೈಕಿಸಾನ್ ಘೋಷಣೆ'ಗೆ ಅರ್ಥ ಬರಬೇಕಾದರೆ ನಾವು ಈ ರೈತ ಹೋರಾಟದಲ್ಲಿ ಭಾಗಿಯಾಗಬೇಕು

ಭಾರತದ ಸ್ವಾತಂತ್ರ್ಯ ನಂತರದ ಇತಿಹಾಸದಲ್ಲಿ ಇಂತಹ ರೈತ ಚಳುವಳಿಯನ್ನು ದೇಶ ಕಂಡಿಲ್ಲ. ಅದಕ್ಕಾಗಿಯೇ ಇದನ್ನ ಐತಿಹಾಸಿಕ ಚಳುವಳಿ ಎಂದು ಕರೆಯಲಾಗುತ್ತಿದೆ. ಕೇವಲ ಮನವಿ ಪತ್ರಗಳಿಗೆ ಹೋರಾಟಗಳು ಸೀಮಿತವಾಗುತ್ತಿರುವ ಸಂದರ್ಭದಲ್ಲಿ, ಚಳುವಳಿ ಎಂದರೆ ಹೀಗೂ ನಡೆಸಬಹುದೂ ಮತ್ತು ಹೀಗೆ ನಡೆಸಿದರೆ ಮಾತ್ರ ಆಳುವ ವರ್ಗವನ್ನ ಮಣಿಸಲು ಸಾಧ್ಯ ಎಂಬುದನ್ನ ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ.


ಬೆಳಿಗ್ಗೆ ಚಳಿ ಕಾಯಿಸುತ್ತಿರುವುದು

ಶಾಹಜಾನ್ ಪುರ್ ಗಡಿ (16 ಜನವರಿ 2021)

"ದೇಶದ ಅನೇಕ ಸಾರ್ವಜನಿಕ ಕೈಗಾರಿಕೆಗಳನ್ನು ಮಾರಾಟ ಮಾಡಿದಾಗ, ರೈಲು, ವಿಮಾನಯಾನ ಮಾರಾಟ ಮಾಡಿದಾಗ, ಸೇವಾ ವಲಯ, ಆರ್ಥಿಕ ವಲಯ ಮಾರಿದಾಗ ಏನೆಲ್ಲ ಮಾರಿದರೂ ಸಿಟ್ಟು ಬಂದಿಲ್ಲ, ಪ್ರಶ್ನಿಸಿಲ್ಲ. ಈಗ ನಾವಿರುವ ನೆಲವನ್ನ, ನಮ್ಮ ಬದುಕನ್ನೇ ಮಾರಲು ಮೋದಿ ಸರ್ಕಾರ ಹೊರಟಾಗ ಇದನ್ನು ಸಹಿಸಿ ಸುಮ್ಮನಿರಲು ಸಾಧ್ಯವಾಗಲಿಲ್ಲ". ಈ ಮಾತುಗಳನ್ನು ಹೇಳಿದವರು ಬೇರಾರೂ ಅಲ್ಲ "ಜೈ ಜವಾನ್ ಜೈ ಕಿಸಾನ್" ಘೋಷಣೆಯನ್ನ ನಿಜವಾದ ಅರ್ಥದಲ್ಲಿ ಸಾಕಾರಗೊಳಿಸುತ್ತಿರುವ ಪ್ರತಿಭಟನಾ ನಿರತ ಮಾಜಿ ಸೈನಿಕ.

ರಾಜಸ್ಥಾನದ ಸಿಕಾರ್ ಜಿಲ್ಲೆಯ ಅಮರ್ ಜಿತ್ ಸಿಂಗ್ ಸತತ 18 ವರ್ಷಗಳ ಕಾಲ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿಯಾದವರು. ಇವರ ಇಡೀ ಕುಟುಂಬ ಹೆಂಡತಿ, ಎರಡು ಹೆಣ್ಣು ಮಕ್ಕಳು ರೈತರ ಚಳುವಳಿಯ ಜೊತೆ ಸೇರಿಕೊಂಡಿದ್ದಾರೆ. ಪ್ರಸ್ತುತ ದೆಹಲಿ ರಾಜಸ್ಥಾನ್ ಗಡಿಯಾದ ಶಹಜಾನ್ ಪುರ್ ಗಡಿಯಲ್ಲಿ 20 ಕ್ಕೂ ಹೆಚ್ಚು ಮಾಜಿ ಸೈನಿಕರು ಮತ್ತವರ ಕುಟುಂಬ ಪ್ರತಿಭಟನೆಯಲ್ಲಿ ಪ್ರಾರಂಭದಿಂದಲೂ ಭಾಗವಹಿಸುತ್ತಿದ್ದಾರೆ. ಮಾತ್ರವಲ್ಲದೆ ದೇಶದ ಮೂಲೆ ಮೂಲೆಗಳಲ್ಲಿರುವ ಮಾಜಿ ಸೈನಿಕರುಗಳನ್ನು ಸಂಪರ್ಕಿಸಿ ಅವರುಗಳನ್ನು ರೈತರ ಪ್ರತಿಭಟನೆಗಳಲ್ಲಿ ಭಾಗವಹಿಸಲು ಬೇಕಾದ ತಯಾರಿಯನ್ನೂ ಮಾಡುತ್ತಿದ್ದಾರೆ.

ಸ್ವತಃ ಕೃಷಿ ಕುಟುಂಬದಿಂದ ಬಂದಿರುವ ಇವರು ಕೇಂದ್ರದ ಕೃಷಿ ಕಾನೂನುಗಳಿಂದ ಏನೆಲ್ಲ ಅನಾನುಕೂಲಗಳಾಗುತ್ತವೆ ಎನ್ನುವುದನ್ನು ತುಂಬಾ ಚೆನ್ನಾಗಿ ಅರಿತುಕೊಂಡಿದ್ದಾರೆ. ಪ್ರತಿಭಟನೆಗೆ ಮಕ್ಕಳನ್ನೆಲ್ಲ ಏಕೆ ಕರೆತಂದಿದ್ದೀರಿ ಎಂದು ಕೇಳಿದ್ದಕ್ಕೆ ಅವರು ಹೇಳಿದ್ದೇನು ಗೊತ್ತಾ? "ನಾವು ಮಾಡುವ ಕೆಲಸದ ಬಗ್ಗೆ ನಮ್ಮ ಮಕ್ಕಳಿಗೆ ಸರಿಯಾದ ತಿಳುವಳಿಕೆ ಮೂಡಿಸಬೇಕು ಮತ್ತು ನಮ್ಮ ತಂದೆ ಮಾಡುತ್ತಿರುವ ಕೆಲಸದ ಬಗ್ಗೆ ಅವರಿಗೆ ಹೆಮ್ಮೆಯಿರಬೇಕು. ಹಾಗು ಇಂತಹ ಚಳುವಳಿಗಳನ್ನು ಭವಿಷ್ಯದಲ್ಲಿ ಇವರುಗಳೇ ಮುಂದುವರ 'ಸಬೇಕಾಗಿರುವುದರಿಂದ ಈಗಿನಿಂದಲೇ ಇದರಲ್ಲೆಲ್ಲ ಭಾಗವಹಿಸಿ ಕಲಿಯಬೇಕು." ಎಂದರು.

'ನಾವು ಗಡಿಗಳಲ್ಲಿ ದೇಶವನ್ನು ಕಾಯುತ್ತೇವೆ, ರೈತರು ಒಳಗೆ ದೇಶವನ್ನು ಕಾಯುತ್ತಾರೆ. ಅವರೇ ಸಂಕಷ್ಟದಲ್ಲಿರುವಾಗ ನಾವು ಗಡಿಗಳಲ್ಲಿರುವುದು ವ್ಯರ್ಥ. ಆಗ ಜೈ ಜವಾನ್ ಜೈ ಕಿಸಾನ್" ಘೋಷಣೆಗೆ ಯಾವುದೇ ಅರ್ಥ ಇರುವುದಿಲ್ಲ' ಎಂದರು.

ಶಹಜಾನ್ ಪುರ್ ಗಡಿಯಲ್ಲಿ ಇಂದು ಟೆಂಟ್ ಗಳ ಸಂಖ್ಯೆ, ಲಂಗರ್ ಗಳ ಸಂಖ್ಯೆ ಹೆಚ್ಚಾಗಿತ್ತು ಇದಕ್ಕೆ ಮುಖ್ಯ ಕಾರಣ ಈ ಹೋರಾಟದಲ್ಲಿ ದಿನದಿಂದ ದಿನಕ್ಕೆ ರೈತರ ಸಂಖ್ಯೆ ಹೆಚ್ಚಾಗುತ್ತಿದೆ. ಒಂದು ಕಡೆ ರೈತರು ನೇರವಾಗಿ ಕದನ ಕಣದಲ್ಲಿದ್ದರೆ ಮತ್ತೊಂದೆಡೆ ಕಾರ್ಮಿಕರು, ಮಹಿಳೆಯರು, ವಿದ್ಯಾರ್ಥಿಗಳು, ಯುವಜನರು, ಸಾಹಿತಿಗಳು, ಕಲಾವಿದರು ಸಮಾಜದ ಇತರೆ ವಿಭಾಗದ ಜನ ಸಮುದಾಯ ದೊಡ್ಡ ಪ್ರಮಾಣದಲ್ಲಿ ಬೆಂಬಲವನ್ನು ವ್ಯಕ್ತಪಡಿಸುತ್ತಿರುವುದನ್ನ ಕಾಣಬಹುದು.

ಬಹುತೇಕರು ಮಾತನಾಡುವ ಹಾಗೆ ಮತ್ತು ಇಲ್ಲಿ ಖುದ್ದು ಕಣ್ಣಾರೆ ನೋಡಿದ ಮೇಲಂತೂ ನನಗೆ ಮನವರಿಕೆಯಾದ ವಿಷಯವೆಂದರೆ ಭಾರತದ ಸ್ವಾತಂತ್ರ್ಯ ನಂತರದ ಇತಿಹಾಸದಲ್ಲಿ ಇಂತಹ ರೈತ ಚಳುವಳಿಯನ್ನು ದೇಶ ಕಂಡಿಲ್ಲ. ಅದಕ್ಕಾಗಿಯೇ ಇದನ್ನ ಐತಿಹಾಸಿಕ ಚಳುವಳಿ ಎಂದು ಕರೆಯಲಾಗುತ್ತಿದೆ. ಕೇವಲ ಮನವಿ ಪತ್ರಗಳಿಗೆ ಹೋರಾಟಗಳು ಸೀಮಿತವಾಗುತ್ತಿರುವ ಸಂದರ್ಭದಲ್ಲಿ, ಚಳುವಳಿ ಎಂದರೆ ಹೀಗೂ ನಡೆಸಬಹುದೂ ಮತ್ತು ಹೀಗೆ ನಡೆಸಿದರೆ ಮಾತ್ರ ಆಳುವ ವರ್ಗವನ್ನ ಮಣಿಸಲು ಸಾಧ್ಯ ಎಂಬುದನ್ನ ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ. ಆದರೆ ಈ ಚಳುವಳಿ ದೇಶಾದ್ಯಂತ ಮಾಧ್ಯಮಗಳಲ್ಲಿ ಪಡೆದುಕೊಳ್ಳಬೇಕಾದ ಸ್ಥಾನವನ್ನು ಪಡೆದುಕೊಳ್ಳುತ್ತಿಲ್ಲ. ಮಾಧ್ಯಮಗಳು ಒಂದು ರೀತಿ ಸರ್ಕಾರದ ರೀತಿಯ ಧೋರಣೆಯನ್ನು ತಾಳುತ್ತಿವೆ. ಅವು ತನ್ನ ವಿರೋಧ ಪಕ್ಷದ ಕೆಲಸವನ್ನು ಸಂಪೂರ್ಣ ಮರೆತಿವೆ ಎಂದು ಚಳುವಳಿಯಲ್ಲಿರುವ ರೈತರು ಮಾತನಾಡಿಕೊಳ್ಳುತ್ತಿದ್ದಾರೆ.

ಪ್ರತಿಭಟನಾ ಕಣದಲ್ಲಿನ ಇಡೀ ದಿನದ ದಿನಚರಿಯಿದೆಯಲ್ಲ, ಅದೇ ಒಂದು ರೀತಿಯ ವಿಶೇಷವಾಗಿರುತ್ತದೆ. ಬೆಳಿಗ್ಗೆ 6 ಗಂಟೆ ಸುಮಾರಿಗೆ ಆ ಕೊರೆವ ಚಳಿಯಲ್ಲಿ (3–4 ಡಿಗ್ರಿ) ಪ್ರತೀ ಟೆಂಟಿಗೂ ಹಿಂದಿನ ದಿನದ ಸುದ್ದಿಗಳು, ಬೆಳವಣಿಗೆಗಳು ಮತ್ತು ಇಡೀ ಚಳುವಳಿಗೆ ನೇತೃತ್ವ ನೀಡಿರುವ 500 ಹೆಚ್ಚು ಸಂಘಟನೆಗಳ ವಿಶಾಲ ವೇದಿಕೆ 'ಸಂಯುಕ್ತ ಕಿಸಾನ್ ಮೋರ್ಚಾ'ದ ತೀರ್ಮಾನಗಳ ಕುರಿತು ಪತ್ರಿಕೆಯೊಂದು ಬರುತ್ತದೆ. ಅದೇ ಬೆಳಗಿನ ಅಲರಾಮ್. ಈ ಪತ್ರಿಕೆಯನ್ನು ಹಿಂದಿ ಮತ್ತು ಇಂಗ್ಲಿಷ್ ನಲ್ಲಿ ಮುದ್ರಿಸಲಾಗಿದೆ.

ಈ ಪತ್ರಿಕೆಯನ್ನು ಹಿಡಿದು ಟೆಂಟ್ ನ ಮುಂದಿರುವ ಬೆಂಕಿಯ ಸುತ್ತಲೂ 5–6 ಜನ ಕುಳಿತುಕೊಂಡು ಪತ್ರಿಕೆಯನ್ನು ಓದುತ್ತ, ಹುಕ್ಕ ಸೇದುತ್ತ ಉರಿವ ಬೆಂಕಿಯ ಎದುರು ಸುದ್ದಿಯನ್ನು ಓದುತ್ತಾ ಬಿಸಿ ಬಿಸಿ ಚರ್ಚೆಗಳನ್ನ ನಡೆಸುತ್ತಾರೆ. ಇದು ಸುಮಾರು ಎರಡು ಮೂರು ಗಂಟೆಗಳು ನಡೆಯುತ್ತದೆ ನಂತರ ಪ್ರತಿಭಟನಾ ಸ್ಥಳಗಳಲ್ಲಿ ನಿರ್ಮಿಸಿರುವ ಮೊಬೈಲ್ ಟಾಯ್ಲೆಟ್ ಗಳಲ್ಲಿ ನಿತ್ಯ ಕರ್ಮಗಳನ್ನು ಮುಗಿಸಿ ಲಂಗರ್ ಗಳ ಕಡೆಗೆ ಧಾವಿಸುತ್ತಾರೆ. ಅಲ್ಲಿ ಚಹಾ, ಬಿಸ್ಕೆಟ್, ರಸ್ಕ್, ವಿವಿಧ ಬಗೆಯ ಪಾಯಸಗಳನ್ನು ಕೊಡಲಾಗುತ್ತದೆ. ಈ ಭಾಗದ ಜನ ಬೆಳಗಿನ ತಿಂಡಿ ಎಂದು ಪ್ರತ್ಯೇಕವಾಗಿ ಮಾಡುವ ಅಭ್ಯಾಸ ವಿದ್ದಂತಿಲ್ಲ. ನಂತರ 11 ಗಂಟೆಯಷ್ಟರಲ್ಲಿ ಪ್ರಧಾನ ವೇದಿಕೆಯ ಮೈಕ್ ಮೂಲಕ ಎಲ್ಲರನ್ನು ಸ್ವಾಗತಿಸಲಾಗುತ್ತದೆ ಎಲ್ಲರೂ ವೇದಿಕೆಗಳತ್ತ ತೆರಳುತ್ತಾರೆ. ಅಲ್ಲಿ ಬೆಳಿಗ್ಗೆ ಆರಂಭವಾದ ಭಾಷಣಗಳು ಇಡೀ ದಿನ ಬಿಡುವಿಲ್ಲದಂತೆ ನಡೆಯುತ್ತವೆ. ಸಂಘಟನೆಯ ಪ್ರಮುಖರೊಬ್ಬರು ಹಿಂದಿನ ದಿನದ ಎಲ್ಲ ಬೆಳವಣಿಗೆಗಳನ್ನು ವರದಿ ಮಾಡುತ್ತಾರೆ. ವಿವಿಧ ಸಂಘಟನೆಗಳ ಮುಖಂಡರುಗಳು ಬಂದು ಬೆಂಬಲ ಸೂಚಿಸಿ ಮಾತನಾಡುತ್ತಾರೆ.

12 ಗಂಟೆಗೆ ಲಂಗರ್ ಗಳಲ್ಲಿ ಊಟ ಪ್ರಾರಂಭವಾದರೆ ಅದು ರಾತ್ರಿ 11 ರ ವರೆಗೆ ನಡೆಯುತ್ತದೆ. ಈ ಮಧ್ಯೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ರಾತ್ರಿ ಮಲಗುವ ಮುನ್ನ ಟೆಂಟ್ ನ ಮುಂದಿರುವ ಬೆಂಕಿಯ ಸುತ್ತ ನಿಂತುಕೊಂಡು ತಮ್ಮ ಟ್ರ್ಯಾಕ್ಟರ್ ಗಳಲ್ಲಿರುವ ಸ್ಪೀಕರ್ ಗಳಲ್ಲಿ ಚಳುವಳಿಗಾಗಿ ರಚನೆಯಾಗಿರುವ ಮೋದಿ ವಿರೋಧಿ ಹಾಡುಗಳಿಗೆ ನೃತ್ಯ ಮಾಡುತ್ತಾ ದಿನ ಕಳೆಯುತ್ತಾರೆ. ಪ್ರತಿ ದಿನ ಒಂದೊಂದು ವಿಶೇಷ ಕಾರ್ಯಕ್ರಮಗಳಿರುತ್ತವೆ. ನೆನ್ನೆ ಪಂಜಿನ ಮೆರವಣಿಗೆ ಇಂದು ಮಾನವ ಸರಪಳಿ ಹೀಗೆ.. .. ಜೊತೆಗೆ ಇಲ್ಲಿ ಸರದಿ ಪ್ರಕಾರ ಒಂದೊಂದು ದಿನ ಒಂದೊಂದು ಸಂಘಟನೆಯ ರೈತರು ಉಪವಾಸ ಸತ್ಯಗ್ರಹವನ್ನು ನಡೆಸುತ್ತಾರೆ.

ಪ್ರತಿಭಟನೆಯಲ್ಲಿ ಭಾಗವಹಿಸಿರುವ ವಿವಿಧ ರಾಜ್ಯಗಳು ಪರಸ್ಪರ ವಿಚಾರ ವಿನಿಮಯ ಮಾಡಿಕೊಳುವುದದನ್ನ ನೋಡಿದರೆ ಭಾರತ ಒಂದೇ ಮನೆಯಂತ ಭಾಸವಾಗುತ್ತದೆ.


ಇಂದಿನ ಇಲ್ಲಿನ ಮಾನವ ಸರಪಣಿ

ಇದು ಶಹಜಾನ್ ಪುರ್ ಗಡಿಯಲ್ಲಿನ ಬೆಳವಣಿಗೆ.

ಇನ್ನೊಂದು ಪ್ರಮುಖ ಅಂಶವನ್ನು ನಿಮ್ಮ ಗಮನಕ್ಕೆ ತರಬೇಕು. ಈ ಪ್ರತಿಭಟನಾ ಸ್ಥಳಗಳಲ್ಲಿ ಸಾಮಾನ್ಯ ರೈತರು ಮತ್ತು ಸಂಘಟನೆಗಳ ಕಾರ್ಯಕರ್ತರು ಮಾತ್ರ ಟೆಂಟ್ ಗಳಲ್ಲಿ ಹಗಲು ರಾತ್ರಿ ಉಳಿಯುವುದಲ್ಲ. ಬದಲಾಗಿ ಜವಾಬ್ದಾರಿಯಿರುವ ಸಂಘಟನೆಗಳ ಎಲ್ಲಾ ಮುಖಂಡರೂ ಇಲ್ಲಿಯೇ ಠಿಕಾಣಿ ಹೂಡಿದ್ದಾರೆ. ರಾಜ್ಯಸಭಾ ಸದಸ್ಯರು AIKS ನ ಜಂಟಿ ಕಾರ್ಯದರ್ಶಿ ಕೆ.ಕೆ. ರಾಘೇಶ್, ಕಿಸಾನ್ ಸಭಾದ ಮಾಜಿ ರಾಷ್ಟ್ರಾಧ್ಯಕ್ಷ ಮತ್ತು ಮಾಜಿ ಲೋಕಸಭಾ ಸದಸ್ಯರಾದ ಅಮರಾರಾಮ್, ಸ್ವರಾಜ್ ಇಂಡಿಯಾದ ಯೋಗೇಂದ್ರ ಯಾದವ್ – ಹೀಗೆ ಹತ್ತು ಹಲವು ಮುಖಂಡರು ಎಲ್ಲರ ಜೊತೆಯಲ್ಲಿ ಬೆರೆತು ಎಲ್ಲರಂತೆಯೇ ಬದುಕುತ್ತಿದ್ದಾರೆ. ಇದೂ ಕೂಡ ಹೋರಾಟದ ಇನ್ನೊಂದು ಶಕ್ತಿ ಎಂದು ಹೇಳಿದರೆ ತಪ್ಪಾಗಲಾರದು.

ಈ ರೀತಿ ವ್ಯವಸ್ಥಿತವಾಗಿ ಚಳುವಳಿಯನ್ನು ಮುನ್ನಡೆಸುತ್ತಿರುವುದರಿಂದ ಪ್ರತಿಭಟನಾಕಾರರು ಸುಳ್ಳು ಸುದ್ದಿಗಳನ್ನು ಬಿತ್ತರಿಸುವ ಟಿವಿಗಳನ್ನು ನೋಡದಿರುವುದರಿಂದ ಅಪಪ್ರಚಾರಗಳಿಗೂ ಈ ಚಳುವಳಿಯನ್ನು ಮುರಿಯಲು ಅವಕಾಶವನ್ನು ಕೊಟ್ಟಿಲ್ಲ. ಇಲ್ಲಿ ಭಾಗವಹಿಸುವವರ ಬದ್ಧತೆ, ಏನನ್ನಾದರೂ ಸಾಧಿಸಿ ತೋರಿಸಬೇಕೆಂಬ ಛಲ ನಿಜಕ್ಕೂ ಎಂತಹವರಿಗೂ ಸ್ಫೂರ್ತಿ ನೀಡುತ್ತದೆ.


ಟೆಂಟ್ ನಲ್ಲಿ


ಹೆದ್ದಾರಿ ಸ್ನಾನ


ಮಾಜಿ ಸೈನಿಕ ಅಮರ್ ಜಿತ್ ಸಿಂಗ್

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**